ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು - ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

## ಇತಿಹಾಸ

### ಎಂ.ಎ. (ಪ್ರಥಮ)

# HISTORY OF SOUTH INDIA



**ಕೋರ್ಸ್ - 1** **ಬ್ಲಾಕ್ - 3**

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 1

# ಬ್ಲಾಕ್
# 3


| | |
|---|---|
| ಘಟಕ - 8<br>ತಲಕಾಡಿನ ಗಂಗರು - ರಾಜಕೀಯ ಇತಿಹಾಸ | 1 |
| ಘಟಕ - 9<br>ಗಂಗರ ಕಾಲದ ಸಮಾಜ ಮತ್ತು ಸಂಸ್ಕೃತಿ | 13 |
| ಘಟಕ - 10<br>ಬಾದಾಮಿ ಚಾಳುಕ್ಯರು - ರಾಜಕೀಯಇತಿಹಾಸ | 23 |
| ಘಟಕ - 11<br>ಬಾದಾಮಿ ಚಾಳುಕ್ಯರು - ಸಾಮಾಜಿಕ ಪರಿಸ್ಥಿತಿ ಮತ್ತು ಸಾಂಸ್ಕೃತಿಕ ಕೊಡುಗೆಗಳು | 33 |

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

*ವಿಷಯ ಸಂಯೋಜಕರು*

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

## ಪಠ್ಯಕ್ರಮ ನಿರೂಪಕರು

1. *ಘಟಕ ಬರೆದವರು* — ಘಟಕಗಳು **8** ರಿಂದ **11**

ಡಾ. ಮಾದೇಗೌಡ
ಇತಿಹಾಸ ಪ್ರಾಧ್ಯಾಪಕರು,
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ೨೦೧೩

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಎಂ. ಎ. ಪ್ರಥಮ

# ಇತಿಹಾಸ

# ಬ್ಲಾಕ್ -3

**ಪೀಠಿಕೆ**

ಬ್ಲಾಕ್ 3 ಒಟ್ಟು ನಾಲ್ಕು ಘಟಕಗಳನ್ನು ಒಳಗೊಂಡಿದೆ. ಇವು 8 ರಿಂದ 11 ಘಟಕಗಳಾಗಿದೆ. 8 ಮತ್ತು 9 ಘಟಕಗಳು ತಲಕಾಡಿನ ಗಂಗರಾಜಕೀಯ ಮತ್ತು ಸಮಾಜ ಮತ್ತು ಸಂಸ್ಕೃತಿಯ ವಿಷಯಗಳನ್ನು ಕುರಿತು ನಿಮಗೆ ಐತಿಹಾಸಿಕ ಮಾಹಿತಿಗಳನ್ನು ಒದಗಿಸಿಕೊಡುತ್ತವೆ. ಹಾಗೆಯೇ 10 ಮತ್ತು 11 ಘಟಕಗಳು ಬಾದಾಮಿ ಚಾಳುಕ್ಯರ ರಾಜಕೀಯ ಇತಿಹಾಸ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆ ಬಗೆಗೆ ನಿಮಗೆ ವಿವರಣೆಗಳನ್ನು ನೀಡುತ್ತವೆ.

**ಅಧ್ಯಕ್ಷರು,**
**ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,**
**ಮಾನಸ ಗಂಗೋತ್ರಿ, ಮೈಸೂರು.**

# ಬ್ಲಾಕ್ - 3

## ಘಟಕ - 8

# ತಲಕಾಡಿನ ಗಂಗರು - ರಾಜಕೀಯ ಇತಿಹಾಸ

ವಿಷಯ ಕ್ರಮ


**8.0** ಘಟಕದ ಉದ್ದೇಶ

**8.1** ಪೀಠಿಕೆ

**8.2** ಹಿನ್ನೆಲೆ - ಮೂಲ

**8.3** ಗಂಗರ ಆರಂಭದ ರಾಜಕೀಯ ಇತಿಹಾಸ

**8.4** ಗಂಗರ ರಾಜಕೀಯ ಇತಿಹಾಸ - ದುರ್ವಿನೀತನಿಂದ ಶ್ರೀಪುರುಷನವರೆಗೆ

**8.5** ಗಂಗರ ರಾಜಕೀಯ ಇತಿಹಾಸ - ಕೊನೆಯ ಗಂಗ ರಾಜರು, ಎರಡನೇ ಶಿವಮಾರನಿಂದ ರಕ್ಕಸ ಗಂಗನವರೆಗೆ

**8.6** ಸಾರಾಂಶ

**8.7** ಸ್ವಪರೀಕ್ಷೆ ಪ್ರಶ್ನೆಗಳು

**8.8** ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 8.0 ಘಟಕದ ಉದ್ದೇಶ

ಗಂಗರ ಸುಮಾರು 700 ವರ್ಷಗಳ ಧೀರ್ಘ ರಾಜಕೀಯ ಇತಿಹಾಸವನ್ನು ಪರಿಚಯಿಸಿ ಕೊಡುವುದು ಈ ಘಟಕದ ಉದ್ದೇಶ. ಈ ಪಾಠವನ್ನು ಅಭ್ಯಸಿಸಿದ ಮೇಲೆ ಈ ಕೆಳಗಿನ ಅಂಶಗಳನ್ನು ನೀವು ಕಲಿಯುವಿರಿ.

* ಗಂಗರ ರಾಜಕೀಯ ಉದಯ ಬಗೆಗೆ ಮತ್ತು ಅವರ ಮೂಲದ ಬಗೆಗೆ ಇರುವ ವಿಭಿನ್ನ ಅಭಿಪ್ರಾಯಗಳನ್ನು ಗಮನಿಸುವಿರಿ

* ಗಂಗರ ಆರಂಭದ ರಾಜಕೀಯ ಇತಿಹಾಸದಲ್ಲಿ ಸುಮಾರು ಆರು ಮಂದಿ ಗಂಗರಸರ ಪಾತ್ರ ಮತ್ತು ಅವರ ಸಾಧನೆಯನ್ನು ತಿಳಿಯುವಿರಿ.

* ಇವರ ರಾಜಕೀಯ ಇತಿಹಾಸದ ಎರಡನೆ ಹಂತದಲ್ಲಿ ದುರ್ವಿನೀತನಿಂದ ಶ್ರೀಪುರುಷನವರೆಗೆ ಗಂಗರಸರ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಅರಿಯುವಿರಿ. ಇವರ ರಾಜಕೀಯ ಇತಿಹಾಸದ ಕೊನೆಯ ಭಾಗದಲ್ಲಿ ಎರಡನೇ ಶಿವಮಾರನಿಂದ ರಕ್ಕಸಗಂಗನವರೆಗೆ ಇವರ ರಾಜಕೀಯ ಏಳು ಬೀಳುಗಳನ್ನು ಕಲಿಯುವಿರಿ.

## 8.1 ಪೀಠಿಕೆ

ದಕ್ಷಿಣ ಭಾರತದ ಸುಪ್ರಸಿದ್ಧ ಮನೆತನಗಳಲ್ಲಿ ಗಂಗ ಸಂತತಿಯೂ ಒಂದು. ಈ ಮನೆತನ ಕ್ರಿ.ಶ. ನಾಲ್ಕನೇ ಶತಮಾನ ಮಧ್ಯಭಾಗದಿಂದ ಕ್ರಿ.ಶ. 11ನೇ ಶತಮಾನ ಪೂರ್ವಾರ್ಧದವರೆಗೂ ಅತಿ ಧೀರ್ಘ ಕಾಲ ಆಳ್ವಿಕೆ ನಡೆಸಿತು. ಇವರಿಗೆ ಪಶ್ಚಿಮ ಗಂಗರೆಂದೂ ಹೆಸರಿದೆ. ಇವರ ರಾಜ್ಯವನ್ನು ಗಂಗವಾಡಿ - 96,000 ಎಂದು ಶಾಸನದಲ್ಲಿ ನಿರ್ದೇಶಿಸಲಾಗಿದೆ. ಇವರ ಶಾಸನಗಳು ಕೊಡಗು ಜಿಲ್ಲೆಯಿಂದ ಉತ್ತರ ಆರ್ಕಾಟ್ ಜಿಲ್ಲೆಯವರೆಗೂ, ಬಳ್ಳಾರಿ ಜಿಲ್ಲೆಯಿಂದ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳ ಪ್ರದೇಶದಲ್ಲಿ ದೊರೆತಿವೆ. ಮೈಸೂರು ಜಿಲ್ಲೆಯ ತಲಕಾಡು ಇವರ ಮುಖ್ಯ ರಾಜಧಾನಿಯಾಗಿತ್ತು. ಈ ಸಂತತಿಯ ಸುಮಾರು ಮೂವತ್ತು ಮಂದಿ ರಾಜರು ಆಳ್ವಿಕೆ ನಡೆಸಿದರು. ತಮ್ಮ ಸುಧೀರ್ಘ ಆಳ್ವಿಕೆಯ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಆಳಿದ ರಾಜಮನೆತನಗಳಾದ ಪಲ್ಲವ, ಕದಂಬ, ಬಾದಾಮಿ ಚಲುಕ್ಯ, ರಾಷ್ಟ್ರಕೂಟ ಮತ್ತು ಚೋಳ ರಾಜಮನೆತನಗಳೊಡನೆ ರಾಜಕೀಯ ಸಂಬಂಧ ಮತ್ತು ಹಲವು ವೇಳೆ ರಕ್ತ ಸಂಬಂಧವನ್ನು ಹೊಂದಿದ್ದರು. ಗಂಗರ ಇತಿಹಾಸ ರಚನೆಗೆ ಸಾಹಿತ್ಯ ಮತ್ತು ಪ್ರಾಕ್ತನ ಆಧಾರಗಳು ಲಭ್ಯವಾಗಿವೆ. ಗಂಗರ ತಾಮ್ರ ಶಾಸನಗಳಲ್ಲಿ ಅದರಲ್ಲೂ ದಾನ ಶಾಸನಗಳಿಗೆ ಸಂಬಂಧಿಸಿದಂತೆ ಕೆಲವು ಕೂಟ (ಖೋಟ) ಶಾಸನಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಗಂಗರ ವಂಶಾವಳಿ ಮತ್ತು ರಾಜರ ಆಳ್ವಿಕೆಯ ಕಾಲಗಣನೆಗೆ ಶಾಸನಗಳೇ ಮುಖ್ಯ ಆಧಾರಗಳಾಗಿವೆ. ಇವರ ರಾಜಕೀಯ ಇತಿಹಾಸವನ್ನು ಆರಂಭ ಕಾಲದ ರಾಜರು; ದೃರ್ವಿನೀತನಿಂದ ಶ್ರೀಪುರುಷನವರೆಗೆ ಮತ್ತು ಕೊನೆಯ ಗಂಗರಸರು - 2ನೇ ಶಿವಮಾರನಿಂದ ರಕ್ಕಸ ಗಂಗನವರೆಗೆ ವಿಭಾಗಿಸಿ ಅಭ್ಯಾಸಿಸಬಹುದು.

## 8.2 ಹಿನ್ನಲೆ - ಮೂಲ

ಗಂಗರ ಮೂಲಕ್ಕೆ ಸಂಬಂಧಿಸಿದಂತೆ ಅನೇಕ ಜಿಜ್ಞಾಸೆಗಳಿವೆ. ಈ ಸಂತತಿಯ ಪ್ರಾರಂಭದ ರಾಜರ ಶಾಸನಗಳಲ್ಲಿ ಗಂಗರ ಮೂಲಕ್ಕೆ ಸಂಬಂಧಿಸಿದ ವಿವರಗಳು ಕಾಣಬರುವುದಿಲ್ಲ. ಆದರೆ ಶತಮಾನಗಳ ತರುವಾಯದ ಹಾಗೂ 10 ಮತ್ತು 11ನೇ ಶತಮಾನದಲ್ಲಿ ಸ್ಥಾಪಿತವಾದ ಶಾಸನಗಳಲ್ಲಿ ಗಂಗರ ಮೂಲಕ್ಕೆ ಸಂಬಂಧಿಸಿದಂತೆ ಪೌರಾಣಿಕ ಮತ್ತು ನಂಬಲಸಾಧ್ಯವಾದ ವಿಭಿನ್ನ ವರ್ಣನೆಗಳಿವೆ. ಇಂತಹ ಕಾಲ್ಪನಿಕ ವರ್ಣನೆಗಳು ಹನ್ನೊಂದು ಮತ್ತು ಹನ್ನೆರಡನೇ ಶತಮಾನಗಳಲ್ಲಿ ಕರ್ನಾಟಕ ಮತ್ತು ದಕ್ಷಿಣ ಭಾರತದಲ್ಲಿ ಆಳುತ್ತಿದ್ದ ಎಲ್ಲಾ ರಾಜಮನೆತನಗಳನ್ನು ಕುರಿತು ಪ್ರಚಾರಕ್ಕೆ ಬಂದವು. ಒಂದು ಪ್ರಚಲಿತ ವರ್ಣನೆ ಪ್ರಕಾರ ಗಂಗ ರಾಜ್ಯ ಸ್ಥಾಪಕ ಅಯೋಧ್ಯೆಯಿಂದ ಬಂದವನೆಂದೂ,

ಇಕ್ಷ್ವಾಕು ವಂಶಕ್ಕೆ ಸೇರಿದವನೆಂದೂ ವರ್ಣಿಸಲಾಗಿದೆ. ಗಂಗ ಎಂಬ ಹೆಸರು ಬರಲು ಸಹ ಗಂಗಾ ನದಿಗೆ ಸಂಬಂಧಿಸಿದಂತೆ ಅವಾಸ್ತವಿಕವಾದ ಕಥೆಗಳಿಂದ ಕೂಡಿದೆ. ಅಲೌಕಿಕ ಉತ್ಪ್ರೇಕ್ಷೆಗಳಿಂದ ಕೂಡಿದೆ. ಈ ವರ್ಣನೆ ಗಂಗ ಸಂತತಿಯ ಆಳ್ವಿಕೆಯ ಕೊನೆಯಲ್ಲಿ ಪ್ರಚಾರಕ್ಕೆ ಬಂದಿತು. ಆದುದರಿಂದ ಇದು ಸತ್ಯಕ್ಕೆ ದೂರವೆಂದು ಕೈಬಿಡಲಾಗಿದೆ.

ಎರಡನೆಯದಾಗಿ, ಈ ಸಂತತಿಯು ಜೈನಮುನಿ ಸಿಂಹನಂದಿ ಮತ್ತು ಪದ್ಮಾವತಿ ದೇವಿಯ ಕೃಪೆಯಿಂದ ಸ್ಥಾಪಿತವಾಯಿತೆಂದು ಹಲವು ಶಾಸನಗಳಲ್ಲಿ ವರ್ಣಿಸಲಾಗಿದೆ. ಕ್ರಿ.ಶ. 963ರ ಸುಮಾರಿನ ಮಾರಸಿಂಹನ ಕುಡಲೂರು ಶಾಸನಗಳಲ್ಲಿ ಈ ವರ್ಣನೆಯು ಕಾಣಬರುತ್ತದೆ. ಇದರ ಪ್ರಕಾರ ಗಂಗ ರಾಜ್ಯ ಸ್ಥಾಪಕರಾದ ಧಡಿಗ ಮತ್ತು ಮಾಧವ ಎಂಬ ಸಹೋದರರು ಉತ್ತರದಿಂದ ದಕ್ಷಿಣಕ್ಕೆ ಬಂದವರು. ಇವರು ಸಿಂಹನಂದಿ ಎಂಬ ಜೈನ ಮುನಿಯನ್ನು ತಮಿಳುನಾಡಿನ ಪೆರೂರು ಎಂಬಲ್ಲಿ ಸಂಧಿಸಿ, ಅವರಿಂದ ಆಶೀರ್ವಾದ ಪಡೆದು ರಾಜ್ಯ ಸ್ಥಾಪಿಸಿದರೆಂದು ವರ್ಣಿಸಲಾಗಿದೆ. ಈ ಹೇಳಿಕೆಯನ್ನು ಕಾಲ್ಪನಿಕ ಕಥೆಯೆಂದು ಪರಿಗಣಿಸಲಾಗಿದೆ. ಸಮಕಾಲೀನ ಮತ್ತಾವ ಶಾಸನಗಳಲ್ಲೂ ಈ ವರ್ಣನೆ ಕಂಡು ಬರುವುದಿಲ್ಲ. ಆರಂಭದ ಗಂಗ ಅರಸರು ವೈದಿಕ ಮತಾವಲಂಬಿಯಾಗಿದ್ದು ಅನೇಕ ಯಜ್ಞಯಾಗಗಳನ್ನು ನೆರವೇರಿಸಿದ್ದರು. ಮಿಗಿಲಾಗಿ ಜೈನ ಧರ್ಮದ ಗ್ರಂಥಗಳ ಪ್ರಕಾರ ಸಿಂಹನಂದಿ ಎಂಬ ಹೆಸರಿನ ಆಚಾರ್ಯನು 7ನೇ ಶತಮಾನದ ಕೊನೆಯವರೆಗೂ ಇರಲಿಲ್ಲ. ಈ ಸಂತತಿಯ ರಾಜರು 9 ನೇ ಶತಮಾನದ ಪ್ರಾರಂಭದಿಂದ ಜೈನ ಧರ್ಮವನ್ನು ಸ್ವೀಕರಿಸಿದರು. ಅನಂತರ ಆಳಿದ ರಾಜರ ಕಾಲದಲ್ಲಿ ಮೇಲ್ಕಂಡ ವರ್ಣನೆಗಳು ಆರಂಭವಾದವು. ಸಿಂಹನಂದಿ ಜೈನಮುನಿಗೂ ಗಂಗರ ರಾಜ್ಯ ಸ್ಥಾಪನೆಗೂ ಯಾವ ಸಂಬಂಧವಿಲ್ಲ. ಆದುದರಿಂದ ಈ ಎರಡನೆ ಪ್ರಚಲಿತ ಅಭಿಪ್ರಾಯವೂ ಸತ್ಯಕ್ಕೆ ದೂರವಾಗಿದೆ ಎಂದು ಪರಿಗಣಿಸಲಾಗಿದೆ.

ಮತ್ತೊಂದು ಪ್ರಚಲಿತ ವರ್ಣನೆ ಪ್ರಕಾರ ಗಂಗರು ಕಣ್ವ ಗೋತ್ರಕ್ಕೆ ಸೇರಿದವರೆಂದೂ ಹಾಗೂ ಶ್ರೀಕೃಷ್ಣನಿಂದ ಪುನೀತವಾದ ಯದುವಂಶಕ್ಕೆ ಸೇರಿದವರೆಂದು ಒಂದೆರಡು ಶಾಸನಗಳಲ್ಲಿ ಹೆಸರಿಸಲಾಗಿದೆ. ಇಂತಹ ಹೇಳಿಕೆಗಳೂ ಸಹ ಅನಂತರದ ಆಸ್ಥಾನ ವಿದ್ವಾಂಸರ ಚಮತ್ಕಾರದಿಂದ ಮೂಡಿ ಬಂದುದವೇ ಹೊರತು ನಿಜ ಸಂಗತಿಯನ್ನು ತಿಳಿಸುವುದಿಲ್ಲ. ಈ ಅಭಿಪ್ರಾಯವು ಕೊಯಮತ್ತೂರಿನ ಪೆರೂರು ಎಂಬ ಪ್ರದೇಶದಿಂದ ಗಂಗ ಸಂತತಿಯವರು ಬಂದಿರಬಹುದೆಂದು ತಿಳಿದಿದೆ. ಗಂಗರ ಬಹುತೇಕ ಶಾಸನಗಳು ಮತ್ತು ಇತರೆ ಯಾವ ಆಧಾರದಿಂದಲೂ ಇವರು ಕರ್ನಾಟಕದ ಹೊರಗಡೆಯಿಂದ ಬಂದವರೆಂದು ಹೇಳಲು ಬರುವುದಿಲ್ಲ.

ಈ ಮೇಲ್ಕಂಡ ಎಲ್ಲಾ ಹೇಳಿಕೆಗಳನ್ನು ಪರಿಶೀಲಿಸಿದ ನಂತರ, ಬಿ.ಎಲ್. ರೈಸ್, ಎಂ.ವಿ. ಕೃಷ್ಣರಾವ್ ಮತ್ತು ಬಿ. ಷೇಕ್ ಅಲಿ ಮೊದಲಾದ ವಿದ್ವಾಂಸರು ಗಂಗರಾಜ್ಯ ಸ್ಥಾಪಕರು ಕನ್ನಡನಾಡಿನ ನಿವಾಸಿಗಳೆಂದೂ, ಇವರು ಬಹುಮಟ್ಟಿಗೆ ಇಂದು ಗಂಗಡಿಕಾರ ಎಂದು ಕರೆಯಲಾಗಿರುವ ಕೃಷಿ ಪಂಗಡಕ್ಕೆ ಸೇರಿದವರಾಗಿರಬೇಕೆಂದೂ, ಆದುದ್ದರಿಂದಲೆ ಇವರ ರಾಜ್ಯಕ್ಕೆ ಗಂಗವಾಡಿ ಎಂದು ಹೆಸರಾಯಿತೆಂದು ಅಭಿಪ್ರಾಯ ಪಟ್ಟಿದ್ದಾರೆ. ಮೂಲತಃ ರಾಜ್ಯ ಸ್ಥಾಪಿಸಿದ ವ್ಯಕ್ತಿಗಳು ತಮ್ಮ ಶಾಸನಗಳಲ್ಲಿ ಎಲ್ಲಿಯೂ ತಮ್ಮ ಕುಲಗೋತ್ರಗಳನ್ನು ಹೇಳಿಕೊಂಡಿಲ್ಲ. ಅನಂತರದ ರಾಜರ ಕಾಲದಲ್ಲಿ ಆಸ್ಥಾನ ವಿದ್ವಾಂಸರು ಚಂದ್ರವಂಶದೊಡನೆಯೋ ಅಥವಾ ಸೂರ್ಯವಂಶದೊಡನೆಯೋ ಕಲ್ಪಿಸಿಕೊಟ್ಟ ಸಂಬಂಧ ಹೇಳಿಕೊಂಡಿರುವುದು ಸರ್ವೆ ಸಾಮಾನ್ಯವಾಗಿ ಕಾಣಬರುವ ನಿರೂಪಣೆಯಾಗಿದೆ.

ಗಂಗರ ಮೂಲದ ಜೊತೆಗೆ ಇವರು ಪ್ರಾರಂಭದಲ್ಲಿ ರಾಜ್ಯ ಸ್ಥಾಪಿಸಿದ ಪ್ರದೇಶ ಮತ್ತು ಆಚರಿಸಿದ ಧರ್ಮಕ್ಕೆ ಸಂಬಂಧಿಸಿದಂತೆಯೂ ಜಿಜ್ಞಾಸೆಗಳಿವೆ. ಗಂಗರು ಅನಂತರದ ವರ್ಣನೆಯ ಪ್ರಕಾರ ಪೇರೂರಿನಿಂದ ಬಂದು ಕುಲಾಳ ಅಥವಾ ಕೋಲಾರವನ್ನು ರಾಜಧಾನಿಯಾಗಿ ಮಾಡಿದರೆಂದು ಹೇಳಲಾಗಿದೆ. ಆದರೆ ಗಂಗರ ಶಾಸನಗಳ ಪ್ರಕಾರ ತಲಕಾಡು ಪ್ರಾರಂಭದಿಂದಲೂ ಅವರ

ರಾಜಧಾನಿಯಾಗಿತ್ತೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಮಿಗಿಲಾಗಿ ಗಜಾರಣ್ಯವೆಂದು ಹೆಸರಾಗಿದ್ದು ಆನೆಗಳು ವಿಶೇಷವಾಗಿ ವಾಸಿಸುತ್ತಿದ್ದ ಪ್ರದೇಶವಾದುದರಿಂದಲೇ ಇವರು ಮದಗಜವನ್ನು ತಮ್ಮ ರಾಜ ಚಿಹ್ನೆಯಾಗಿ ಆರಿಸಿಕೊಂಡರು. ಅಂತೆಯೇ ಪ್ರಾರಂಭದ ರಾಜರು ವೈದಿಕ ಮತಾವಲಂಬಿಗಳಾಗಿದ್ದು ವೈದಿಕ ಯಜ್ಞಯಾಗಾದಿಗಳನ್ನು ಆಚರಿಸಿದರು. ಗೋಬ್ರಾಹ್ಮಣ ಪಾದಪೂಜಕರೆಂದು ಬಿರುದು ಹೊಂದಿದ್ದರು. ಆದರೆ ಇಮ್ಮಡಿ ಶಿವಮಾರನ ಕಾಲದಿಂದ ಜೈನ ಮತವನ್ನವಲಂಬಿಸಿದರು.

## 8.3 ಗಂಗರ ಆರಂಭದ ರಾಜಕೀಯ ಇತಿಹಾಸ

ಧಡಿಗ ಮತ್ತು ಮಾಧವ ಎಂಬ ಸಹೋದರರು ಗಂಗರಾಜ್ಯ ಸ್ಥಾಪಕರೆಂದು ಇವರ ಶಾಸನಗಳಿಂದ ತಿಳಿದು ಬರುತ್ತದೆ. ಕೆಲವು ಇತಿಹಾಸಕಾರರ ಪ್ರಕಾರ ರಾಜ್ಯ ಸ್ಥಾಪಿಸುವ ವೇಳೆಗೆ ಧಡಿಗನಿಗೆ ವಯಸ್ಸಾಗಿದ್ದುದರಿಂದ ಅವನು ಬೇಗ ಮರಣ ಹೊಂದಿ ಅವನ ಸಹೋದರನಾದ ಒಂದನೇ ಮಾಧವನು ರಾಜನಾಗಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಇವನು ಕ್ರಿ.ಶ. 340 ರಿಂದ 370 ರವರೆಗೆ ಆಳಿದನೆಂದು ತಿಳಿದು ಬರುತ್ತದೆ. ತಲಕಾಡು ಮಾಧವನ ರಾಜಧಾನಿಯಾಗಿತ್ತು. ಇವನು ಇಂದಿನ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳನ್ನು ಜಯಿಸಿದನು. ಆಗ ಆ ಪ್ರದೇಶವನ್ನು ಕೊಂಗು ಎಂದು ಕರೆಯಲಾಗಿತ್ತು. ಆದುದರಿಂದ ಕೊಂಗುಣೀವರ್ಮ ಎಂಬ ಬಿರುದನ್ನು ಧರಿಸಿದನು. ಈ ಬಿರುದನ್ನು ಇವನ ಸಂತತಿಯ ರಾಜರೆಲ್ಲರೂ ಹೊಂದಿದ್ದರು. ಮಾಧವ ಕೊಂಗುಣೀವರ್ಮನು ಬಾಣರನ್ನು ಸೋಲಿಸಿ ಕೋಲಾರದವರೆಗೂ ರಾಜ್ಯ ವಿಸ್ತರಿಸಿದನು. ಒಂದನೇ ಮಾಧವನ ನಂತರ ಇವನ ಸೋದರನ ಮಗನಾದ ಎರಡನೇ ಮಾಧವನು ರಾಜನಾದನು. ಇವನು ಕ್ರಿ.ಶ. 370 ರಿಂದ 390 ರವರೆಗೆ ಆಳಿದನು. ಇವನು ಗೋಬ್ರಾಹ್ಮಣ ಮತ್ತು ಧರ್ಮರಕ್ಷಣೆಗಾಗಿ ಅಧಿಕಾರ ವಹಿಸಿಕೊಂಡನೆಂದು ಶಾಸನಗಳಲ್ಲಿ ಹೇಳಿರುವುದರಿಂದ ಇವನು ವೈದಿಕ ಮತಾವಲಂಬಿಯೆಂದು ಸ್ಪಷ್ಟವಾಗುತ್ತದೆ.

ಎರಡನೆ ಮಾಧವನ ತರುವಾಯ ಹರಿವರ್ಮನು ರಾಜನಾಗಿ ಕ್ರಿ.ಶ. 390 ರಿಂದ 410 ರವರೆಗೆ ಆಳಿದನೆಂದು ತಿಳಿದು ಬುರತ್ತದೆ. ಆದರೆ ಇವನ ಮಕ್ಕಳಾದ ಕೃಷ್ಣವರ್ಮ ಎಂಬುವನು ಅನಂತಪುರ ಜಿಲ್ಲೆಯ ಕೈವಾರದಿಂದಲೂ ಸ್ವತಂತ್ರವಾಗಿ ರಾಜ್ಯವಾಳುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಪಲ್ಲವ ರಾಜನಾದ ಸಿಂಹವರ್ಮನು ಹರಿವರ್ಮನ ಪಟ್ಟಾಭಿಷೇಕ ಸಮಯದಲ್ಲಿ ತಲಕಾಡಿಗೆ ಬಂದಿದ್ದನೆಂದು ತಿಳಿದು ಬರುತ್ತದೆ. ಇದರಿಂದ ಗಂಗರಿಗೂ ಪಲ್ಲವರಿಗೂ ಇದ್ದ ಅನ್ಯೋನ್ಯ ರಾಜಕೀಯ ಸಂಬಂಧ ವ್ಯಕ್ತವಾಗುತ್ತದೆ. ಹರಿವರ್ಮನು ಪ್ರಬಲವಾದ ಗಜಬಲವನ್ನಿಟ್ಟಿದ್ದನು. ಇವನು ವೈದಿಕ ಮತಾವಲಂಬಿಯಾಗಿದ್ದು ಬ್ರಾಹ್ಮಣರಿಗೆ ದಾನ ದತ್ತಿ ನೀಡಿದರು. ಇವನ ತರುವಾಯ ವಿಷ್ಣುಗೋಪನು ರಾಜನಾಗಿ ಕ್ರಿ.ಶ. 410 ರಿಂದ 430 ರವರೆಗೆ ಆಳಿದನು. ಇವನ ತರುವಾಯ ತಡಂಗಲ ಮಾಧವನು ರಾಜನಾದನು.

ತಡಂಗಲ ಮಾಧವನನ್ನು ಮೂರನೇ ಮಾಧವನೆಂದು ಕರೆಯಲಾಗಿದೆ. ಇವನು ಕ್ರಿ.ಶ. 430 ರಿಂದ 466 ರವರೆಗೆ ಆಳಿದನೆಂದು ತಿಳಿದು ಬರುತ್ತದೆ. ಪಲ್ಲವ ರಾಜನಾದ ಸ್ಕಾಂದವರ್ಮನು ತಡಂಗಲ ಮಾಧವನ ಪಟ್ಟಾಭಿಷೇಕ ಸಮಯದಲ್ಲಿ ಪಾಲ್ಗೊಂಡಿದ್ದನು. ಮಾಧವನು ಪಲ್ಲವರೊಡನೆ ಸ್ನೇಹದಿಂದ ಇದ್ದು ರಾಜ್ಯ ವಿಸ್ತರಿಸಿದನು. ಕದಂಬ ರಾಜಕುಮಾರಿಯನ್ನು ವಿವಾಹವಾಗಿದ್ದನು. ಪಾರವಿ ಮತ್ತು ಕೈವಾರ ಶಾಖೆಗಳನ್ನು ಅಂತ್ಯಗೊಳಿಸಿದನು. ಇವನು ವೈದಿಕ ಮತಾವಲಂಬಿಯಾಗಿದ್ದು ಬೌದ್ಧ ಮತ್ತು ಜೈನ ಧರ್ಮಗಳಿಗೂ ಪ್ರೋತ್ಸಾಹ ನೀಡಿದನು. ಇವನ ತರುವಾಯ ಇವನ ಮಗ ಅವಿನೀತನು ರಾಜನಾಗಿ ಕ್ರಿ.ಶ. 466 ರಿಂದ 495 ರವರೆಗೆ ಆಳಿದನು. ಅವಿನೀತನು ಗಂಗ ಸಂತತಿಯ ಪ್ರಖ್ಯಾತ ರಾಜರಲ್ಲೊಬ್ಬನು. ಇವನು ಗಜತುರುಗಗಳನ್ನು ನಡೆಸುವುದರಲ್ಲಿ ಪ್ರವೀಣನಾಗಿದ್ದನು. ಅವಿನೀತನು ಉದಾರ ಮತೀಯ ನೀತಿಯನ್ನು ಅನುಸರಿಸಿದನು. ತಾನು ಸ್ವತಃ ವೈದಿಕ ಮತಾವಲಂಬಿಯಾದರೂ ವಿಜಯಕೀರ್ತಿ ಎಂಬ ಜೈನ ವಿದ್ವಾಂಸನನ್ನು ತನ್ನ ಗುರುವೆಂದು ಪುರಸ್ಕರಿಸಿದನು. ಇವನನ್ನು ವರ್ಣಾಶ್ರಮಧರ್ಮ ಸಂರಕ್ಷಕನಾಗಿದ್ದನೆಂದು ಶಾಸನಗಳಲ್ಲಿ ಹೆಸರಿಸಲಾಗಿದೆ. ಇವನು ಶಿವೋಪಾಸಕನಾಗಿದ್ದನು.

## 8.5 ಗಂಗರ ರಾಜಕೀಯ ಇತಿಹಾಸ - ದುರ್ವಿನೀತನಿಂದ ಶ್ರೀಪುರುಷನವರೆಗೆ

ಅವಿನೀತನ ತರುವಾಯ ಅವನ ಹಿರಿಯ ಮಗನಾದ ದುರ್ವಿನೀತನು ರಾಜನಾದನು. ದುರ್ವಿನೀತನ ಹೆಬ್ಬೆಟ್ಟು ಶಾಸನವು ಇವನ ಆಳ್ವಿಕೆ ಮತ್ತು ಗಂಗರ ಕಾಲಾನುಕ್ರಮಣಿಕೆಯನ್ನು ವಿವರಿಸುವ ಉತ್ತಮ ದಾಖಲೆಯೆಂದು ಪರಿಗಣಿಸಲಾಗಿದೆ. ದುರ್ವಿನೀತನು ಕ್ರಿ.ಶ. 495 ರಿಂದ 535 ರವರೆಗೆ ಆಳಿದನು. ಇವನ ತಂದೆ ತನ್ನ ಕಿರಿಯ ರಾಣಿಯ ಮಗನಿಗೆ ಪಟ್ಟ ಕಟ್ಟಿದುದರಿಂದ ಪ್ರಾರಂಭದಲ್ಲಿ ಸಹೋದರರಲ್ಲಿ ಯಾದವಿ ಕಲಹವು ನಡೆಯಿತು. ಆದರೆ ದುರ್ವಿನೀತನು ತನ್ನ ಸಹೋದರ ಮತ್ತು ಅವನ ಸಹಾಯಕ್ಕೆ ಧಾವಿಸಿದ ಪಲ್ಲವರನ್ನು ಸೋಲಿಸಿ ಸಿಂಹಾಸನವನ್ನು ಪಡೆದನು. ತನ್ನ ಮಲ ಸಹೋದರನ ಕಡೆಯಿಂದ ಹಲವು ವರ್ಷಗಳ ಕಾಲದವರೆಗೆ ಪ್ರತಿರೋಧವನ್ನು ಎದುರಿಸಬೇಕಾಯಿತು. ಅವನ ಮಲತಾಯಿಯು ಪಲ್ಲವ ಮನೆತನದ ಸಂಬಂಧಿಯಾಗಿದ್ದುದರಿಂದ ಪಲ್ಲವರು ದುರ್ವಿನೀತನ ಮೇಲೆ ಯುದ್ಧ ಹೂಡಿದರು. ದುರ್ವಿನೀತನು ಪಲ್ಲವರ ಸೈನ್ಯವನ್ನು ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಗಳಲ್ಲಿ ಪೂರ್ಣವಾಗಿ ಸೋಲಿಸಿದನು. ಅದೇ ರೀತಿಯಲ್ಲಿ ತನ್ನ ಮಲ ತಮ್ಮನ ಸಹಾಯಕ್ಕೆ ಧಾವಿಸಿದ್ದ ಕದಂಬರ ಕೃಷ್ಣವರ್ಮನ ಮಕ್ಕಳನ್ನು ಸೋಲಿಸಿದನು. ಈ ಯುದ್ಧಗಳಲ್ಲಿ ಗಳಿಸಿದ ಜಯಗಳಿಂದ ಗಂಗರಾಜ್ಯದ ಎಲ್ಲೆಗಳು ವಿಸ್ತಾರವಾದವು. ಪುನ್ನಾಟದ ರಾಜನು ಮಡಿದು ಉತ್ತರಾಧಿಕಾರಿಗಳಿರಲಿಲ್ಲವಾದ್ದರಿಂದ ಅಲ್ಲಿನ ರಾಜನ ಮಗಳ ಮಗನಾದ ದುರ್ವಿನೀತನಿಗೆ ಆ ರಾಜ್ಯವು ಸೇರಿತು. ಕಾವೇರಿ ಕಪಿಲಾನದಿಗಳ ಬಯಲಿನಲ್ಲಿದ್ದ ಶ್ರೀಮಂತ ಪುನ್ನಾಟವು ಗಂಗಾರಾಜ್ಯಕ್ಕೆ ಸೇರಿದುದರಿಂದ ಗಂಗಾವಾಡಿಯೂ ವಿಶಾಲ ರಾಜ್ಯವಾಗಿ ಪರಿಣಮಿಸಿತು.

ಪಲ್ಲವರು ಆಗತಾನೆ ಸ್ಥಾಪಿತವಾಗಿದ್ದ ಬಾದಾಮಿ ಚಾಳುಕ್ಯರ ಮೇಲೆ ಆಕ್ರಮಣ ಮಾಡಿದನು. ದುರ್ವಿನೀತನ ಮಗಳನ್ನು ಚಾಳುಕ್ಯ ಸಂತತಿಯ ವಿಜಯಾದಿತ್ಯನಿಗೆ ಕೊಟ್ಟು ಗಂಗ-ಚಾಳುಕ್ಯ ಮನೆತನಗಳ ಮಧ್ಯೆ ವೈವಾಹಿಕ ಬಾಂಧವ್ಯವೇರ್ಪಟ್ಟಿತು. ಪಲ್ಲವರು ವಿಜಯಾದಿತ್ಯನನ್ನು ಯುದ್ಧದಲ್ಲಿ ಕೊನೆಗಾಣಿಸಿ ಅವನ ರಾಜ್ಯವನ್ನು ಆಕ್ರಮಿಸಿದರು. ಜಯಸಿಂಹನು ಆಗ ಇನ್ನೂ ಬಾಲಕನಾಗಿದ್ದನು. ಆ ದಾರುಣ ಸಂದರ್ಭದಲ್ಲಿ ದುರ್ವಿನೀತನು ಚಾಳುಕ್ಯರ ಸಹಾಯಕ್ಕೆ ಧಾವಿಸಿ ಪಲ್ಲವರನ್ನು ಸೋಲಿಸಿ ಬಾಲಕ ಜಯಸಿಂಹನನ್ನು ಚಾಳುಕ್ಯ ಸಿಂಹಾಸನದ ಮೇಲೆ ಕೂರಿಸಿ, ಅವನು ಪ್ರಾಪ್ತ ವಯಸ್ಸಿಗೆ ಬರುವವರೆಗೂ ರಕ್ಷಿಸಿದನು. ದುರ್ವಿನೀತನ ಕಾಲದಿಂದ ಗಂಗ ಮತ್ತು ಪಲ್ಲವರ ಮಧ್ಯೆ ಹಗೆತನವು ಮತ್ತು ಗಂಗ ಹಾಗೂ ಬಾದಾಮಿ ಚಾಳುಕ್ಯ ಮನೆತನಗಳ ಮಧ್ಯೆ ಮಧುರ ಬಾಂದವ್ಯವೂ ಸ್ಥಾಪಿತವಾಯಿತು.

ದುರ್ವಿನೀತನು ಸಮರ್ಥ ಆಡಳಿತಗಾರನಾಗಿದ್ದನು. ಇವನು ರಾಜನಿಗಿರಬೇಕಾದ ಪ್ರಭುಶಕ್ತಿ, ಆಲೋಚನಶಕ್ತಿ ಮತ್ತು ಉತ್ಸಾಹಶಕ್ತಿ ಇವುಗಳನ್ನು ಹೊಂದಿದ್ದು ಶತೃಗಳಿಗೆ ಅಜೇಯನಾಗಿದ್ದನೆಂದು ಶಾಸನಗಳು ವರ್ಣಿಸುತ್ತವೆ. ಇವನ ಕಾಲದಲ್ಲಿ ರಾಜ್ಯವು ಉತ್ತರದಲ್ಲಿ ಬಳ್ಳಾರಿ ಜಿಲ್ಲೆಯಿಂದ ದಕ್ಷಿಣದಲ್ಲಿ ಸೇಲಂ ಮತ್ತು ಕೊಯಮತ್ತೂರು ಜಿಲ್ಲೆಗಳನ್ನು ಒಳಗೊಂಡಿತ್ತು. ದುರ್ವಿನೀತನು ಹಿಂದೂ ಮತಾವಲಂಬಿಯಾಗಿದ್ದು ವಿಷ್ಣುವಿನ ಪರಮ ಆರಾಧಕನಾಗಿದ್ದನು. ಇವನಿಗೆ ಕಮಲೋದರ ಎಂಬ ಬಿರುದು ಇದ್ದಿತು. ಇವನು ಹಿರಣ್ಯಗರ್ಭಯಾಗವನ್ನು ಆಚರಿಸುದುದಾಗಿ ಇವನ ಶಾಸನಗಳು ತಿಳಿಸುತ್ತವೆ. ಇವನು ಅನೇಕ ಬ್ರಾಹ್ಮಣ ವಿದ್ವಾಂಸರಿಗೆ ಗ್ರಾಮಗಳನ್ನು ದತ್ತಿಯಾಗಿ ನೀಡಿದನು. ಜೈನ ವಿದ್ವಾಂಸರಿಗೂ ತನ್ನ ಆಸ್ಥಾನದಲ್ಲಿ ವಿಶೇಷ ಮನ್ನಣೆ ನೀಡಿದನು.

ದುರ್ವಿನೀತನು ಮಹಾ ಮೇಧಾವಿ ಪ್ರಭುಗಳಲ್ಲೊಬ್ಬನು. ಇವನ ಪ್ರೋತ್ಸಾಹದಿಂದ ಕನ್ನಡ ನಾಡಿನಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ವಿಶೇಷ ಪುರೋಭಿವೃದ್ಧಿಯಾಯಿತು. ಕನ್ನಡ ಮತ್ತು ಸಂಸ್ಕೃತದಲ್ಲಿ ಅನೇಕ ಗ್ರಂಥಗಳು ರಚನೆಯಾದವು. ಆ ಕಾಲದ ಕನ್ನಡ ಗ್ರಂಥಗಳು ದೊರೆತಿಲ್ಲದಿದ್ದಾಗ್ಯೂ ಕವಿರಾಜಮಾರ್ಗದ ಪ್ರಕಾರ ದುರ್ವಿನೀತನು ಕನ್ನಡ ಗದ್ಯ ಪದ್ಯ ರಚನೆಯ ಅಗ್ರಗಣ್ಯರಲ್ಲೊಬ್ಬನಾಗಿದ್ದನು. ಸ್ವತಃ ವಿದ್ವಾಂಸನಾದ ದುರ್ವಿನೀತ ಭಾರವಿಯ ಕಿರಾತಾರ್ಜುನೀಯದ 15ನೇ ಸರ್ಗಕ್ಕೆ ಭಾಷ್ಯ ಬರೆದುದಲ್ಲದೆ ಗುಣಾಢ್ಯನ ವಡ್ಡ ಕಥೆಯನ್ನು ಸಂಸ್ಕೃತಕ್ಕೆ ತರ್ಜುಮೆ

ಮಾಡಿದನೆಂಬುದಾಗಿ ತಿಳಿದು ಬರುತ್ತದೆ. ದುರ್ವಿನೀತನ ಆಸ್ಥಾನದಲ್ಲಿದ್ದ ಪೂಜ್ಯಪಾದನು ಶಬ್ದಾವತಾರ ಎಂಬ ಗ್ರಂಥವನ್ನು ರಚಿಸಿದನು. ವಿದ್ವಾಂಸನೂ ವಿದದ್ವಜ್ಜನರ ಪ್ರೋತ್ಸಾಹಕನೂ ಆದ ದುರ್ವಿನೀತನ ಆಸ್ಥಾನಕ್ಕೆ ಸುಪ್ರಸಿದ್ಧ ಕವಿಯಾದ ಭಾರವಿಯು ಭೇಟಿನೀಡಿದುದಾಗಿ ತಿಳಿದು ಬರುತ್ತದೆ.

ದುರ್ವಿನೀತನು ರಾಜನೀತಿಜ್ಞನೆಂದೂ, ಸಂಗೀತ ಸಾಹಿತ್ಯದಲ್ಲಿ ಪ್ರೌಢಿಮೆ ಹೊಂದಿದ್ದನೆಂದೂ ಇವನ ಸಮಕಾಲೀನ ಶಾಸನಗಳಲ್ಲಿ ವಿವರಿಸಲಾಗಿದೆ. ರಾಜತಂತ್ರ ಕೌಶಲದಲ್ಲಿ ಚಾಣಾಕ್ಯನಿಗೂ, ಕಲೆ, ಸಂಗೀತ ಮತ್ತು ನೃತ್ಯದಲ್ಲಿ ತುಂಬರ, ನಾರದನಿಗೂ, ಅಸ್ತ್ರ ಬಳಕೆಯಲ್ಲಿ ಪರುಶರಾಮನಿಗೂ, ಆಯುರ್ವೇದ ಪಾಂಡಿತ್ಯದಲ್ಲಿ ಚರಕ ಮತ್ತು ಧನ್ವಂತರರಿಗೂ ಇವನನ್ನು ಅವನೀಸ್ಥಿರ ಪ್ರಜಾಲಯ, ದಕ್ಷಿಣ ರಾಜ್ಯ ಸಂರಕ್ಷಣ ಸಮರ್ಥ ಕೊಂಗುಣಿವರ್ಮ ಧರ್ಮ ಮಹಾರಾಜಾಧಿಕಾರ ದುರ್ವಿನೀತ ಎಂಬ ಅನೇಕ ಸಾರ್ವಭೌಮ ಬಿರುದುಗಳನ್ನು ಹೊಂದಿದ್ದನು. ನಲವತ್ತು ವರ್ಷಗಳ ಕಾಲದ ಇವನ ಆಳ್ವಿಕೆಯು ಕನ್ನಡ ನಾಡಿನ ಬಹುಭಾಗ ಮತ್ತು ಆಜುಬಾಜಿನ ಪ್ರದೇಶಗಳ ಮೇಲೆ ಸ್ಥಾಪನೆಯಾಗಿತ್ತು. ಬಾದಾಮಿ ಚಾಳುಕ್ಯರ ಮನೆತನ ಉಳಿದು ಬಾಳಲು ದುರ್ವಿನೀತನು ನೆರವಾದನು. ಈ ರೀತಿಯಾಗಿ ಗಂಗ ಪ್ರಭು ದುರ್ವಿನೀತನು ಕನ್ನಡ ನಾಡಿನಲ್ಲಿ ಹಾಗೂ ಪ್ರಾಚೀನ ದಕ್ಷಿಣ ಭಾರತದಲ್ಲಿ ಆಳಿದ ಸಮರ್ಥ ಹಾಗೂ ಶ್ರೇಷ್ಠ ರಾಜರಲ್ಲಿ ಒಬ್ಬನಾಗಿದ್ದಾನೆ.

ದುರ್ವಿನೀತನ ಮರಣಾನಂತರ ಇವನ ಮಗನಾದ ಮುಷ್ಕರನು ರಾಜನಾಗಿ ಕ್ರಿ.ಶ. 535 ರಿಂದ 585 ರವರೆಗೆ ಆಳ್ವಿಕೆ ನಡೆಸಿದನು. ಇವನ ತರುವಾಯ ಇವನ ಮಗ ಶ್ರೀವಿಕ್ರಮನು ಪಟ್ಟಕ್ಕೆ ಬಂದು ಕ್ರಿ.ಶ. 585 ರಿಂದ 635 ರವರೆಗೆ ಆಳಿದನು. ಇವನ ಮರಣಾನಂತರ ಭೂವಿಕ್ರಮನು ರಾಜನಾದನು.

***ಭೂವಿಕ್ರಮನು*** ಕ್ರಿ.ಶ. 635 ರಿಂದ 679 ರವರೆಗೆ ಆಳಿದನು. ಇವನು ಪಟ್ಟಕ್ಕೆ ಬರುವ ಪೂರ್ವದಲ್ಲೆ ಕಲವಲಾಳ ನಾಡಿನ ಪ್ರಾಂತ್ಯಾಧಿಕಾರಿಯಾಗಿ ದಕ್ಷತೆಗೂ, ಶೌರ್ಯಕ್ಕೂ ಹೆಸರಾಗಿದ್ದನು. ಚಾಳುಕ್ಯರಿಗೂ ಗಂಗರಿಗೂ ರಕ್ತ ಸಂಬಂಧವಿತ್ತು. ಚಾಳುಕ್ಯ ಇಮ್ಮಡಿ ಪುಲಕೇಶಿ ದಕ್ಷಿಣದ ವಿಜಯದಲ್ಲಿ ಭೂವಿಕ್ರಮನು ಭಾಗವಹಿಸಿದ್ದನೆಂದು ತಿಳಿದು ಬರುತ್ತದೆ. ಪಲ್ಲವರ ಒಂದನೇ ನರಸಿಂಹನ ವಾತಾಪಿಯ ಮುತ್ತಿಗೆ ಪುಲಕೇಶಿಯ ಮರಣ ಮತ್ತು ಚಾಳುಕ್ಯ ರಾಜ್ಯಕ್ಕೆ ಕವಿದ ಮಂಕುಗಳಿಂದ ಕುಪಿತವಾದ ಭೂವಿಕ್ರಮನು ಪಲ್ಲವರನ್ನು ಪರಾಜಯಗೊಳಿಸಲು ಕಂಕಣ ಬದ್ಧನಾದನು. ಚಾಳುಕ್ಯ ಒಂದನೇ ವಿಕ್ರಮಾದಿತ್ಯನ ರಾಣಿಯಾದ ಗಂಗ ಮಹಾದೇವಿಯು ಭೂವಿಕ್ರಮನ ಮಗಳೆಂದು ತಿಳಿದು ಬರುತ್ತದೆ. ಭೂವಿಕ್ರಮನು ನರಸಿಂಹ ವರ್ಮನ ಮತ್ತು ಅವನ ಉತ್ತರಾಧಿಕಾರಿಗಳೊಡನೆ ಹೋರಾಡಿ ಅವರನ್ನು ವಿಲಂದೆ ಎಂಬ ಪ್ರಸಿದ್ಧ ಯುದ್ಧದಲ್ಲಿ ಸೋಲಿಸಿ ಪಲ್ಲವ ರಾಜನ ಉಗ್ರೋದಯ ಎಂಬ ಕಂಠೀಹಾರವನ್ನು ಕಸಿದು ಕೊಂಡುದುದಲ್ಲದೆ ಶ್ರೀವಲ್ಲಭ ಮೊದಲಾದ ಸಾರ್ವಭೌಮ ಬಿರುದುಗಳನ್ನು ಧರಿಸಿದನು. ಇವನ ಮರಣಾನಂತರ ಇವನಿಗೆ ಗಂಡು ಮಕ್ಕಳಿರಲಿಲ್ಲದಿದ್ದುದರಿಂದ ಕಿರಿಯ ಸೋದರ ಒಂದನೇ ಶಿವಮಾರನು ರಾಜನಾಗಿ ಕ್ರಿ.ಶ. 679 ರಿಂದ 725 ರವರೆಗೆ ಆಳಿದನು. ಇವನ ಕಾಲದಲ್ಲಿ ಗಂಗ ಮತ್ತು ಚಾಳುಕ್ಯ ಮನೆತನಗಳ ಮಧ್ಯೆ ಮಧುರ ಬಾಂದವ್ಯವಿತ್ತು. ಚಾಳುಕ್ಯರ ಶಾಸನಗಳಲ್ಲಿ ಗಂಗರನ್ನು ಉಚ್ಚವಂಶೀಯರೆಂದು ಗೌರವದಿಂದ ಸಂಬೋಧಿಸಲಾಗಿದೆ. ಮಂಡ್ಯ ಜಿಲ್ಲೆಯ ಹಳ್ಳಿಗೆರೆ ಶಾಸನ ಪ್ರಕಾರ ಶಿವಮಾರನು ನೊಳಂಬ ಸಾಮಂತನ ಅವಿಧೇಯತೆಗಾಗಿ ಶಿಕ್ಷಿಸಿದನು. ಅಲ್ಲದೆ ಪಲ್ಲವರನ್ನು ಸೋಲಿಸಿದುದಾಗಿ ತಿಳಿದು ಬರುತ್ತದೆ. ಇವನ ಕಾಲದಲ್ಲಿ ರಾಜ್ಯವು ಪುನ್ನಾಟ, ಕೊಂಗು, ತೊರೆನಾಡು 500, ಕೊಂಗಲ್‌ನಾಡು 2000, ಮಲೆನಾಡು 1000 ಮೊದಲಾದ ನಾಡುಗಳನ್ನೊಳಗೊಂಡಿತ್ತು. ಶಿಷ್ಟ ಪ್ರಿಯ ಎಂಬ ಬಿರುದನ್ನು ಹೊಂದಿದ್ದು ಬ್ರಾಹ್ಮಣರಿಗೂ ಜೈನ ವಿದ್ವಾಂಸರಿಗೂ ಗ್ರಾಮಗಳನ್ನು ದತ್ತಿ ನೀಡಿದನು. ಒಂದನೇ ಶಿವಮಾರನು ಕ್ರಿ.ಶ. 725 ರಲ್ಲಿ ಮರಣ ಹೊಂದಿದನು.

ಶಿವಮಾರನ ಮಗನಾದ ಎರೆಗಂಗನು ಮೊದಲೇ ಮರಣ ಹೊಂದಿದ್ದರಿಂದ ಮೊಮ್ಮಗನಾದ ಶ್ರೀಪುರುಷನು ಕ್ರಿ.ಶ. 725 ರಿಂದ ರಾಜನಾಗಿ 788 ರವರೆಗೂ ಆಳಿದನು. ಶ್ರೀಪುರುಷನ ಆಳ್ವಿಕೆಯ ಕಾಲವು ಕರ್ನಾಟಕದ ಚರಿತ್ರೆಯಲ್ಲಿ ಪ್ರಮುಖ ಘಟನೆಗಳನ್ನು ಕಂಡಿತು. ಬಾದಾಮಿ ಚಾಳುಕ್ಯ ಮನೆತನವು ಕೊನೆಗೊಂಡಿತು. ರಾಷ್ಟ್ರಕೂಟ ಸಂತತಿಯ ಸ್ಥಾಪಿತವಾಯಿತು. ತಮಿಳುನಾಡಿನಲ್ಲಿ ಪಲ್ಲವರ ಪ್ರಭಾವವು ಇಳಿಮುಖವಾಗತೊಡಗಿತು. ಇವನು ಸಿಂಹಾಸನಕ್ಕೆ ಬರುವ ಮೊದಲೆ ಆಡಳಿತದಲ್ಲಿ ಮತ್ತು ಯುದ್ಧ ಕಲೆಯಲ್ಲಿ ವಿಶೇಷ ಅನುಭವ ಗಳಿಸಿದ್ದನು. ಅಧಿಕಾರ ವಹಿಸಿಕೊಂಡ ತರುವಾಯ ಪಲ್ಲವರೊಡನೆ ಹೋರಾಡಿ ಪಲ್ಲವ ನಂದಿವರ್ಮನನಿಂದ ಪರಾಜಯಗೊಂಡನು. ಆದರೆ ಧೃತಿಗೆಡದೆ ತನ್ನ ಬಲವನ್ನು ವೃದ್ಧಿಸಿಕೊಂಡು ಪಲ್ಲವರನ್ನು ಎದುರಿಸಿದನು. ಪಲ್ಲವರ ಸೈನ್ಯ ಸೋತು ಹೋಯಿತು. ಶ್ರೀಪುರುಷನು ಪಲ್ಲವರ ಬಿರುದಾದ ಪೆರ್ಮಾಡಿ ಎಂಬುದನ್ನು ತಾನೆ ಧರಿಸಿದನು. ರಾಜ ನೀತಿಜ್ಞನಾದ ಶ್ರೀಪುರುಷನು ಮಧುರೆಯ ಪಾಂಡ್ಯರೊಡನೆ ವೈವಾಹಿಕ ಸಂಬಂಧ ಬೆಳಸಿ ತನ್ನ ಪುತ್ರಿಯೊಬ್ಬಳನ್ನು ಪಾಂಡ್ಯ ಕುಮಾರನಿಗೆ ಕೊಟ್ಟು ವಿವಾಹ ಮಾಡಿದ್ದನು. ಇದರಿಂದ ಪಲ್ಲವರ ಪ್ರಾಬಲ್ಯವನ್ನು ಕುಗ್ಗಿಸಲು ಸಹಕಾರಿಯಾಯಿತು.

ಶ್ರೀಪುರುಷನ ಕಾಲದಲ್ಲಿ ಮತ್ತೊಂದು ಪ್ರಮುಖವಾದ ರಾಜಕೀಯ ಬೆಳವಣಿಗೆ ಎಂದರೆ ಕ್ರಿ.ಶ. 758 ರಲ್ಲಿ ರಾಷ್ಟ್ರಕೂಟ ದಂತಿದುರ್ಗನು ಬಾದಾಮಿ ಚಾಳುಕ್ಯ ಮನೆತನದ ಕೊನೆಯ ಅರಸನಾದ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ರಾಷ್ಟ್ರಕೂಟ ಸಾರ್ವಭೌಮತ್ವವನ್ನು ಸ್ಥಾಪಿಸಿದುದು. ಚಾಳುಕ್ಯ ಮನೆತನವನ್ನು ಅಂತ್ಯಗೊಳಿಸಿದ ರಾಷ್ಟ್ರಕೂಟರನ್ನು ಗಂಗರು ವಿರೋಧಿಸಿದರು. ಗಂಗ ಮತ್ತು ರಾಷ್ಟ್ರಕೂಟರ ಮಧ್ಯೆ ವೈಮನಸ್ಯ ಬೆಳೆದು ಪರಸ್ಪರ ಕಾದಾಟದಲ್ಲಿ ಪರ್ಯವಸಾನಗೊಂಡಿತು. ಸುಮಾರು ಒಂದು ನೂರು ವರ್ಷಗಳ ಕಾಲ ಗಂಗರು ರಾಷ್ಟ್ರಕೂಟರ ಕಡುವಿರೋಧಿಗಳಾಗಿ ಮುಂದುವರಿದರು. ದಂತಿದುರ್ಗನ ತರುವಾಯ ಸಿಂಹಾಸನಕ್ಕೆ ಬಂದ ರಾಷ್ಟ್ರಕೂಟರಾದ ಕೃಷ್ಣ (1768) ಮತ್ತು ಧೃವನ ಕಾಲದಲ್ಲಿ ಗಂಗರೊಡನೆ ಯುದ್ಧಗಳು ಮುಂದುವರಿದವು. ಗಂಗರ ಉಪರಾಜಧಾನಿಯಾದ ಮಾನ್ಯಪುರ ರಾಷ್ಟ್ರಕೂಟರ ವಶವಾಯಿತು. ಗಂಗರ ಹಲವು ಪ್ರದೇಶಗಳು ರಾಷ್ಟ್ರಕೂಟರ ವಶವಾದವು. ಶ್ರೀಪುರುಷನ ಮಗನಾದ ಸಿಯಾಗೆಲ್ಲನು ರಣರಂಗದಲ್ಲಿ ಮಡಿದರು. ಆದರೂ ಶ್ರೀಪುರುಷ ರಾಷ್ಟ್ರಕೂಟರಿಗೆ ಶರಣಾಗದೆ, ಕೊನೆಯವರೆಗೂ ಹೋರಾಡಿ ರಾಜಾಧಿರಾಜ ಪರಮೇಶ್ವರ ಶ್ರೀಪುರುಷ ಎಂಬು ಬಿರುದನ್ನು ಧರಿಸಿದನು. ಇವನು ವೈದಿಕ ಮತಾವಲಂಬಿಯಾಗಿದ್ದು ಬ್ರಾಹ್ಮಣರಿಗೂ ಜೈನರಿಗೂ ದಾನದತ್ತಿಗಳನ್ನು ನೀಡಿದನು. ಗಜಶಾಸ್ತ್ರದಲ್ಲಿ ವಿಶೇಷ ಪ್ರವೀಣನಾಗಿದ್ದು ಗಜಶಾಸ್ತ್ರ ಎಂಬ ಗ್ರಂಥವನ್ನು ರಚಿಸಿದನು.

## 8.5 ಗಂಗರ ರಾಜಕೀಯ ಇತಿಹಾಸ - ಕೊನೆಯ ಗಂಗ ರಾಜರು : ಎರಡನೇ ಶಿವಮಾರನಿಂದ ರಕ್ಕಸ ಗಂಗನವರೆಗೆ

ಶ್ರೀಪುರುಷನ ತರುವಾಯ ಇವನ ಮಗ *ಎರಡನೆ ಶಿವಮಾರನು ರಾಜನಾಗಿ* ಕ್ರಿ.ಶ. 788 ರಿಂದ 812 ರವರೆಗೂ ಆಳಿದನು. ಇವನ ಆಳ್ವಿಕೆಯು ಗಂಗ ಮನೆತನದ ಇತಿಹಾಸದಲ್ಲಿ ಅತ್ಯಂತ ಸಂದಿಗ್ಧವೂ, ಕ್ಲಿಷ್ಟಕರವೂ ಆದ ಕಾಲವಾಗಿದ್ದಿತು. ಪ್ರಾರಂಭದಲ್ಲಿ ತನ್ನ ಸಹೋದರನಾದ ದುಗ್ಗಮಾರ ಎರೆಯಪ್ಪನು ಸಿಂಹಾಸನಕ್ಕಾಗಿ ದಂಗೆಯೆದ್ದನು. ಶಿವಮಾರನು ನೊಳಂಬ ಸಾಮಂತ ಸಿಂಗಪೊತನ ಸಹಾಯದಿಂದ ಅವನನ್ನು ಅಡಗಿಸಿದನು. ಆ ವೇಳೆಗೆ ರಾಷ್ಟ್ರಕೂಟರ ಸಿಂಹಾಸನಕ್ಕಾಗಿ 2ನೇ ಗೋವಿಂದನಿಗೂ ಧೃವನಿಗೂ ಅಂತರ ಕಲಹಗಳು ಆರಂಭವಾಗಿದ್ದವು. ಶಿವಮಾರನು ಗೋವಿಂದನ ಸಹಾಯಕ್ಕೆ ಧಾವಿಸಿದನು. ಆದರೆ ಧೃವನಿಂದ ಗೋವಿಂದನು ಸೋತು ಹೋದನು. ಅನಂತರ ಧೃವನು ಶಿವಮಾರನನ್ನು ಸೋಲಿಸಲು ಗಂಗವಾಡಿಗೆ ಮುತ್ತಿಗೆ ಹಾಕಿದನು. ಅವನು ಶಿವಮಾರನನ್ನು ಸೋಲಿಸಿ ಸೆರೆಹಿಡಿದನು. ತನ್ನ ಹಿರಿಯ ಮಗನಾದ ಕಂಭನನ್ನು ಗಂಗವಾಡಿಯ ರಾಜ್ಯಪಾಲನಾಗಿ ನೇಮಿಸಿದನು. ಶಿವಮಾರನು ಧೃವನ ಮರಣದವರೆಗೂ ರಾಷ್ಟ್ರಕೂಟರ ಸೆರೆಮನೆಯಲ್ಲೇ ಇದ್ದನು. ಧೃವನ ತರುವಾಯ ಅವನ ಮಕ್ಕಳಾದ ಕಂಭ ಮತ್ತು ಮೂರನೇ ಗೋವಿಂದ ಇವರು ಸಿಂಹಾಸನಕ್ಕಾಗಿ ಕಾದಾಡಿದರು.

ಶಿವಮಾರನ ಸಹಾಯವನ್ನಪೇಕ್ಷಿಸಿ ಗೋವಿಂದನು ಇವನನ್ನು ಸೆರೆಮನೆಯಿಂದ ಪಾರುಮಾಡಿ ಗಂಗವಾಡಿಗೆ ಕಳುಹಿಸಿದನು. ಆದರೆ ಶಿವಮಾರನು ಕಂಭನ ಪಕ್ಷವನ್ನು ವಹಿಸಿದನು. ಪರಾಕ್ರಮಿಯಾದ ಗೋವಿಂದನು ಕಂಭನನ್ನು ಸೋಲಿಸಿದನು. ಅನಂತರ ಗಂಗವಾಡಿಯನ್ನು ಮುತ್ತಿ ಶಿವಮಾರನನ್ನು ಸೋಲಿಸಿ ಸೆರೆಹಿಡಿದನು. ತನ್ನ ಸಹೋದರ ಕಂಭನನ್ನು ಕ್ಷಮಿಸಿ ಅವನನ್ನು ಪುನಃ ಗಂಗವಾಡಿಯ ರಾಜ್ಯಪಾಲನನ್ನಾಗಿ ನೇಮಿಸಿದನು. ಹಲವು ವರ್ಷಗಳ ನಂತರ ಕಂಭನು ಮರಣ ಹೊಂದಿದನು. ಆ ವೇಳೆಗೆ ಉತ್ತರದ ದಿಗ್ವಿಜಯವನ್ನು ಕೈಗೊಂಡು ಯಶಸ್ವಿಯಾಗಿ ಹಿಂದಿರುಗಿದ ಮೂರನೇ ಗೋವಿಂದನು ಔದಾರ್ಯದಿಂದ ಶಿವಮಾರನನ್ನು ನಡೆಸಿಕೊಂಡನು. ಅವನನ್ನು ಸೆರೆಯಿಂದ ಬಿಡಿಸಿ ತಾನೇ ಸ್ವತಃ ತಲಕಾಡಿಗೆ ಬಂದು ಶಿವಮಾರನನ್ನು ಪುನಃ ಸಿಂಹಾಸನದ ಮೇಲೆ ಕೂಡಿಸಿದನು. ಈ ಘಟನೆ ಸ್ವಲ್ಪ ವಿವಾದಕ್ಕೆ ಎಡೆ ಮಾಡಿಕೊಟ್ಟಿದೆ. ಶಿವಮಾರನು ಜೈನಧರ್ಮಕ್ಕೆ ನಿಷ್ಠೆ ಬೆಂಬಲವನ್ನು ವ್ಯಕ್ತಪಡಿಸಿ ಮೂರನೇ ಗೋವಿಂದನಿಂದ ಬಿಡುಗಡೆ ಹೊಂದಿದನೆಂದು ವ್ಯಾಖ್ಯಾನಿಸಲಾಗಿದೆ. ಅನಂತರ ಶಿವಮಾರನು ಗೋವಿಂದನಿಗೆ ನಿಷ್ಠೆಯಿಂದಿದ್ದು ಶಾಂತಿಯಿಂದ ರಾಜ್ಯಭಾರ ಮಾಡಿದನು. ಶಿವಮಾರನು ರಾಷ್ಟ್ರಕೂಟರ ಸೆರೆ ಮನೆಯಲ್ಲಿದ್ದು ಜೈನಧರ್ಮಕ್ಕೆ ತನ್ನ ನಿಷ್ಠೆಯನ್ನು ತೋರಿಸಿದಂತೆ ತೋರುತ್ತದೆ. ಇವನು ಜೈನ ಧರ್ಮವನ್ನು ಸ್ವೀಕರಿಸಿ ಆ ಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದ. ಸೆರೆಮನೆಯಲ್ಲಿದ್ದಾಗಲೇ ಕುಮ್ಮಡವಾಡ ಎಂಬಲ್ಲಿ ಒಂದು ಜೈನ ಬಸದಿಯನ್ನು ಕಟ್ಟಿಸಿದನು. ಅನಂತರ ಶ್ರವಣಬೆಳಗೊಳದಲ್ಲಿ ಜೈನ ಬಸದಿಗಳನ್ನು ಕಟ್ಟಿಸಿದನು. ಇದುವರೆಗೂ ದೊರೆತಿರುವ ಸಮಕಾಲೀನ ಶಾಸನಗಳ ಪ್ರಕಾರ ಗಂಗ ಮನೆತನದಲ್ಲಿ ಎರಡನೇ ಶಿವಮಾರನೇ ಸ್ವತಃ ಜೈನ ಬಸದಿಯನ್ನು ಕಟ್ಟಿಸಿದ ಪ್ರಪ್ರಥಮ ರಾಜನಾಗಿದ್ದಾನೆ. ಇವನು ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದುದಲ್ಲದೆ ತಾನೇ ಕನ್ನಡದಲ್ಲಿ ಗಜಾಷ್ಟಕ ಎಂಬ ಗ್ರಂಥವನ್ನು ರಚಿಸಿದನು.

ಶಿವಮಾರನ ಮರಣದ ನಂತರ ಒಂದನೇ ಮಾರಸಿಂಹ ಕ್ರಿ.ಶ. 812-817 ರವರೆಗೂ, ಎರಡನೇ ಮಾರಸಿಂಹನೂ ಕ್ರಿ.ಶ. 880-912 ರವರೆಗೂ, ಕೋಲಾರದ ಉಪಶಾಖೆಯಾಗಿ ಮುಂದುವರಿಯಿತು. ಆದರೆ ಬಹಳ ಕಾಲ ಸ್ವತಂತ್ರ್ಯವಾಗಿ ಮುಂದುವರಿಯದೆ ತಲಕಾಡಿನ ಮೂಲ ಸಂತತಿಯ ರಾಜ್ಯದೊಡನೆ ವಿಲೀನವಾಯಿತು. ತಲಕಾಡಿನ ಎರಡನೇ ಮಾರಸಿಂಹನ ತರುವಾಯ ಇವನ ಚಿಕ್ಕಪ್ಪ ವಿಜಯಾದಿತ್ಯನು ರಾಜನಾಗಿ ಸ್ವಲ್ಪ ಕಾಲ ಅಧಿಕಾರ ನಡೆಸಿದನು. ವಿಜಯಾದಿತ್ಯ ತನ್ನ ಮಗನಾದ ರಾಜಮಲ್ಲನಿಗೆ ಅಧಿಕಾರ ವಹಿಸಿದನು.

***ರಾಚಮಲ್ಲನು*** ಕ್ರಿ.ಶ. 817 ರಿಂದ 853 ರವರೆಗೂ ಆಳಿದನು. ಇವನನ್ನು ಒಂದನೇ ರಾಜಮಲ್ಲ ಸತ್ಯವಾಕ್ಯ ಎಂಬ ಹೆಸರಿನಿಂದ ಕರೆಯಲಾಗಿದೆ. ರಾಜಮಲ್ಲನು ನೊಳಂಬ ಸಿಂಹಪೋತನ ಮಗಳನ್ನು ವರಿಸಿದ್ದನು. ರಾಷ್ಟ್ರಕೂಟ ನೃಪತುಂಗ ಚಕ್ರವರ್ತಿಯ ಮೇಲೆ ಯುದ್ಧ ಘೋಷಿಸಿದನು. ಹಿಂದೇ ರಾಷ್ಟ್ರಕೂಟರು ವಶಪಡಿಸಿಕೊಂಡಿದ್ದ ಪ್ರದೇಶವನ್ನು ಪುನಃ ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಒಂದನೇ ರಾಜಮಲ್ಲನು ಉತ್ತರ ಆರ್ಕಾಟ್ ಜಿಲ್ಲೆಯಲ್ಲಿರುವ ವಳ್ಳಿಮಲ್ಯೆ ಎಂಬಲ್ಲಿ ಒಂದು ಜೈನ ಗುಹಾಲಯವನ್ನು ನಿರ್ಮಿಸಿದನು. ಇವನ ಮರಾಣಾನಂತರ ನೀತಿಮಾರ್ಗ ಎರೆಗಂಗನು ರಾಜನಾದನು.

***ನೀತಿಮಾರ್ಗ ಎರೆಗಂಗನು*** ಕ್ರಿ.ಶ. 853 ರಿಂದ 870 ರವರೆಗೆ ಆಳಿದನು. ಇವನ ಆಳ್ವಿಕೆಯು ಗಂಗ ಮತ್ತು ರಾಷ್ಟ್ರಕೂಟ ಮನೆತನಗಳ ಹಗೆತನ ಮತ್ತು ಸಖ್ಯಕ್ಕೆ ಸಂಬಂಧಿಸಿದಂತೆ ಒಂದು ಮುಖ್ಯ ಮಜಲಾಗಿದೆ. ಇವನು ಬಾಣರನ್ನು ಸೋಲಿಸಿ ರಾಜ್ಯ ವಿಸ್ತರಿಸಿದನು. ಆ ವೇಳೆಗೆ ಅಧಿಕಾರದಲ್ಲಿ ಭದ್ರವಾಗಿ ನೆಲೆಯೂರಿದ್ದ ರಾಷ್ಟ್ರಕೂಟರ ಚಕ್ರವರ್ತಿ ಅಮೋಘವರ್ಷ ನೃಪತುಂಗನು ಗಂಗರ ಮೇಲೆ ಯುದ್ಧಹೂಡಿ ದೊಡ್ಡ ಸೈನ್ಯವನ್ನು ಕಳುಹಿಸಿದನು. ಕೋಲಾರ ಜಿಲ್ಲೆಯ ರಾಜರಮಡು ಎಂಬಲ್ಲಿ ಭೀಕರ ಯುದ್ಧ ಜರುಗಿತು. ನೀತಿಮಾರ್ಗನು ರಾಷ್ಟ್ರಕೂಟರ ಸೈನ್ಯವನ್ನು ಸಂಪೂರ್ಣವಾಗಿ

ಸೋಲಿಸಿದನು. ನೃಪತುಂಗನು ಗಂಗರೊಡನೆ ಸಂಧಾನವೇರ್ಪಡಿಸಿಕೊಳ್ಳಬೇಕಾಯಿತು. ಚಕ್ರವರ್ತಿಯು ತನ್ನ ಮಗಳನ್ನು ನೀತಿಮಾರ್ಗನ ಕುಮಾರನಾದ ಒಂದನೇ ಭೂತುಗನಿಗೆ ವಿವಾಹ ಮಾಡಿಕೊಟ್ಟನು. ಇದರಿಂದ ಈ ಎರಡು ಮನೆತನಗಳ ಮಧ್ಯೆ ಸುಮಾರು ಒಂದು ಶತಮಾನ ಕಾಲದ ಹಗೆತನ ಮತ್ತು ಕಾದಾಟ ಕೊನೆಗೊಂಡು ಮಧುರ ಬಾಂಧವ್ಯ ಏರ್ಪಟ್ಟಿತು. ನೀತಿಮಾರ್ಗನು ಜೈನಮತಕ್ಕೆ ಪ್ರೋತ್ಸಾಹ ನೀಡಿದನು. ಇವನ ತರುವಾಯ ರಾಜಮಲ್ಲನು ಅಧಿಕಾರಕ್ಕೆ ಬಂದನು.

ಇವನಿಗೆ ***ಎರಡನೇ ರಾಚಮಲ್ಲ ಸತ್ಯವಾಕ್ಯ*** ಎಂದು ಹೆಸರಾಗಿದೆ. ಇವನು ಕ್ರಿ.ಶ. 870 ರಿಂದ 907 ರವರೆಗೆ ಆಳಿದನು. ರಾಜಮಲ್ಲ ಸತ್ಯವಾಕ್ಯನು ಬಾಣರು, ಚೋಳರು ಮತ್ತು ವೆಂಗಿ ಚಾಳುಕ್ಯರ ಮೇಲೆ ಯುದ್ಧ ಮಾಡಿದನು. ಎಲ್ಲಾ ಯುದ್ಧಗಳಲ್ಲೂ ಜಯಗಳಿಸಿದನು. ಇವನು ಜೈನ ಧರ್ಮಿಯನಾದರೂ ಸಹ ಬ್ರಾಹ್ಮಣರಿಗೂ ವಿಶೇಷ ದಾನ ಧರ್ಮಗಳನ್ನು ಮಾಡಿದನು. ಕೊಡಗು ಜಿಲ್ಲೆಯಲ್ಲಿದ್ದ ಸತ್ಯವಾಕ್ಯ ಎಂಬ ಜೈನ ಬಸದಿಗೆ ಕ್ರಿ.ಶ. 890 ರಲ್ಲಿ ಲಕ್ಷ್ಮಣತೀರ್ಥದ ದಂಡೆಯಲ್ಲಿ 12 ಗ್ರಾಮಗಳನ್ನು ದತ್ತಿಯಾಗಿ ನೀಡಿದನು. ರಾಚಮಲ್ಲನಿಗೆ ಗಂಡುಮಕ್ಕಳಿರಲಿಲ್ಲ. ಆದ್ದರಿಂದ ತನ್ನ ತಮ್ಮ ಭೂತುಗನ ಮಗನಾದ ಎರೆಯಪ್ಪನನ್ನು ಯುವರಾಜನನ್ನಾಗಿ ನೇಮಿಸಿದನು. ಇವನ ಮರಣದ ತರುವಾಯ ನೀತಿಮಾರ್ಗ ಎರೆಯಪ್ಪನು ರಾಜನಾದನು.

ಇವನನ್ನು ***ಎರಡನೇ ನೀತಿ ಮಾರ್ಗ ಎರೆಯಪ್ಪ*** ಎಂದು ಕರೆಯಲಾಗಿದೆ. ಇವನು ಕ್ರಿ.ಶ. 907 ರಿಂದ 920 ರವರೆಗೆ ಆಳಿದನು. ನೊಳಂಬರಿಗೂ ಗಂಗರಿಗೂ ನಡೆದ ಯುದ್ಧವು ಎರಡನೇ ನೀತಿಮಾರ್ಗ ಎರೆಯಪ್ಪನ ಕಾಲದ ಪ್ರಮುಖ ಘಟನೆಗಳಲ್ಲೊಂದಾಗಿದೆ. ಗಂಗರ ದಂಡನಾಯಕನಾದ ನಾಗತ್ತರ ಎಂಬುವನು ಈ ಯುದ್ಧದಲ್ಲಿ ಮಡಿದನು. ನೀತಿಮಾರ್ಗನು ತಾನೇ ಸೈನ್ಯದ ಮುಖಂಡತ್ವವನ್ನು ವಹಿಸಿ ಹೋರಾಡಿ ನೊಳಂಬ ರಾಜ ವೀರ ಮಹೇಂದ್ರನನ್ನು ಕೊಂದನು. ಇವನ ತರುವಾಯ ಇವನ ಹಿರಿಯ ಮಗ ನರಸಿಂಹದೇವನು ಕ್ರಿ.ಶ. 920 ರಿಂದ 925 ರವರೆಗೂ ಆಳಿದನು. ಅವನ ತರುವಾಯ ಅವನ ಸಹೋದರ ಮೂರನೇ ರಾಚಮಲ್ಲ ಸತ್ಯವಾಕ್ಯ ಎಂದು ಕರೆಯಲಾಗಿದೆ. ಇವನ ತಮ್ಮನಾದ ಎರಡನೇ ಭೂತುಗನು ತಾನೇ ಸಿಂಹಾಸನವನ್ನು ಪಡೆಯಲು ಕಾತುರನಾಗಿದ್ದನು. ಸಿಂಹಾಸನಕ್ಕಾಗಿ ಕಚ್ಚಾಟಗಳು ನಡೆದವು. ಭೂತುಗನು ತನ್ನ ಭಾವ ಮೈದುನನಾದ ರಾಷ್ಟ್ರಕೂಟ ಮೂರನೇ ಕೃಷ್ಣನ ಸಹಾಯದಿಂದ ಮೂರನೇ ರಾಚಮಲ್ಲನನ್ನು ಕೊಂದು ತಾನೇ ರಾಜನಾದನು.

***ಎರಡನೇ ಭೂತುಗನು*** ಕ್ರಿ.ಶ. 939 ರಿಂದ 960 ರವರೆಗೂ ಆಳಿದನು. ಆ ವೇಳೆಗೆ ಅವನ ಮಾವನಾದ ಎರಡನೇ ಅಮೋಘವರ್ಷನು ಗತಿಸಿದನು. ಆ ಸಮಯದಲ್ಲಿ ಮೂರನೇ ಕೃಷ್ಣನು ಉತ್ತರದ ದಂಡಯಾತ್ರೆಯಲ್ಲಿ ತೊಡಗಿದ್ದನು. ಮಾನ್ಯಖೇಟದಲ್ಲಿ ಲಲ್ಲಯ್ಯ ಎಂಬುವನು ದಂಗೆ ಎದ್ದು ಸಿಂಹಾಸನವನ್ನು ಆಕ್ರಮಿಸಿದನು. ಭೂತುಗನು ರಾಷ್ಟ್ರಕೂಟ ರಾಜಧಾನಿಗೆ ಧಾವಿಸಿ ದಂಗೆಕೋರ ಲಲ್ಲಯ್ಯನನ್ನೂ ಸದೆಬಡಿದು ಅವನಿಂದ ಸಿಂಹಾಸನವನ್ನೂ ಇತರ ಲಾಂಛನಗಳನ್ನು ವಶಪಡಿಸಿಕೊಂಡು ಆ ವೇಳೆಗೆ ರಾಜಧಾನಿಗೆ ಹಿಂತಿರುಗಿದ ಕೃಷ್ಣನಿಗೆ ವಹಿಸಿದನು. ರಾಷ್ಟ್ರಕೂಟ ಸಂತತಿಗೆ ಒದಗಿದ್ದ ವಿಪತ್ತಿನಿಂದ ಅದನ್ನು ಭೂತುಗನು ಪಾರುಮಾಡಿದನು. ಭೂತುಗನ ಸಹಾಯಕ್ಕೆ ಮೆಚ್ಚಿ ರಾಷ್ಟ್ರಕೂಟ ಸಾರ್ವಭೌಮನು ಬಳುವಳಿಯಾಗಿ ಪುಲಿಗೆರೆ, ಬಿಳುವೊಲ ಕಿಸುಗಾಡು ಮತ್ತು ಬಾಗೆನಾಡುಗಳನ್ನು ಕೊಟ್ಟನು. ಗಂಗ ರಾಜ್ಯವು ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳವರೆಗೂ ವಿಸ್ತರಿಸಿತು. ಇದೇ ವೇಳೆಗೆ ತಮಿಳುನಾಡಿನಲ್ಲಿ ಪಲ್ಲವರನ್ನು ಸೋಲಿಸಿ ಚೋಳರು ಪ್ರವರ್ಧಮಾನಕ್ಕೆ ಬಂದಿದ್ದರು. ಚೋಳ ಸಂತತಿಯ ಪರಾಂತಕನು ಗಂಗವಾಡಿಯತ್ತ ರಾಜ್ಯ ವಿಸ್ತರಿಸುವ ಯೋಜನೆಯನ್ನು ಹಾಕಿಕೊಂಡಿದ್ದನು. ಆದ್ದರಿಂದ ಗಂಗರಿಗೂ ಚೋಳರಿಗೂ ಘರ್ಷಣೆಗಳು ಪ್ರಾರಂಭವಾದವು. ರಾಷ್ಟ್ರಕೂಟ ಮುಮ್ಮಡಿ ಕೃಷ್ಣ ಮತ್ತು ಗಂಗ ಇಮ್ಮಡಿ ಭೂತುಗ ಇವರ ನೇತೃತ್ವದಲ್ಲಿ ದೊಡ್ಡ ಸೈನ್ಯವು ತಮಿಳುನಾಡಿನತ್ತ ಧಾವಿಸಿತು. ಕ್ರಿ.ಶ. 949 ರಲ್ಲಿ ಸುಮಾರಿನಲ್ಲಿ ತಕ್ಕೋಲಂ ಎಂಬಲ್ಲಿ

ಭೀಕರವಾದ ಯುದ್ಧವು ನಡೆದು ಚೋಳ ಸೈನ್ಯವು ಸೋತು ಪರಾರಿಯಾಯಿತು. ಕೃಷ್ಣ ಮತ್ತು ಭೂತುಗ ಕಂಚಿಯವರೆಗೂ ದಂಡೆಯಾತ್ರೆ ಹೋದರು. ಚೋಳರು ಈ ಅಪಘಾತದಿಂದ ಚೇತರಿಸಿಕೊಳ್ಳಲು ಹಲವಾರು ವರ್ಷಗಳು ಬೇಕಾಯಿತು. ಹೀಗೆ ಭೂತುಗನು ರಾಷ್ಟ್ರಕೂಟ ಸಿಂಹಾಸನವನ್ನು ಆಪತ್ತಿನಿಂದ ಪಾರುಮಾಡಿ, ಚೋಳರ ಆಕ್ರಮಣದಿಂದ ಕನ್ನಡ ನಾಡನ್ನು ಸಂರಕ್ಷಿಸಿದರು. ಇವನ ತರುವಾಯ ಇವನ ಎರಡನೇ ಮಗನಾದ ಮಾರಸಿಂಹನು ರಾಜನಾದನು.

***ಮೂರನೇ ಮಾರಸಿಂಹ*** ಕ್ರಿ.ಶ. 960 ರಿಂದ 974 ರವರೆಗೆ ಆಳಿದನು. ಇವನ ಆಳ್ವಿಕೆ ಕಾಲವೂ ಕರ್ನಾಟಕದ ಚರಿತ್ರೆಯಲ್ಲಿ ಮುಖ್ಯ ಘಟನಾವಳಿಗಳಿಂದ ಕೂಡಿದೆ. ರಾಷ್ಟ್ರಕೂಟ - ಗಂಗರ ಅಸಾಧಾರಣ ಮೈತ್ರಿ, ಗುರ್ಜರ ರಾಜ್ಯದ ಆಕ್ರಮಣ, ನೊಳಂಬ ಪ್ರಭಾವದ ನಿರ್ಮೂಲನ, ರಾಷ್ಟ್ರಕೂಟ ಸಂತತಿಯ ಅಂತ್ಯ, ಕಲ್ಯಾಣ ಚಾಳುಕ್ಯ ಸಾಮ್ರಾಜ್ಯದ ಉದಯ, ಸಾಹಿತ್ಯ ಮತ್ತು ಕಲೆಯ ಪ್ರೋತ್ಸಾಹ ಮೊದಲಾದವು ಇವನ ಕಾಲದ ಮುಖ್ಯ ಘಟನೆಗಳು. ಮೂರನೇ ಮಾರಸಿಂಹನು ಗಂಗ ಸಂತತಿಯ ಅತ್ಯಂತ ಸಮರ್ಥ ಪ್ರಭುಗಳಲ್ಲೊಬ್ಬನು. ರಾಷ್ಟ್ರಕೂಟರ ಮೂರನೇ ಕೃಷ್ಣನ ಪರವಾಗಿ ಮಾಳವ ಗುಜರಾತಿನವರೆಗೂ ಯಶಸ್ವಿ ದಂಡಯಾತ್ರೆ ಕೈಗೊಂಡು 'ಗುರ್ಜರ ರಾಜಾಧಿರಾಜ' ಎಂಬ ಬಿರುದನ್ನು ಪಡೆದು ತನ್ನ ರಾಜ್ಯವನ್ನು ವಿಸ್ತರಿಸಿದನು. ನೊಳಂಬರನ್ನು ಸೋಲಿಸಿ 'ನೊಳಂಬ ಕುಲಾಂತಕ' ಎಂಬ ಬಿರುದನ್ನು ಹೊಂದಿದ್ದನು. ರಾಷ್ಟ್ರಕೂಟರ ಮನೆತನವನ್ನು ಉಳಿಸಲು ಅವನು ಪ್ರಯತ್ನ ಪಟ್ಟರೂ ಸಫಲವಾಗಲಿಲ್ಲ. ಚಾವುಂಡರಾಯನು ಗಂಗರ ಮಂತ್ರಿಯಾಗಿದ್ದು ಅನೇಕ ಯುದ್ಧಗಳಲ್ಲಿ ಪರಾಕ್ರಮದಿಂದ ಹೋರಾಡಿದನು. ಮಾರಸಿಂಹನ ಕೂಡಲೂರು ಶಾಸನದ ಪ್ರಕಾರ ಇವನಿಗೆ ನನ್ನಿಯ ಗಂಗ, ಛಲದುತ್ತರಂಗ, ಗಂಗವಜ್ರ, ಗಂಗಸಿಂಹ, ಗಂಗಚೂಡಾಮಣಿ ಮೊದಲಾದ ಅನೇಕ ಬಿರುದುಗಳಿದ್ದುವೆಂದು ತಿಳಿದು ಬರುತ್ತದೆ. ಮೂರನೇ ಮಾರಸಿಂಹನ ತರುವಾಯ ಅವನ ಮಗನಾದ ***ನಾಲ್ಕನೇ ರಾಚಮಲ್ಲ ಸತ್ಯವಾಕ್ಯನು*** ಕ್ರಿ.ಶ. 974 ರಿಂದ 985 ರವರೆಗೆ ರಾಜ್ಯಾವಾಳಿದನು. ರಾಜಮಲ್ಲನ ಆಳ್ವಿಕೆ ಕಾಲದಲ್ಲಿ ಅವನ ಮುಖ್ಯಮಂತ್ರಿ ಮತ್ತು ದಂಡನಾಯಕನಾಗಿದ್ದ ***ಚಾವುಂಡರಾಯನು*** ಪ್ರಮುಖ ಪಾತ್ರ ವಹಿಸಿದನು. ಚಾವುಂಡರಾಯನು ಜೈನ ಧರ್ಮಾವಲಂಬಿಯಾಗಿದ್ದು ಚಾವುಂಡರಾಯ ಪುರಾಣ ಎಂಬ ಗ್ರಂಥವನ್ನು ರಚಿಸಿದನು. ಜೈನ ತೀರ್ಥಂಕರರನ್ನು ಕುರಿತು ಕನ್ನಡ ಭಾಷೆಯಲ್ಲಿ ರಚಿಸಿದ ಕೃತಿ. ಇತಿಹಾಸದಲ್ಲಿ ಮೇರು ಶಿಲ್ಪಕೃತಿಯಾದ ಶ್ರವಣಬೆಳಗೊಳದ 58 ಅಡಿ ಎತ್ತರದ ಗೊಮ್ಮಟ ವಿಗ್ರಹವನ್ನು ಅಖಂಡ ಶಿಲೆಯಿಂದ ಕ್ರಿ.ಶ. 982 ರಲ್ಲಿ ಕೆತ್ತಿಸಿದನು. ಅವನ ಅವಿರತ ಶ್ರದ್ಧೆ ಹಾಗೂ ಪ್ರೋತ್ಸಾಹ ಫಲವಾಗಿ ಶ್ರವಣಬೆಳಗೊಳ ಇಂದಿಗೂ ಭಾರತದಲ್ಲಿ ಜೈನರ ಪವಿತ್ರ ಕ್ಷೇತ್ರವಾಗಿ ಉಳಿದು ಬಂದಿದೆ. ತನ್ನ ತಾಯಿಯ ಅಭಿಲಾಷೆಯಂತೆ ಚಾವುಂಡರಾಯನು ಈ ಉತ್ತುಂಗ ವಿಗ್ರಹವನ್ನು ಕೆತ್ತಿಸಿದ್ದೇ ಅಲ್ಲದೆ, ಮಹಾಮಸ್ತಕಾಭಿಷೇಕವನ್ನೂ ನೆರವೇರಿಸಿದನು. ಪರಾಕ್ರಮ, ಸ್ವಾಮಿನಿಷ್ಠೆ, ಸ್ವಧರ್ಮನಿಷ್ಠೆ, ಪರಮಧರ್ಮ ಸಹಿಷ್ಣುತೆ, ಸಾಹಿತ್ಯ ರಚನೆ ಮತ್ತು ಬೃಹತ್ ಶಿಲ್ಪ ನಿರ್ಮಾಣ ಇವುಗಳಿಂದ ಚಾವುಂಡರಾಯನ ಹೆಸರು ಕರ್ನಾಟಕದ ಇತಿಹಾಸದಲ್ಲಿ ಅಜರಾಮರವಾಗಿದೆ. ನಾಲ್ಕನೇ ರಾಚಮಲ್ಲ ಸತ್ಯವಾಕ್ಯನ ತರುವಾಯ ಕ್ರಿ.ಶ. 985 ರಲ್ಲಿ ಅವನ ಮಗ ***ರಕ್ಕಸ ಗಂಗನು ರಾಜನಾಗಿ*** 1024 ರವರೆಗೆ ಆಳಿದನು. ಕ್ರಿ.ಶ. 990 ರಲ್ಲಿ ದಕ್ಷಮಂತ್ರಿ ಚಾವುಂಡರಾಯನ ಮರಣದ ನಂತರ ಗಂಗರ ಆಳ್ವಿಕೆ ಮುಂದುವರೆಯುವುದು ದುರ್ಲಭವಾಯಿತು. ಈ ಕಾಲದಲ್ಲಿ ಚೋಳರು ಪ್ರಾಬಲ್ಯಕ್ಕೆ ಬಂದು ಕರ್ನಾಟಕದ ಅನೇಕ ಭಾಗಗಳನ್ನು ಆಕ್ರಮಿಸಿಕೊಂಡರು. ಗಂಗವಾಡಿಯನ್ನು ಜಯಿಸುವ ಕಾರ್ಯವನ್ನು ವಹಿಸಿಕೊರಡ ಯುವರಾಜ ರಾಜೇಂದ್ರನು ಕ್ರಿ.ಶ. 1004 ರಲ್ಲಿ ದೊಡ್ಡ ಸೈನ್ಯದೊಂದಿಗೆ ತಲಕಾಡನ್ನು ಮುತ್ತಿ ವಶಪಡಿಸಿಕೊಂಡು 700 ವರ್ಷಗಳ ಗಂಗರ ದೀರ್ಘ ಆಳ್ವಿಕೆಯನ್ನು ಕೊನೆಗಾಣಿಸಿದನು. ರಕ್ಕಸ ಗಂಗನು ಸ್ವಲ್ಪ ಕಾಲ ಸಾಮಂತ ಅರಸನಾಗಿ ಮುಂದುವರಿದನು. ಕೊಡಗು ಜಿಲ್ಲೆಯಿಂದ ಕೋಲಾರ ಜಿಲ್ಲೆಯವರೆಗೂ ಕೊಯಮತ್ತೂರು ಸೇಲಂ ಜಿಲ್ಲೆಗಳಿಂದ ಬಳ್ಳಾರಿ ಧಾರವಾಡ ಜಿಲ್ಲೆಗಳವರೆಗೂ ಅದು ವ್ಯಾಪಿಸಿದ್ದಿತು. ತಲಕಾಡು ಗಂಗರ ರಾಜಧಾನಿಯಾಗಿದ್ದಿತು. ನೆಲಮಂಗಲ

ತಾಲ್ಲೂಕಿನ ಮಣ್ಣೆ (ಮಾನ್ಯಾಪುರ) ಮತ್ತು ಚನ್ನಪಟ್ಟಣದ ಬಳಿಯ ಮಾರಿಕುಂದ ಗ್ರಾಮಗಳು ಹಲವು ಕಾಲ ಅವರ ಉಪರಾಜಧಾನಿಗಳಾಗಿದ್ದವು. ಗಂಗ ಸಂತತಿಯ ಅರಸರು ಪ್ರಜಾಹಿತ ಸಾಧನೆಯನ್ನು ತಮ್ಮ ಮುಖ್ಯ ಗುರಿಯನ್ನಾಗಿಸಿಕೊಂಡಿದ್ದರು. ಈ ಸಂತತಿಯ ಆರಂಭದ ಅರಸರು ವೈಧಿಕ ಮತಾವಲಂಬಿಯಾಗಿದ್ದಾಗ್ಯೂ ಇತರೆ ಧರ್ಮಗಳ ಬೆಳವಣಿಗೆಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟರು.

## 8.6 ಸಾರಾಂಶ

ಈ ಘಟಕವು ಗಂಗರ ರಾಜಕೀಯ ಹಿನ್ನಲೆ, ಮೂಲ ಮತ್ತು ಸುಧೀರ್ಘ ರಾಜಕೀಯ ಇತಿಹಾಸವನ್ನು ನಿಮಗೆ ಮನದಟ್ಟು ಮಾಡಿಕೊಟ್ಟಿದೆ. ಇವರ ಮೂಲಕ್ಕೆ ಸಂಬಂಧಿಸಿದಂತೆ ಪೌರಾಣಿಕ ವಿವರಣೆಗಳು, ವಿದ್ವಾಂಸರ ನಡುವಿನ ಭಿನ್ನಾಭಿಪ್ರಾಯಗಳು ಮತ್ತು ಸ್ಥಳೀಯ ಮೂಲದ ಬಗ್ಗೆ ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ನೀವು ಗಮನಿಸಿದ್ದೀರಿ.

ಇವರ ಸುಧೀರ್ಘ ರಾಜಕೀಯ ಇತಿಹಾಸವನ್ನು ಅಧ್ಯಯನ ಸೌಲಭ್ಯ ದೃಷ್ಟಿಯಿಂದ ಮೂರು ಹಂತಗಳಲ್ಲಿ ಇವರ ರಾಜಕೀಯ ಇತಿಹಾಸವನ್ನು ವಿಂಗಡಿಸಿ ನಿಮಗೆ ಅರ್ಥೈಯಿಸಲು ಪ್ರಯತ್ನ ಮಾಡಲಾಗಿದೆ. ಆರಂಭದ ಗಂಗರಸರಲ್ಲಿ ಒಂದನೇ ಮಾಧವ, ಅವೀನೀತರ ಪ್ರಮುಖ ರಾಜಕೀಯ ಸಾಧನೆಗಳನ್ನು ವಿವರಿಸಿ ನಿಮಗೆ ಮನವರಿಕೆ ಮಾಡಿಕೊಡಲಾಗಿದೆ.

ಹಾಗೆಯೇ ಎರಡನೇ ಹಂತದಲ್ಲಿ ಗಂಗರ ಅರಸರಲ್ಲೆ ಅಗ್ರಗಣ್ಯ ಸಾಮ್ರಾಟನಾದ ದುರ್ವಿನೀತನ ರಾಜ್ಯ ವಿಸ್ತರಣೆ ಹಾಗೂ ಸಾಂಸ್ಕೃತಿಕ ಸಾಧನೆಗಳನ್ನು ವಿವರಿಸಲಾಗಿದೆ. ಇವನ ತರುವಾಯ ಬಂದ ಭುವಿಕ್ರಮ, ಒಂದನೇ ಶಿವಮಾರ ಮತ್ತು ಶ್ರೀಪುರುಷರ ರಾಜಕೀಯ ಹೋರಾಟವನ್ನು ಚಿತ್ರಿಸಲಾಗಿದೆ.

ಮೂರನೇ ಹಂತದಲ್ಲಿ ಎರಡನೇ ಶಿವಮಾರ, ಒಂದನೇ ಮಾರಸಿಂಹ, ಎರಡನೇ ಭೂತುಗ, ಮೂರನೇ ಮಾರಸಿಂಹ, ನಾಲ್ಕನೇ ರಾಜಮಲ್ಲ ಸತ್ಯವಾಕ್ಯ ಮತ್ತು ಅವನ ಮಂತ್ರಿ ಚಾವುಂಡರಾಯನ ಪ್ರಮುಖ ಸಾಧನೆಗಳನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಮತ್ತು ಗಂಗ ಮನೆತನ ಚೋಳರ ಆಕ್ರಮಣದಿಂದ ಹೇಗೆ ಅಂತ್ಯಗೊಂಡಿತೆಂಬ ವಿಷಯವನ್ನು ನೀವು ಈ ಘಟಕದಲ್ಲಿ ತಿಳಿದಿದ್ದೀರಿ.

ಗಂಗರ ರಾಜಕೀಯ ಇತಿಹಾಸದಲ್ಲಿ ನೀವೂ ಮತ್ತೊಂದು ವಿಷಯವನ್ನು ಗಮನಿಸಿದ್ದೀರಿ. ಅದು ಗಂಗರು ಸಮಕಾಲೀನ ರಾಜ್ಯ ಮತ್ತು ರಾಜಮನೆತನಗಳೊಂದಿಗೆ ಹೊಂದಿದ್ದ ರಾಜಕೀಯ ಸಂಬಂಧಗಳನ್ನು ಮೂರು ಹಂತಗಳಲ್ಲೂ ಮನಗಂಡಿದ್ದೀರಿ. ಕದಂಬರು, ಚಾಳುಕ್ಯರೊಡನೆ ಇವರು ಹೊಂದಿದ್ದ ಸಂಬಂಧ ಹಾಗೂ ಪಲ್ಲವರೊಡನೆ ಇವರು ನಡೆಸಿದ ಧೀರ್ಘ ಹೋರಾಟ, ರಾಷ್ಟ್ರಕೂಟ ಹಾಗೂ ಕೊನೆಯಲ್ಲಿ ಚೋಳರೊಡನೆ ಇವರ ಸಂಘರ್ಷಗಳನ್ನು ನೀವೂ ಈ ಪಾಠದಲ್ಲಿ ತಿಳಿದಿದ್ದೀರಿ.

## 8.7 ಸ್ವಪರೀಕ್ಷೆ ಪ್ರಶ್ನೆಗಳು

1. ಗಂಗರ ಆರಂಭದ ಇತಿಹಾಸವನ್ನು ಕುರಿತು ಚರ್ಚಿಸಿ
2. ಗಂಗರ ಇತಿಹಾಸದಲ್ಲಿ ದುರ್ವಿನೀತನ ಸ್ಥಾನವನ್ನು ನಿರ್ಧರಿಸಿ
3. ಗಂಗರಿಗೂ ಪಲ್ಲವರಿಗೂ ನಡೆದ ಸಂಘರ್ಷವನ್ನು ವಿವರಿಸಿ
4. ಸಂಕ್ಷಿಪ್ತವಾಗಿ ಗಂಗರ ರಾಜಕೀಯ ಇತಿಹಾಸವನ್ನು ವಿವರಿಸಿ
5. ಗಂಗರು ಸಮಕಾಲೀನ ರಾಜಮನೆತನಗಳೊಂದಿಗೆ ಹೊಂದಿದ್ದ ಸಂಬಂಧವನ್ನು ವಿವರಿಸಿ.

## 8.8 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1. Sheik Ali B. : History of the Westorn Gangas of Talkad.
2. Krishna Rao M.V. : History of Gangas of Talkad
3. Diwakar R.R. (Ed) : Karnataka through the Ages
4. Desai P.B. : A History of Karnataka
5. ಪಂಚಮುಖಿ ಆರ್.ಎಸ್. ಮತ್ತು ಲಕ್ಷ್ಮಿನಾರಾಯಣ ರಾವ್ ಎನ್. : ಕನ್ನಡ ನಾಡಿನ ಅರಸುಮನೆ ಶವಗಳು
6. ರಂಗಸ್ವಾಮಯ್ಯ ಜಿ.ಆರ್. : ಸಂಕ್ಷಿಪ್ತ ಕರ್ನಾಟಕದ ಚರಿತ್ರೆ
7. Mahalingam T.V. : South Indian Polity
8. Karashima .N. : South Indian History and Society
9. Narayanan M.G.S. : Re-Interpretations in South Indian History
10. Nagaraj H.M. : ಗಂಗ ಪ್ರಭು - ದೃವನೀತ
11. Shivanna : Rashtrakuta Rerelations with the Gangas of Talkad
12. Surendra Rao (Ed) : ಕರ್ನಾಟಕ ಚರಿತ್ರೆ ಸಂ.2, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
13. Sundar A. (Ed) : ಕರ್ನಾಟಕ ಚರಿತ್ರೆ ಸಂ.1, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ


ಪ್ರೊ॥ ಮಾದೇಗೌಡ

# ಘಟಕ-9

# ಗಂಗರ ಕಾಲದ ಸಮಾಜ ಮತ್ತು ಸಂಸ್ಕೃತಿ

ವಿಷಯ ಕ್ರಮ


9.0 ಘಟಕದ ಉದ್ದೇಶ

9.1 ಪೀಠಿಕೆ

9.2 ಆಡಳಿತ ವ್ಯವಸ್ಥೆ

9.3 ಸಾಮಾಜಿಕ ಪರಿಸ್ಥಿತಿ

9.3.1 ಜಾತಿ ಪದ್ಧತಿ

9.3.2 ಕುಟುಂಬ

9.3.3 ಮಹಿಳೆಯರು

9.4 ಧಾರ್ಮಿಕ ಪರಿಸ್ಥಿತಿ

9.5 ಶಿಕ್ಷಣ

9.6 ಕಲೆ

9.7 ಸಾಹಿತ್ಯ

9.8 ಸಾರಾಂಶ

9.9 ಸ್ವಪರೀಕ್ಷೆ ಪ್ರಶ್ನೆಗಳು

9.10 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 9.0 ಘಟಕದ ಉದ್ದೇಶ

ಗಂಗರ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯನ್ನು ತಿಳಿಯಪಡಿಸುವುದು ಈ ಘಟಕದ ಉದ್ದೇಶವಾಗಿದೆ. ಈ ಪಾಠವನ್ನು ಅಧ್ಯಯನ ಮಾಡಿದ ಮೇಲೆ ಈ ಕೆಳಗಿನ ವಿಷಯಗಳನ್ನು ಕಲಿಯುವಿರಿ:

ಗಂಗರ ಆಡಳಿತ ವ್ಯವಸ್ಥೆಯ ರಾಜಕೀಯ ಆದರ್ಶ ಮತ್ತು ಔದಾರ್ಯ ನೀತಿಗಳನ್ನು ಅರಿಯುವಿರಿ.

* ಸಾಮಾಜಿಕ ಸಂರಚನೆಯಲ್ಲಿ ಜಾತಿ ಪದ್ಧತಿ, ಕೌಟುಂಬಿಕ ನಿರ್ವಹಣೆ, ಮಹಿಳೆಯರ ಸ್ಥಾನ ಮತ್ತು ಅಂದಿನ ಕಾಲದ ಮನರಂಜನೆ, ಆಟಪಾಠಗಳನ್ನು ಗಮನಿಸಬಹುದು.
* ಇವರ ಕಾಲದ ಧಾರ್ಮಿಕ ಜೀವನದಲ್ಲಿ ವೈದಿಕ, ಜೈನಮತದ ಪ್ರಭಾವವನ್ನು ಗುರುತಿಸುವಿರಿ - ಬೌದ್ಧಮತ ಕ್ಷೀಣಸ್ಥಿತಿಯಲ್ಲಿರುವುದನ್ನು ಮನಗಾಣುವಿರಿ. ವೈದಿಕ ದೇವಾಲಯಗಳು ಮತ್ತು ಜೈನ ಬಸದಿಗಳ ನಿರ್ಮಾಣ ಬಗೆಗೆ ಮಾಹಿತಿಗಳನ್ನು ತಿಳಿಯುವಿರಿ.
* ಇವರ ಕಾಲದಲ್ಲಿ ನಿರ್ಮಾಣಗೊಂಡ ವೈದಿಕ ಮತ್ತು ಜೈನ ಕಲಾ ಸ್ಮಾರಕಗಳನ್ನು ತಿಳಿಯುವಿರಿ ಮತ್ತು ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ಆರಂಭದ ಬೆಳವಣಿಗೆ ಕುರುಹುಗಳನ್ನು ಗುರುತಿಸುವಿರಿ.

## 9.1 ಪೀಠಿಕೆ

ಗಂಗಮನೆತನವು ಕ್ರಿ.ಶ. 4 ನೇ ಶತಮಾನದ ಮಧ್ಯದಲ್ಲಿ ಪ್ರಾರಂಭವಾಗಿ ಕ್ರಿ.ಶ. 11 ನೇ ಶತಮಾನದ ಪೂರ್ವಾರ್ಧದವರೆಗೂ ಧೀರ್ಘ ಆಳ್ವಿಕೆ ನಡೆಸಿದ ಏಕೈಕ ರಾಜಮನೆತನವಾಗಿದೆ. ಈ ದೀರ್ಘ ಕಾಲಾವದಿಯಲ್ಲಿ ಅವರ ಸಾಂಸ್ಕೃತಿಕ ಸಾಧನೆ ಬಹುಮುಖವಾಗಿದೆ. ಇವರ ರಾಜ್ಯವನ್ನು ಗಂಗವಾಡಿ ತೊಂಭತ್ತಾರು ಸಾವಿರ ಎಂದು ಶಾಸನಗಳಲ್ಲಿ ನಿರ್ದೇಶಿಸಲಾಗಿದೆ. ತಲಕಾಡು ಇವರ ಮುಖ್ಯ ರಾಜಧಾನಿಯಾಗಿದುದಲ್ಲದೆ ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿದ್ದಿತು. ಈ ವಂಶದ ರಾಜರು ಹಾಕಿಸಿದ 800 ಕ್ಕೂ ಮಿಗಿಲಾದ ಶಾಸನಗಳು ಮತ್ತು ಛಾಪಿಸಿದ ಹಲವಾರು ಚಿನ್ನದ ನಾಣ್ಯಗಳು ಮತ್ತು ಇವರ ಕಾಲದಲ್ಲಿ ನಿರ್ಮಿಸಿದ ವೈದಿಕ ಪಂಥದ ದೇವಾಲಯಗಳು, ಜೈನ ಬಸದಿಗಳು ಮತ್ತು ಇತರ ಸ್ಮಾರಕಗಳು ಇವರ ಕಾಲದ ಕಲೆ, ಧರ್ಮ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಸಾರುವ ಪ್ರಮುಖ ಆಧಾರಗಳಾಗಿವೆ. ಇವರ ಆಡಳಿತ ಕ್ರಮ ಮತ್ತು ರಾಜಕೀಯ ಆದರ್ಶ, ಧ್ಯೇಯಗಳನ್ನು ಅರ್ಥ ಮಾಡಿಕೊಳ್ಳಲು ಅವರ ಕಾಲದಲ್ಲಿ ದೊರಕುವ ಸಾಹಿತ್ಯ ಮತ್ತು ಶಾಸನ ಆಧಾರಗಳು ಅತ್ಯಮೂಲ್ಯ ಮಾಹಿತಿಗಳನ್ನು ಒದಗಿಸಿಕೊಟ್ಟಿವೆ.

## 9.2 ಆಡಳಿತ ವ್ಯವಸ್ಥೆ

ಗಂಗವಾಡಿ - 96,000 ಎಂದು ಹೆಸರಾಗಿದ್ದ ಗಂಗರಾಜ್ಯ ಪ್ರಾರಂಭದಲ್ಲಿ ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ ಮತ್ತು ಕೊಡಗು ಜಿಲ್ಲೆಗಳಿಗೆ ಸೀಮಿತವಾಗಿತ್ತು. ಅನಂತರ ಗಂಗರಾಜರು ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಸಾಮ್ರಾಜ್ಯವನ್ನು ವಿಸ್ತರಿಸಿದರು. ಅವರ ಪ್ರವರ್ಧಮಾನ ಕಾಲದಲ್ಲಿ ಅವರ ರಾಜ್ಯವು ಕೊಡಗು ಜಿಲ್ಲೆಯಿಂದ ಕೋಲಾರ ಜಿಲ್ಲೆಯವರೆಗೂ, ಕೊಯಮತ್ತೂರು ಸೇಲಂ ಜಿಲ್ಲೆಗಳಿಂದ ಬಳ್ಳಾರಿ, ಧಾರವಾಡ ಜಿಲ್ಲೆಗಳವರೆಗೂ ವ್ಯಾಪಿಸಿತು. ಪ್ರಾರಂಭದಿಂದ ಕೊನೆಯವರೆಗೂ ತಲಕಾಡು ಅವರ ಮುಖ್ಯ ರಾಜಧಾನಿಯಾಗಿದ್ದರೂ, ಚನ್ನಪಟ್ಟಣ ಬಳಿಯ ಮಾಂಕುಂದ ಮತ್ತು ನೆಲಮಂಗಲ ತಾಲೂಕಿನ ಮಣ್ಣೆ (ಮಾನ್ಯಪುರ) ಗ್ರಾಮಗಳು ಹಲವು ಕಾಲ ಅವರ ಉಪ ರಾಜಧಾನಿಗಳಾಗಿದ್ದವು. ಆಡಳಿತ ಸಂಸ್ಕೃತಿಗೆ ಸಂಬಂಧಿಸಿದಂತೆ ಉದಾತ್ತ ಧ್ಯೇಯಗಳನ್ನು ಹೊಂದಿದ್ದ ಗಂಗರು, ಪ್ರಜೆಗಳ ಹಿತರಕ್ಷಣೆಗಾಗಿಯೇ ಆಡಳಿತದ ಜವಬ್ದಾರಿಯನ್ನು

ವಹಿಸಿಕೊಂಡಿದ್ದುದಾಗಿ ತಮ್ಮ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಈ ಸಂತತಿ ಪೂರ್ವಾರ್ಧ ಕಾಲದಲ್ಲಿ ಆಳಿದ ಮಾಧವ, ಹರಿವರ್ಮ, ಅವಿನೀತ, ದುರ್ವಿನೀತ, ಶ್ರೀಪುರುಷ ಮುಂತಾದ ಅರಸರು ವೈದಿಕ ಮತಾವಲಂಬಿಗಳಾಗಿದ್ದು ಮನು, ಕೌಟಿಲ್ಯರ ಗ್ರಂಥಗಳು ಹಾಗೂ ಸ್ಮೃತಿಗಳು ಮತ್ತು ಪುರಾಣಗಳಲ್ಲಿ ಪರಿಣಿತಿ ಹೊಂದಿದ್ದರು. ಸ್ವತಃ ವೈದಿಕ ಮತಾವಲಂಬಿಗಳಾಗಿದ್ದರೂ, ಇತರ ಮತಗಳಿಗೆ ಪ್ರೋತ್ಸಾಹವನ್ನಿತ್ತಿದ್ದರು. ವರ್ಣಾಶ್ರಮ ಧರ್ಮ ಪರಿಪಾಲನೆ, ಗೋಬ್ರಾಹ್ಮಣಸಂರಕ್ಷಣೆ, ದುಷ್ಟನಿಗ್ರಹ ಶಿಷ್ಟ ಪರಿಪಾಲನೆ, ಮೊದಲಾದ ರಾಜಕೀಯ ಮತ್ತು ಆಡಳಿತ ಕರ್ತವ್ಯಗಳನ್ನು ತಮ್ಮ ರಾಜಕೀಯ ಆದರ್ಶ ಸಂಸ್ಕೃತಿ ಎಂದು ಭಾವಿಸಿ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ಪರಿಪಾಲಿಸುತ್ತಿದ್ದರು. ತಮ್ಮನ್ನು ಧರ್ಮ ಮಹಾರಾಜರೆಂದು ಕರೆದುಕೊಂಡಿರುವುದು ಅವರ ರಾಜಕೀಯ ಆದರ್ಶ ಸಂಸ್ಕೃತಿಗೆ ಅನ್ವರ್ಥವಾಗಿದೆ. ರಾಜತ್ವವು ವಂಶಪಾರಂಪರ್ಯವಾಗಿದ್ದು ಹಿರಿಯ ಮಗನೇ ಉತ್ತರಾಧಿಕಾರಿಯಾಗುತ್ತಿದ್ದನು. ಆದರೂ ಅಧಿಕಾರಕ್ಕಾಗಿ ನಡೆಯುತ್ತಿದ್ದ ಅಂತಃಕಲಹಗಳಿಗೆ ಗಂಗರ ಮನೆತನವು ಹೊರತಾಗಿರಲಿಲ್ಲ. ಪರಿಣಾಮವಾಗಿ ಹಲವು ಸಾರಿ ಗಂಗ ಸಂತತಿಯು, ಒಂದೆರಡು ಶಾಖೆಗಳಾಗಿ ವಿಭಜನೆಯಾಗಿತ್ತು. ಆದರೆ ಪುನಃ ಸಮರ್ಥರಾಜರ ಕಾಲದಲ್ಲಿ ಮುಖ್ಯ ಶಾಖೆಯ ಆಳ್ವಿಕೆಗೊಳಪಡುತ್ತಿತ್ತು. ರಾಜ್ಯದ ಸರ್ವಶ್ರೇಷ್ಠ ಅಧಿಕಾರವನ್ನು ಹೊಂದಿದ್ದ ರಾಜನು, ಸೈನಿಕ ಪಡೆಯ ಸರ್ವೋಚ್ಛ ದಂಡನಾಯಕನಾಗಿದ್ದನು. ರಾಜನ ಆಸ್ಥಾನವು ಪಂಡಿತರು, ವಿದ್ವಾಂಸರು ಹಾಗೂ ಕವಿಗಳಿಂದ ಕೂಡಿತ್ತು.

ರಾಜ್ಯದ ಅಭ್ಯುದಯಕ್ಕಾಗಿ ಗಂಗ ಅರಸರು ಅನೇಕ ಸಾರ್ವಜನಿಕ ಯೋಜನೆಗಳನ್ನು ರೂಪಿಸಿ ಕೊಂಡಿದ್ದರು. ಸ್ವತಃ ಪಂಡಿತರೂ, ಕವಿಗಳೂ ಆಗಿದ್ದು, ಅನೇಕ ಗ್ರಂಥಗಳನ್ನು ರಚಿಸಿದ್ದ, ಈ ಸಂತತಿಯ ಅರಸರು ಜ್ಞಾನವರ್ಧನೆಗಾಗಿ ಅಗ್ರಹಾರಗಳನ್ನು ಸ್ಥಾಪಿಸಿದ್ದರು. ವ್ಯವಸಾಯಕ್ಕಾಗಿ ಕೆರೆ, ಕಾಲುವೆಗಳನ್ನು ನಿರ್ಮಿಸಿದರು ಮತ್ತು ವ್ಯಾಪಾರವನ್ನು ಪ್ರೋತ್ಸಾಹಿಸಿದರು. ಗಂಗ ಪ್ರಭುಗಳು ನಿರಂಕುಶರಾಗಿರಲಿಲ್ಲ. ಇವರ ಸಹಾಯಕ್ಕೆ ಮಂತ್ರಾಲೋಚನ ಸಭೆಯಿದ್ದಿತು. ಚಾವುಂಡರಾಯ, ಅಸಗಯ್ಯ, ಅಮಾವಾಸಯ್ಯ ಮೊದಲಾದ ಅನೇಕ ಸಚಿವರು ಮತ್ತು ದಂಡನಾಯಕರುಗಳೂ, ಅವರ ದಕ್ಷತೆಯೂ ಶಾಸನಗಳಿಂದ ತಿಳಿದು ಬರುತ್ತದೆ. ರಾಜ್ಯವನ್ನು ವಿಷಯ, ನಾಡು, ಮೊದಲಾದ ವಿಭಾಗಗಳಾಗಿ ವಿಂಗಡಿಸಲಾಗಿದ್ದಿತು. ಗ್ರಾಮವು ಆಡಳಿತದ ಅತಿ ಚಿಕ್ಕ ಘಟಕವಾಗಿದ್ದಿತು. ಯುವರಾಜ ಹಾಗೂ ಇತರರ ರಾಜಕುಮಾರರುಗಳನ್ನು ಪ್ರಾಂತ್ಯಗಳ ಅಧಿಕಾರಿಗಳನ್ನಾಗಿ ನೇಮಿಸುವ ಪದ್ಧತಿ ರೂಡಿಯಲ್ಲಿದ್ದಿತು. ಅಲ್ಲದೆ, ಗಂಗರ ಕಾಲದಲ್ಲಿ ರಾಣಿಯರು ಸಹ ಆಡಳಿತದಲ್ಲಿ ಭಾಗವಹಿಸುತ್ತಿದ್ದ ಅನೇಕ ನಿದರ್ಶನಗಳಿವೆ. ಹೆಗ್ಗಡೆ, ನಾಡಗೌಡ ಮೊದಲಾದವರು ನಾಡು ಮತ್ತು ಇತರ ವಿಭಾಗಗಳ ಮುಖ್ಯರಾಗಿದ್ದರು. ಹಳ್ಳಿಗಳಲ್ಲಿ ಗೌಡ ಮತ್ತು ಶೇನಬೋವರು ಆಡಳಿತವನ್ನು ನಿರ್ವಹಿಸುತ್ತಿದ್ದರು. ಗ್ರಾಮ ಸಭೆಗಳು ಸ್ಥಳೀಯ ಆಡಳಿತ ನಿರ್ವಹಿಸುವುದರಲ್ಲಿ ಸಹಕಾರಿಯಾಗಿದ್ದವು.

## 9.3 ಸಾಮಾಜಿಕ ಪರಿಸ್ಥಿತಿ

ಕದಂಬ ಮತ್ತು ಗಂಗರ ಕಾಲದ ವೇಳೆಗೆ ಕನ್ನಡ ನಾಡಿನಲ್ಲಿ ವೈಧಿಕ ಮಾದರಿಯಲ್ಲಿ ಸಾಮಾಜಿಕ ರಚನೆ ರೂಪತಾಳಿರುವುದನ್ನು ಶಾಸನ ಮತ್ತು ಸಾಹಿತ್ಯ ಆಧಾರಗಳಿಂದ ಸ್ಪಷ್ಟವಾಗಿ ತಿಳಿಯಬಹುದಾಗಿದೆ. ವರ್ಣ ಅಥವಾ ಜಾತಿ ಬದ್ಧವಾದ ಸಮಾಜದ ರೂಪರೇಶೆಗಳನ್ನು ಗುರುತಿಸಬಹುದು. ವರ್ಣ ಮತ್ತು ಜಾತಿಗಳ ಜೊತೆಗೆ, ಕುಟುಂಬ, ಮಹಿಳೆಯರು, ಶಿಕ್ಷಣ, ವಿವಾಹ, ವಿವಿಧ ವೃತ್ತಿಗಳು, ಆಹಾರ ಮತ್ತು ಉಡಿಗೆ ತೊಡಿಗೆಗಳು, ಆಟಪಾಠಗಳು, ಮನರಂಜನೆ, ಹಬ್ಬಹರಿದಿನಗಳು, ಆ ಸ್ಥಾನದ ಜೀವನ ಹಾಗೂ ಸಮಾಜ ಪದ್ಧತಿಗಳನ್ನು ಈ ವಿಷಯದ ಅಡಿಯಲ್ಲಿ ತಿಳಿಯಬಹುದಾಗಿದೆ.

### *9.3.1 ಜಾತಿ ಪದ್ಧತಿ*

ಗಂಗರ ಕಾಲವು ಜಾತಿ ಪ್ರಧಾನ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ್ದು, ವ್ಯಕ್ತಿಯ ಸ್ಥಾನಮಾನವನ್ನು ನಿರ್ಧರಿಸುವುದಲ್ಲಿ ನಿರ್ಣಾಯಕ ಪಾತ್ರವನ್ನು ನಿರ್ವಹಿಸುತ್ತಿದ್ದಿತು. ತಾತ್ವಿಕವಾಗಿ

ನಾಲ್ಕು ವರ್ಣಗಳಿದ್ದಾಗ್ಯೂ, ವಾಸ್ತವಿಕವಾಗಿ ಅನೇಕ ಜಾತಿ, ಉಪಜಾತಿಗಳು ಕಸುಬುಗಳನ್ನಾಧರಿಸಿ ಏರ್ಪಟ್ಟಿದ್ದವು. ಬ್ರಾಹ್ಮಣ, ಬೌದ್ಧ, ಜೈನ ಪಂಗಡಗಳು ಸುಶಿಕ್ಷಿತ ಉಚ್ಛ ವರ್ಗಗಳಾಗಿ ಪ್ರಾಚೀನ ಕನ್ನಡ ಸಮಾಜದಲ್ಲಿ ರೂಪುಗೊಂಡಿರುವುದನ್ನು ಕಾಣಬಹುದು. ಉತ್ತರ ಭಾರತದಲ್ಲಿ ಉದಯಿಸಿದಂತೆ ದಕ್ಷಿಣ ಭಾರತದಲ್ಲಿ ಅನುವಂಶೀಯ ಕ್ಷತ್ರಿಯ ವರ್ಣ ಉದಯಿಸಲಿಲ್ಲ. ಅದಕ್ಕೆ ಬದಲಾಗಿ, ಶೂದ್ರವರ್ಣಕ್ಕೆ ಸೇರಿದ ಅಥವಾ ಬುಡಕಟ್ಟಿಗೆ ಸೇರಿದ ಸ್ಥಳೀಯ ಪ್ರಬಲ ಕುಟುಂಬಗಳು 'ಸಂಸ್ಕೃತಿಕರಣ' ಅಥವಾ ವೈಧಿಕರಣ ಪ್ರಕ್ರಿಯೆಗೊಳಗಾಗಿ ಆಳುವ ವರ್ಗ ರೂಪುಗೊಂಡು ರಾಜ್ಯ ಸ್ಥಾಪನೆ, ಆಡಳಿತ ನಿರ್ವಹಣೆ ಹಾಗೂ ಸೈನಿಕ ಕಾರ್ಯಾಚರಣೆಯನ್ನು ನಿರ್ವಹಿಸುತ್ತಿದ್ದವು.

ವೈದಿಕ ಸಾಮಾಜಿಕ ಚೌಕಟ್ಟಿನೊಳಗೆ ಬ್ರಾಹ್ಮಣರು ಉತ್ತಮ ಸ್ಥಾನವನ್ನು ಹೊಂದಿದ್ದು ವೇದಾಧ್ಯಯನ, ಪುರೋಹಿತ ಕಾರ್ಯ, ಸಾಹಿತ್ಯ ಶಿಕ್ಷಣ ಕಾರ್ಯದಲ್ಲಿ ತೊಡಗುತ್ತಿದ್ದರು. ಇವರು ಪುರಾಣ, ಶಾಸ್ತ್ರಗಳು, ಆಗಮಗಳಲ್ಲಿ, ಸ್ಮೃತಿ, ಉಪನಿಷತ್, ವೇದ, ಜೋತಿಷ್ಯಶಾಸ್ತ್ರ, ಇತಿಹಾಸ, ವ್ಯಾಕರಣದ ಮೂಲಕ ಪ್ರಾಚೀನ ಶಿಕ್ಷಣದಲ್ಲಿ ವಿಶೇಷ ಜ್ಞಾನ ಉಳ್ಳವರಾಗಿದ್ದರು. ರಾಜರು ಮತ್ತು ಇತರ ಆಳುವ ಶ್ರೀಮಂತ ವರ್ಗದವರು ನೀಡುವ ಧಾನ ದತ್ತಿಗಳಿಂದ ಜೀವನ ನಡೆಸುತ್ತಿದ್ದರು. ಇವರು ಸಾಮಾನ್ಯವಾಗಿ ಬ್ರಹ್ಮಪುರಿ, ಅಗ್ರಹಾರಗಳಲ್ಲಿ ವಾಸಿಸುತ್ತಿದ್ದರು. ಇವರು ಸಮಾಜದಲ್ಲಿ ವಿಶೇಷ ಸೌಲಭ್ಯ ಮತ್ತು ಸವಲತ್ತುಗಳನ್ನು ಪಡೆಯುತ್ತಿದ್ದರು. ಸಮಾಜದ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಿಗೆ ಇವರ ಹಾಜರಾತಿ ಅತ್ಯಗತ್ಯವಾಗಿದ್ದಿತು. ಇವರು ಮರಣದಂಡನೆ ಮತ್ತು ತೆರಿಗೆಯಿಂದ ವಿನಾಯಿತಿ ಪಡೆದಿದ್ದರು. ಜೈನ ಸಮಾಜವು ಸುಶಿಕ್ಷಿತ ವರ್ಗವಾಗಿದ್ದು, ಧಾರ್ಮಿಕ, ರಾಜಕೀಯ, ಆಡಳಿತ, ವ್ಯಾಪಾರ ಇತ್ಯಾದಿಗಳಲ್ಲಿ ತೊಡಗಿದ್ದು, ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆ ಕೈಗೊಂಡಿರುವುದು ಕಂಡು ಬರುತ್ತದೆ. ಇದು ಪ್ರತಿಷ್ಠಿತ ವರ್ಗವಾಗಿದ್ದು ೨ನೇ ಶಿವಮಾರನ ತರುವಾಯ ಆಳುವ ವರ್ಗವಾಗಿ ಮಾರ್ಪಾಡಾಯಿತು. ವೈಶ್ಯ ವರ್ಗವು ಕನ್ನಡ ಸಮಾಜದಲ್ಲಿ ಶ್ರೇಣಿಯಿಂದ ಶೆಟ್ಟಿ ರೂಪತಾಳಿ ವಾಣಿಜ್ಯ, ವ್ಯಾಪಾರ ಕಾರ್ಯದಲ್ಲಿ ತೊಡಗಿತು. ಅಂದಿನಿಂದ ವ್ಯಾಪಾರಸ್ಥರು ಒಂದುಗೂಡಿ ಶ್ರೇಣಿ ಸಂಘಗಳನ್ನು ಸ್ಥಾಪಿಸಿಕೊಂಡು ವ್ಯಾಪಾರ ವಾಣಿಜ್ಯ ವೈವಾಟುಗಳಲ್ಲಿ ತೊಡಗುತ್ತಿದ್ದರು. ಕೃಷಿಯೇತರ ವೃತ್ತಿಗಳಾದ ಕುಂಬಾರರು, ಮಡಿವಾಳರು, ಉಪ್ಪಾರರು, ಗಾಣಿಗರು ಮುಂತಾದ ಕಸುಬುಗಾರರು ತಮ್ಮದೇ ಆದ ಶ್ರೇಣಿ ಸಂಘಗಳನ್ನು ಹೊಂದಿದ್ದರು. ಅವರಿಗೂ ಶೆಟ್ಟಿಗಳೆಂದು ನಿರ್ದೇಶಿಸಲಾಗುತ್ತಿದ್ದಿತು. ಕೃಷಿ ಮತ್ತು ಕರಕುಶಲ ವರ್ಗದವರು ಸಮಾಜ ಬಹುಸಂಖ್ಯಾತ ವರ್ಗವಾಗಿದ್ದು ಸಮಾಜದ ಆರ್ಥಿಕ ವ್ಯವಸ್ಥೆಗೆ ಆಧಾರ ಸ್ಥಂಭವಾಗಿದ್ದರು. ಕುಶಲ ಕರ್ಮಿಗಳಲ್ಲಿ ಬಡಗಿಗಳು, ಮಗ್ಗದವರು, ಚಿನ್ನಬೆಳ್ಳಿ ಕುಶಲಕರ್ಮಿಗಳು, ವಿಗ್ರಹ ಕೆತ್ತುವವರು, ಟೈಲರ್‌ಗಳು ಮುಂತಾದವರು ತಮ್ಮದೇ ಆದ ಜಾತಿ ವೃತ್ತಿ ಸಂಘಗಳನ್ನು ಹೊಂದಿದ್ದರು. ಹೀಗೆ ಗಂಗರ ಕಾಲದ ಸಮಾಜ ಬಹಳ ಸಂಕೀರ್ಣತೆಯ ರೂಪವನ್ನು ತಳೆದಿದ್ದಿತು.

### 9.3.2 *ಕುಟುಂಬ*

ಬಹಳ ಪ್ರಾಚೀನ ಕಾಲದಿಂದಲು ಅವಿಭಕ್ತ ಕುಟುಂಬ ನಮ್ಮ ಸಾಮಾಜಿಕ ವ್ಯವಸ್ಥೆಯ ಪ್ರಧಾನ ಲಕ್ಷಣವಾಗಿದ್ದಿತು. ಪಿತೃಪ್ರಧಾನ ಸಮಾಜವಾಗಿದ್ದು ಮಹಿಳೆಯರಿಗೆ ಗೌರವವಿದ್ದರೂ ಸಮಾನ ಸ್ಥಾನವಿರಲಿಲ್ಲ. ಈ ಅವಿಭಕ್ತ ಕುಟುಂಬವು ಸಮಾಜದ ಪ್ರಾಥಾಮಿಕ ಘಟಕವಾಗಿದ್ದು ಸಮಾಜದ ಸದಸ್ಯರನ್ನು ರೂಪಿಸುವ ಕೇಂದ್ರವಾಗಿದ್ದಿತು. ಕುಲಕಸುಬುಗಳು ಅಥವಾ ವೃತ್ತಿ ನೈಪುಣ್ಯತೆಗಳನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ತರಬೇತಿ ನೀಡುವ ಮತ್ತು ವರ್ಗಾಹಿಸುವ ಕೇಂದ್ರಗಳಾಗಿದ್ದವು ಮತ್ತು ಆರ್ಥಿಕ ಭದ್ರತೆಯ ನೆಲೆಗಳಾಗಿದ್ದವು.

### 9.3.3 *ಮಹಿಳೆಯ ಸ್ಥಾನಮಾನ*

ಮಹಿಳೆಯರು ಸಮಾಜದಲ್ಲಿ ಗೌರವ ಸ್ಥಾನಕ್ಕೆ ಪಾತ್ರರಾಗಿದ್ದು ಕಾಟುಂಬಿಕ ನಿರ್ವಹಣೆ ಜವಾಬ್ದಾರಿ ಅವರನ್ನು ಅವಲಂಬಿಸಿದ್ದಿತು. ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಾಚರಣೆಯಲ್ಲಿ

ಅವಳ ಸಹಭಾಗತ್ವ ಇಲ್ಲದೆ ಯಾವುದು ಜರುಗುತ್ತಿರಲಿಲ್ಲ. ಮೇಲುವರ್ಗದ ಮಹಿಳೆಯರು ಆಡಳಿತ, ಸಾಹಿತ್ಯ ಕ್ಷೇತ್ರದಲ್ಲಿ ಪಾಲ್ಗೊಂಡಿರುವುದನ್ನು ಈ ಕಾಲದಲ್ಲಿ ಗಮನಿಸಬಹುದು. ಗಂಗರ ಕಾಲದಲ್ಲಿ ದುಗ್ಗಮಾರನ ಹೆಂಡತಿ ಕಂಚಿಅಬ್ಬೆ ಎಂಬುವಳು ಒಂದು ಪ್ರಾಂತ್ಯದ ರಾಜ್ಯಪಾಲಳಾಗಿ ಕಾರ್ಯ ನಿರ್ವಹಿಸಿರುವುದು ತಿಳಿದು ಬರುತ್ತದೆ. ಹಾಗೆಯೇ ಅನೇಕ ಮಂದಿ ಮಹಿಳೆಯರು ಲಲಿತ ಕಲೆಗಳಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದರು. ಗಂಗರ ರಾಜರ ರಾಣಿ ಸವ್ವಿಅಬ್ಬೆ ಎಂಬುವಳು ಪತಿಯೊಡನೆ ರಣರಂಗದಲ್ಲಿ ಹೋರಾಡಿ ಮಡಿದಳೆಂಬ ಸಂಗತಿಯು ತಿಳಿದು ಬರುತ್ತದೆ. ಸಾಮಾನ್ಯವಾಗಿ ರಾಜಕುಮಾರಿಯರು ಸಾಹಿತ್ಯ, ಲಲಿತಕಲೆ, ಔಷದಿ, ಧರ್ಮಶಾಸ್ತ್ರ, ಯುದ್ಧ ಕಲೆ ಮತ್ತು ದರ್ಶನ ಶಾಸ್ತ್ರದಲ್ಲೂ ಶಿಕ್ಷಣವನ್ನು ಪಡೆಯುತ್ತಿದ್ದರು. ಈ ವಿಷಯಗಳಲ್ಲಿ ಅನೇಕ ಮಹಿಳೆಯರ ಸಾಧನೆ ಗಮನಾರ್ಹವಾಗಿದೆ. ಅನೇಕ ಜೈನ ಮಹಿಳೆಯರು ರನ್ನ, ಪೊನ್ನ ಮೊದಲಾದ ಸುಪ್ರಸಿದ್ಧ ಕವಿಗಳಿಗೆ ಆಶ್ರಯ ಮತ್ತು ಪೋಷಣೆ ನೀಡಿದ್ದಾರೆ. ಆಗಿನ ಕಾಲದ ಮಧ್ಯಮ ವರ್ಗದ ಮಹಿಳೆಯರನ್ನು ಕುಲಸ್ತ್ರೀಯರೆಂದು ಪರಿಗಣಿಸಲಾಗಿದ್ದಿತು. ಇವರು ಪತಿ ಸೇವೆ ಮತ್ತು ಮಕ್ಕಳ ಪೋಷಣೆಯಲ್ಲಿ ನಿರತರಾಗಿದ್ದು ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳಿಗೆ ಬದ್ಧರಾಗಿದ್ದರು. ಕೃಷಿ ವರ್ಗದ ಮಹಿಳೆಯರು ಮತ್ತು ಕರಕುಶಲಕರ್ಮಿ ವರ್ಗದ ಮಹಿಳೆಯರು ತಮ್ಮ ಕುಲಕಸುಬುಗಳಲ್ಲಿ ತೊಡಗಿಸಿಕೊಂಡು ಉತ್ಪಾಧನ ಕಾರ್ಯಗಳಲ್ಲಿ ಭಾಗಿಗಳಾಗಿ ದುಡಿಯುತ್ತಿದ್ದರು. ಮತ್ತೊಂದು ವರ್ಗದ ಮಹಿಳೆಯರನ್ನು ಈ ಕಾಲದಲ್ಲಿ ಕಾಣಬಹುದಾಗಿದೆ. ಅವರನ್ನು ಭೋಗ ಸ್ತ್ರೀಯರಾಗಿದ್ದು ವೇಶ್ಯ ವರ್ಗಕ್ಕೆ ಸೇರಿದವರೆಂದು ಪರಿಗಣಿಸಲಾಗಿದ್ದಿತು. ಇವರು ಸಂಗೀತ ಮತ್ತು ನೃತ್ಯದಲ್ಲಿ ವಿಶೇಷ ಪ್ರಾವಿಣ್ಯತೆಯನ್ನು ಪಡೆದಿದ್ದರು. ಇವರನ್ನು ದೇವಸ್ಥಾನದ ದೇವದಾಸಿಯರೆಂದು ಪರಿಗಣಿಸಿ ದೇವಾಲಯಗಳ ಕಟ್ಟುಪಾಡಿಗೆ ಒಳಪಡಿಸಲಾಗಿದ್ದಿತು. ಉಳಿಗಮಾನ್ಯ ವ್ಯವಸ್ಥೆಯ ಈ ಅನಿಷ್ಠ ಪದ್ಧತಿ ದೇವಾಲಯಗಳ ಸಂಸ್ಕೃತಿಯಿಂದ ಆರಂಭವಾದುದನ್ನು ಗುರುತಿಸಬಹುದು.

ಇವರ ಕಾಲದಲ್ಲಿ ವಿವಾಹ ಪದ್ಧತಿಗಳು ಧಾರ್ಮಿಕ ವಿಧಿವಿಧಾನಗಳ ಪ್ರಕ್ರಿಯೆಗೆ ಒಳಪಟ್ಟಿದ್ದವು. ಏಕಪತ್ನಿ ಪದ್ಧತಿ ಸರ್ವೆ ಸಾಮಾನ್ಯವಾಗಿದ್ದಿತು. ಬಹು ಪತ್ನಿತ್ವವು ಆಳುವ ಶ್ರಿಮಂತ ವರ್ಗದವರಲ್ಲಿ ಚಾರಿಯಲ್ಲಿದ್ದಿತು. ಗಂಗರಸರಾದ ಶ್ರೀಪುರುಷ, ಭೂತುಗ ಅನೇಕ ಪತ್ನಿಯರನ್ನು ಹೊಂದಿದ್ದ ವಿಷಯ ತಿಳಿದು ಬರುತ್ತದೆ. ಬಾಲ್ಯ ವಿವಾಹ ಸರ್ವೆ ಸಾಮಾನ್ಯವಾಗಿ ರೂಢಿಯಲ್ಲಿದ್ದಿತು. ಕನ್ಯಾಧಾನ ವಿವಾಹ ಪದ್ಧತಿ ಇವರ ಕಾಲದಲ್ಲಿ ಜನಪ್ರಿಯವಾದ ಪದ್ಧತಿಯಾಗಿದ್ದಿತು. ಒಂದನೇ ಶಿವಮಾರನು ಈ ಪದ್ಧತಿ ಮೂಲಕವೆ ವಿವಾಹವಾದನು. ರಾಜ ಸಂತತಿಗಳ ನಡುವೆ ಅನೇಕ ಸಂದರ್ಭದಲ್ಲಿ ವಿವಾಹ ಸಂಬಂಧಗಳು ಜರುಗುತ್ತಿದ್ದವು. ಅನೇಕ ಸತಿ ಕಲ್ಲುಗಳು ದೊರಕಿರುವುದರಿಂದ ಗಂಗರ ಕಾಲದಲ್ಲಿ ಸತಿಪದ್ಧತಿ ಚಾರಿಯಲ್ಲಿದ್ದಿತೆಂದು ಹೇಳಬಹುದು. ವಿಧವೆಯರ ಮರು ವಿವಾಹ ಚಾರಿಯಲ್ಲಿರಲಿಲ್ಲ. ಆದರೆ ಈ ನಿಯಮ ಎಲ್ಲಾ ವರ್ಗದ ಮಹಿಳೆಯರಲ್ಲಿ ಏಕರೂಪವಿರಲಿಲ್ಲ. ದುಡಿಯುವ ವರ್ಗದ ಮಹಿಳೆಯರಲ್ಲಿ "ಕೂಡಾವಳಿ" ಪದ್ಧತಿ ಚಾರಿಯಲ್ಲಿದ್ದು ಬಾಲ್ಯ ವಿಧವೆಯರಿಗೆ ಎರಡನೆ ಮದುವೆಗೆ ಅವಕಾಶ ಕಲ್ಪಿಸಿಕೊಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಚಾರಿಯಲ್ಲಿರುವುದನ್ನು ಗಮನಿಸಬಹುದು.

ಗಂಗರ ಕಾಲದಲ್ಲಿ ಚಾರಿಯಲ್ಲಿದ್ದ ಆಹಾರ ಪದ್ಧತಿ, ಉಡುಗೆ ತೊಡುಗೆಗಳು ಮತ್ತು ಆಭರಣಗಳ ಬಗ್ಗೆ ಶಾಸನ ಮತ್ತು ಸಾಹಿತ್ಯಾಧಾರಗಳು ಅಲ್ಪಸ್ವಲ್ಪ ಮಾಹಿತಿಗಳನ್ನು ನೀಡುತ್ತವೆ. ಪಶುಪಾಲನೆ ಕೃಷಿ ಉತ್ಪನ್ನಗಳ ಮೇಲೆ ಅಂದಿನ ಕಾಲದ ಆಹಾರ ಪದ್ಧತಿಗಳು ಅವಲಂಬಿತವಾಗಿದ್ದವು. ಮೇಲು ವರ್ಗದವರು ಸಾಮಾನ್ಯವಾಗಿ ಬ್ರಾಹ್ಮಣರು, ಜೈನರು ಮತ್ತು "ಸಂಸ್ಕೃತೀಕರಣ" ಕ್ಕೆ ಒಳಗಾದ ಕೆಲವು ಪಂಗಡಗಳು ಶಾಖಾಹಾರ ಪದ್ಧತಿಯನ್ನು ಅನುಸರಿಸಿದರೆ ಬಹುಸಂಖ್ಯಾತ ದುಡಿಯುವ ವರ್ಗದವರು ಎರಡು ಬಗೆಯ ಆಹಾರವನ್ನು ಸೇವಿಸುತ್ತಿದ್ದರು. ಅಕ್ಕಿ, ಜೋಳ, ರಾಗಿ, ಹಾಲು, ತುಪ್ಪ, ತೆಂಗಿನಕಾಯಿ, ಬಾಳೆಹಣ್ಣು, ತರಕಾರಿಗಳು, ಮೀನು, ಮಾಂಸ ಇತ್ಯಾದಿ ವೈವಿಧ್ಯಮಯ ಆಹಾರ ಪದಾರ್ಥಗಳು ಅಂದಿನ ಕಾಲದ ಜನತೆಗೆ ಲಭ್ಯವಿದ್ದವು. ಎಲೆ ಅಡಿಕೆ ಜಗಿಯುವುದು ಎಲ್ಲಾ ವರ್ಗದಲ್ಲಿ ರೂಢಿಯಲ್ಲಿದ್ದಿತು.

ಕುಸ್ತಿ, ಮಲ್ಲಯುದ್ಧ, ಬೇಟೆ, ಕುದುರೆ ಸವಾರಿ, ಪ್ರಾಣಿಗಳ ನಡುವೆ ನಡೆಸುತ್ತಿದ್ದ ಪಂದ್ಯಗಳು ಆ ಕಾಲದ ಜನಪ್ರಿಯ ಮನರಂಜನೆ ಮತ್ತು ಆಟಪಾರಿಕೆಗಳಾಗಿದ್ದವು. ಹಬ್ಬ ಹರಿದಿನಗಳು, ಜಾತ್ರೆ, ರಥೋಸ್ಥವಗಳ ಕಾಲ; ಕೋಳಿ ಕಾಳಗ, ಟಗರು ಕಾಳಗಗಳು, ಎತ್ತುಗಳ ಕಾಳಗ ಜನಪ್ರಿಯವಾದ ಮನೆರಂಜನೆ ಕಾರ್ಯಗಳಾಗಿದ್ದವು. ಶ್ರೀಮಂತ ವರ್ಗದಲ್ಲಿ ಪಗಡೆ ಆಟಗಳು ಬಹಳ ಜನಪ್ರಿಯದ ಪಂದ್ಯದಾಟವಾಗಿದ್ದವು. ಇವರಲ್ಲಿ ರಥಗಳ ಸ್ಪರ್ಧೆ, ಸಂಗೀತ, ನೃತ್ಯ, ಕಾವ್ಯವಾಚನ ಸ್ಪರ್ಧೆಗಳು ಸಾಮಾನ್ಯವಾಗಿದ್ದವು. ರಾಮನವಮಿ, ಶಿವರಾತ್ರಿ, ಗೌರಿ, ದೀಪಾವಳಿ, ಗಣೇಶ, ದುರ್ಗಾಪೂಜೆ, ಗ್ರಾಮದೇವತೆ ಹಬ್ಬ, ಇತ್ಯಾದಿ ಹಬ್ಬಗಳು ಆಚರಣೆಯಲ್ಲಿದ್ದವು.

## 9.4 ಧಾರ್ಮಿಕ ಪರಿಸ್ಥಿತಿ

ಗಂಗ ಅರಸರು ಪ್ರಾರಂಭದಿಂದ ಕ್ರಿ.ಶ. 8ನೇ ಶತಮಾನದ ಕೊನೆಯವರೆಗೂ ವೈದಿಕ ಮತೀಯರಾಗಿದ್ದು ಶೈವ ಮತ್ತು ವೈಷ್ಣವ ಮತವನ್ನು ಅನುಸರಿಸುತ್ತಿದ್ದರು. ವರ್ಣಾಶ್ರಮ ಸಂರಕ್ಷಣೆ ಹಾಗೂ ಬ್ರಾಹ್ಮಣ ರಕ್ಷಣೆ ತಮ್ಮ ಮುಖ್ಯ ಕರ್ತವ್ಯವೆಂದು ಶಾಸನಗಳಲ್ಲಿ ಹೇಳಿಕೊಂಡಿರುವರು. ಗಂಗರಾಜ್ಯ ಸ್ಥಾಪನೆ ಕಾಲದಿಂದಲೂ ಪ್ರಚಾರದಲ್ಲಿದ್ದ ಜೈನ ಮತ್ತು ಬೌದ್ಧ ಮತಗಳಿಗೆ, ಪರಧರ್ಮ ಸಹಿಷ್ಣುಗಳಾಗಿದ್ದ ಗಂಗರು ಉದಾರ ಪ್ರೋತ್ಸಾಹವನ್ನು ನೀಡಿದ್ದರು. ತಡಂಗಲ ಮಾಧವನು ಬೌದ್ಧ ಸಂಘಕ್ಕೆ ದಾನ ದತ್ತಿಗಳನ್ನು ನೀಡಿದ್ದನು. ಬೌದ್ಧ ದರ್ಮವು ಕ್ಷೀಣಿಸಿದ್ದು ವೈಧಿಕ ಮತ್ತು ಜೈನ ಧರ್ಮಗಳು ಈ ಕಾಲದಲ್ಲಿ ಪ್ರವರ್ಧಮಾನವಾಗಿದ್ದವು.

ಜೈನಧರ್ಮ ಸಹ ವೈಧಿಕ ಧರ್ಮದಂತೆ ಗಂಗವಾಡಿಯಲ್ಲಿ ಹೆಚ್ಚು ಪ್ರಚಾರದಲ್ಲಿತ್ತು. ಪೂಜ್ಯ ಪಾದನೆಂಬ ಪ್ರಸಿದ್ಧ ಜೈನ ವಿದ್ವಾಂಸ ಹಾಗೂ ಭಾರವಿ ಮೊದಲಾದ ಕವಿಗಳು ದುರ್ವಿನೀತನ ಆಸ್ಥಾನದಲ್ಲಿ ಮನ್ನಣೆ ಪಡೆದಿದ್ದರು. ಆ ಕಾಲದಲ್ಲಿ ಶ್ರವಣಬೆಳಗೊಳ ಜೈನರ ಪ್ರಸಿದ್ಧ ಯಾತ್ರಾ ಸ್ಥಳವಾಗಿತ್ತು. ಜೈನ ಪಂಥವನ್ನು ಸ್ವೀಕರಿಸಿದ ಪ್ರಥಮ ರಾಜ 2ನೇ ಶಿವಮಾರನು ಶ್ರವಣಬೆಳಗೊಳ ಮತ್ತು ಇತರ ಕಡೆಗಳಲ್ಲಿ ಬಸದಿಗಳನ್ನು ಕಟ್ಟಿಸಿದರು. ಚಾವುಂಡರಾಯನು ಕನ್ನಡ ನಾಡಿನ ಅಗ್ರಗಣ್ಯ ಜೈನಧರ್ಮಿಗಳಲ್ಲೊಬ್ಬನಾಗಿದ್ದು ಮಂತ್ರಿ ಮತ್ತು ದಂಡನಾಯಕನಾಗಿ ಕೊನೆಯ ಮೂರು ಗಂಗರಾಜರಿಗೆ ಸೇವೆಸಲ್ಲಿಸಿದನು. **'ಚಾವುಂಡರಾಯ ಪುರಾಣ'** ದ ಕರ್ತೃವಾದ ಈತನು, ರನ್ನ, ನಾಗವರ್ಮ ಕೇಶಿರಾಜ ಮೊದಲಾದ ಕವಿಗಳಿಗೆ ಆಶ್ರಯದಾತನೂ ಆಗಿದ್ದನು. ಗಂಗರ ಉತ್ತರಾರ್ಧ ಕಾಲ ಕನ್ನಡ ಸಾಹಿತ್ಯದ ಪ್ರಾರಂಭ ದಿಸೆಯ ಉತ್ಕೃಷ್ಟ ಕಾಲವಾಗಿತ್ತು. ಜೈನ ವಿದ್ವಾಂಸರು ಮತ್ತು ಆಚಾರ್ಯರಿಂದ ಪ್ರಾಕೃತ, ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅನೇಕ ಸಾಹಿತ್ಯ ಕೃತಿಗಳು ರಚಿತವಾದವು. ಗಂಗರ ಕೊನೆಗಾಲದ ರಾಜರ ಕಾಲದಲ್ಲಿ ಏಳಾಚಾರ್ಯ ಮತ್ತು ಅಜಿತ ಸೇನಾಚಾರ್ಯ ಮೊದಲಾದ ಪ್ರಸಿದ್ಧ ಜೈನ ಯತಿಗಳಿದ್ದರು.

## 9.5 ಶಿಕ್ಷಣ

ಗಂಗಾ ಕಾಲದಲ್ಲಿ ಶಿಕ್ಷಣದ ಬಗ್ಗೆ ಅಂದಿನ ಶಾಸನಗಳಿಂದ ಹೆಚ್ಚಿನ ಮಾಹಿತಿ ದೊರೆಯುತ್ತದೆ. ಇವುಗಳಿಂದ ತಿಳಿದು ಬರುವಂತೆ ವಿದ್ವಾಂಸರಿಗೂ, ವಿದ್ಯಾ ಸಂಸ್ಥೆಗಳಿಗೂ ಹೆಚ್ಚಿನ ಪ್ರೋತ್ಸಾಹವಿದ್ದಿತು. ದೇವಾಲಯಗಳು ಹಾಗೂ ಮಠಗಳು ಅಂದಿನ ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದವು. ವೈಧಿಕ ವಿದ್ಯಾಕೇಂದ್ರಗಳಲ್ಲಿ ಧಾರ್ಮಿಕ ತತ್ವಗಳ ಜೊತೆಗೆ, ವೇದಗಳು, ಉಪನಿಷತ್ತುಗಳು, ಪುರಾಣಗಳು, ಧರ್ಮಶಾಸ್ತ್ರಗಳು ಹಾಗೂ ವ್ಯಾಕರಣ, ತರ್ಕವೈದ್ಯ ಮೊದಲಾದ ವಿಷಯಗಳಲ್ಲಿ ವ್ಯಾಸಂಗಕ್ಕೆ ಅವಕಾಶವಿದ್ದಿತು. ಮಾರಸಿಂಹನ ಕೂಡ್ಲೂರು ಶಾಸನ ಗಂಗರ ಕಾಲದ ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಕೆಲವು ಮಾಹಿತಿಗಳನ್ನು ಒದಗಿಸುತ್ತದೆ. ಬೌದ್ಧ, ಜೈನ ಹಾಗೂ ವೈದಿಕ ವಿದ್ವಾಂಸರು ತಮ್ಮ ಧರ್ಮಗಳ ತತ್ವವನ್ನು ಅಭ್ಯಸಿಸುತ್ತಿದ್ದು, ಆಗಾಗ ಪರಸ್ಪರವಾದ ವಿವಾದಗಳು ನಡೆಯುತ್ತಿದ್ದವು. ವಿದ್ವಾಂಸರಿಗೆ ಪ್ರೋತ್ಸಾಹ ನೀಡಲು ಗ್ರಾಮಗಳನ್ನು ದತ್ತಿಯಾಗಿ ನೀಡುವುದು ಸಾಮಾನ್ಯವಾಗಿತ್ತೆಂದು ದುರ್ವಿನೀತನ ನಲ್ಲಾಳ, ಹೆಬ್ಬೆಟ್ಟ, ಶ್ರೀಪುರುಷನ ಜವಳಿ, ಮಾರಸಿಂಹನ ಕೂಡ್ಲೂರು ಶಾಸನಗಳಿಂದ

ತಿಳಿದು ಬರುತ್ತದೆ. ಒಂದನೇ ಶಿವಮಾರನ ಹಳ್ಳಿಗೆರೆ ಶಾಸನದಲ್ಲಿ ಉಲ್ಲೇಖಿಸಲಾಗಿರುವಂತೆ, ಬ್ರಹ್ಮಪುರಿಗಳು ಹಾಗೂ ಘಟಕಗಳು ವಿದ್ಯಾಭ್ಯಾಸದ ಉನ್ನತ ಕೇಂದ್ರಗಳಾಗಿದ್ದವು. ಅಂತಹ ಕೇಂದ್ರದಲ್ಲಿ ವೇದಾರ್ಥ, ವಾಕ್ಯಾರ್ಥ, ಶಾಸ್ತ್ರಾರ್ಥಕ್ಕೆ ಸಂಬಂಧಿಸಿದ ವಿಶೇಷ ಚರ್ಚೆಗಳೂ, ಜಿಜ್ಞಾಸೆಗಳೂ ನಡೆಯುತ್ತಿದ್ದವು. ತಲಕಾಡು, ಮೇಲುಕೋಟೆ, ಶ್ರೀರಂಗಪಟ್ಟಣ, ಶ್ರವಣಬೆಳಗೊಳ, ಶಿವಗಂಗೆ, ಬಂಕಾಪುರ ಮತ್ತು ಇತರ ಅನೇಕ ಸ್ಥಳಗಳು ಜ್ಞಾನ ಕೇಂದ್ರಗಳಾಗಿದ್ದವು.

## 9.6 ಕಲೆ

ಗಂಗರಸರು ಧಾರ್ಮಿಕ ವಿಷಯದಲ್ಲಿ ಉದಾರನೀತಿ ಪಾಲಿಸಿಕೊಂಡು ಬಂದುದ್ದರಿಂದ ವೈದಿಕ ದೇವಾಲಯಗಳು ಹಾಗೂ ಜೈನ ಬಸದಿಗಳನ್ನು ನಿರ್ಮಿಸಲು ಪ್ರೋತ್ಸಾಹ ನೀಡಿದರು. ಕ್ರಿ.ಶ. 7ನೇ ಶತಮಾನದ ಕೊನೆಯವರೆಗೆ ನಿರ್ಮಿಸಲಾದ ಗುಡಿಗಳಲ್ಲಿ ಹಲವು ನಾಶವಾಗಿರುವುದರಿಂದ ಹಾಗೂ ಹಲವು ರೂಪಾಂತರ ಹೊಂದಿರುವುದರಿಂದ ಗುರುತಿಸುವುದು ಕಷ್ಟಕರವಾಗಿದೆ. ಆದರೂ ಹಿರೇಮಗಳೂರಿನ ಕೋದಂಡರಾಮ ದೇವಾಲಯ, ಅವನೀತನ ಸ್ಮರಣಾರ್ಥವಾಗಿ ಕಟ್ಟಲಾದ ವಿನೀತೇಶ್ವರ ದೇವಾಲಯ, ಈ ಕಾಲಕ್ಕೆ ಸೇರಿದವುಗಳೆಂದು ತಿಳಿದು ಬಂದಿದೆ. ಚಾಮರಾಜನಗರದ ನರಸಮಂಗದ ರಾಮೇಶ್ವರ ದೇವಾಲಯ ಗಂಗರ ಶೈಲಿಗೆ ಸಂಬಂಧಿಸಿದ ಮತ್ತೊಂದು ದೇವಾಲಯವಾಗಿದೆ. ಇದರ ಕಾಲ ಸುಮಾರು 8 ನೇ ಶತಮಾನ. ಈ ಗುಡಿ ವಿಶಾಲ ಗರ್ಭಗೃಹ ಶುಕನಾಸಿ ಮತ್ತು ನವರಂಗದಿಂದ ಕೂಡಿದ್ದು, ಗೋಡೆಗಳ ಮೇಲೆ ಸಿಂಹ ಮತ್ತು ನೀರ್ಗುದುರೆಗಳ ಸಾಲುಗಳನ್ನು ಹೊಂದಿದೆ. ಕ್ರಿ.ಶ. 9 ನೇ ಶತಮಾನದ ಹಾಗೂ ನಂತರದ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳೆಂದರೆ ನಂದಿಯ ಭೋಗನಂದೀಶ್ವರ ದೇವಾಲಯ, ಅವನಿಯ ರಾಮೇಶ್ವರ, ಸುತ್ತುನಾರಾಯಣಸ್ವಾಮಿ, ಸಿಂಧುಘಟ್ಟದ ಸಂಗಮೇಶ್ವರ, ಅರಳಗುಪ್ಪೆಯ ಕಲ್ಲೇಶ್ವರ, ಧಡಿಗದ ಯೋಗ ನರಸಿಂಹ ಮತ್ತು ಧಡಿಗೇಶ್ವರ ದೇವಾಲಯಗಳು, ಸಪ್ತ ಮಾತೃಕೆ ಹಾಗೂ ಪೌರಾಣಿಕ ದೇವಾ ದೇವತೆಗಳನ್ನು ಕೆತ್ತಲಾಗಿರುವ ವರುಣದ ಮಹಾಲಿಂಗೇಶ್ವರ ದೇವಾಲಯ ಗಂಗರ ಕಾಲದ ಮತ್ತೊಂದು ಭವ್ಯ ದೇವಾಲಯ. ಗಂಗರ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುವುದು ರಾಜಧಾನಿಯಾದ ತಲಕಾಡು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ. ತಲಕಾಡಿನ ಮರುಳೇಶ್ವರ, ಅರ್ಕೇಶ್ವರ ಮೊದಲಾದ ದೇವಾಲಯಗಳು ಗಂಗರ ಕಾಲದಲ್ಲಿ ನಿರ್ಮಿತವಾದ ಇತರ ಪ್ರಮುಖ ದೇವಾಲಯಗಳು.

ಗಂಗರ ಆಳ್ವಿಕೆಯ ಉತ್ತರಾರ್ಧ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಸದಿಗಳನ್ನು ನಿರ್ಮಿಸಲಾಯಿತು. ಈ ಕಾಲದಲ್ಲಿ ನಿರ್ಮಿತವಾದ ಹೆಚ್ಚು ಬಸದಿಗಳು ಶ್ರವಣ ಬೆಳಗೊಳದಲ್ಲಿ ಇನ್ನೂ ಊರ್ಜಿತಾವ್ಯವಸ್ಥೆಯಲ್ಲಿವೆ. ಅವುಗಳಲ್ಲಿ ಪ್ರಮುಖ ವಾದವೆಂದರೆ, ಚಂದ್ರಪ್ರಭ ಬಸದಿ, ಇರುವೆ ಬ್ರಹ್ಮದೇವ ಬಸದಿ ಹಾಗೂ ಚಾವುಂಡರಾಯ ಬಸದಿ. ಭಾರತೀಯ ಶಿಲ್ಪಕಲೆಗೆ ಗಂಗರ ಬೃಹತ್ ಕೊಡುಗೆಯೆಂದರೆ ಶ್ರವಣಬೆಳಗೊಳದ ವಿಂಧ್ಯಾ ಗಿರಿಯ ಮೇಲೆ ಕೆತ್ತಲಾಗಿರುವ 58 ಅಡಿ ಎತ್ತರದ ಗೊಮ್ಮಟ ವಿಗ್ರಹ. ಕರ್ತೃನಾಲ್ಕನೇ ರಾಜಮಲ್ಲನ ಅಮಾತ್ಯ ಚಾವುಂಡರಾಯ. ಪ್ರಾಚೀನ ಜಗತ್ತಿನ ಶಿಲ್ಪಗಳಲ್ಲಿ ಅತ್ಯಂತ ಎತ್ತರವಾದ ಈ ಏಕಶಿಲಾ ಗೊಮ್ಮಟ ಪ್ರತಿಮೆಯು ಪ್ರಪಂಚದ ಕಲಾ ಶಿಲ್ಪಕ್ಕೆ ಗಂಗರು ಅರ್ಪಿಸಿರುವ ಅಮೋಘ ಕಾಣಿಕೆಯಾಗಿದೆ. ಈ ಮೂರ್ತಿಯಲ್ಲಿ ಮೂಡಿರುವ ಗಾಂಭೀರ್ಯ, ತ್ಯಾಗ, ವೈರಾಗ್ಯ ಭಾವ ಮೊದಲಾದವು ವರ್ಣನಾತೀತವಾಗಿವೆ.

## 9.7 ಸಾಹಿತ್ಯ

ಗಂಗರ ಪ್ರೋತ್ಸಾಹದಿಂದ ಸಂಸ್ಕೃತ ಹಾಗೂ ಕನ್ನಡದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಸಾಹಿತ್ಯ ಕೃತಿಗಳು ರಚಿತವಾದವು. ಸ್ವತಃ ವಿದ್ವಾಂಸರಾದ ಒಂದನೇ ಮಾಧವ, 3ನೇ ಮಾಧವ, ದುರ್ವಿನೀತ, ಶ್ರೀಪುರುಷ, ಸೈಗೊಟ್ಟ ಶಿವಮಾರ, 3ನೇ ಮಾರಸಿಂಹ ಮೊದಲಾದ ಅರಸರು **ದತ್ತಕ ಸೂತ್ರ ಗಜಶಾಸ್ತ್ರ, ಗಜಾಷ್ಟಕ** ಮೊದಲಾದ ಗ್ರಂಥಗಳನ್ನು ರಚಿಸಿದರು. ದುರ್ವಿನೀತನು ಭಾರವಿಯ

**ಕಿರಾತಾರ್ಜುನೀಯ**ದ 15ನೇ ಸ್ವರ್ಗಕ್ಕೆ ಟೀಕೆಯನ್ನು ರಚಿಸಿದ್ದೇ ಅಲ್ಲದೆ, ಗುಣಾಢ್ಯನ '**ವಡ್ಡ ಕಥೆ**'ಯನ್ನು ಸಂಸ್ಕೃತಕ್ಕೆ ತರ್ಜುಮೆ ಮಾಡಿದ್ದಾನೆ. ಶಬ್ದಾವತಾರದ ಕರ್ತೃವೂ ದುರ್ವಿನೀತನೇ ಎಂದು ಹೇಳಲಾಗಿದೆ. '**ಕವಿರಾಜಮಾರ್ಗ**' ದಿಂದ ದುರ್ವಿನೀತನು ಕನ್ನಡದ ಅತ್ಯಂತ ಪ್ರಾಚೀನ ಗದ್ಯ ರಚನಾಕಾರರಲ್ಲಿ ಒಬ್ಬನೆಂದು ತಿಳಿದು ಬರುತ್ತದೆ. ಅಲ್ಲದೆ ಈತನು ಪ್ರಸಿದ್ಧ ವಿದ್ವಾಂಸರೂ ಕವಿಗಳೂ ದ ಪೂಜ್ಯಪಾದ ಮತ್ತು ಭಾರವಿ ಇವರಿಗೆ ಮನ್ನಣೆ ನೀಡಿದ್ದನು. 3ನೇ ಮಾರಸಿಂಹನು ವ್ಯಾಕರಣ, ತರ್ಕ, ತತ್ವಶಾಸ್ತ್ರ ಮೊದಲಾದವುಗಳಲ್ಲಿ ವಿಶೇಷ ಪರಿಣಿತಿ ಹೊಂದಿದ್ದನು.

ಗಂಗರಾಳ್ವಿಕೆಯ ಉತ್ತರಾರ್ಧ ಹಾಗೂ ರಾಷ್ಟ್ರಕೂಟರ ಕಾಲದಲ್ಲಿ ಕನ್ನಡ ನಾಡು ಜೈನಧರ್ಮ ಉನ್ನತ ಕಾಲವಾಗಿದ್ದಿತು. ವಿಜಯಕೀರ್ತಿ, ಪೂಜ್ಯಪಾದ, ೧ನೇ ಮತ್ತು ೩ನೇ ಅಜಿತ ಸೇನಾಚಾರ್ಯರು, ವಿಮಲಚಂದ್ರ, ಗುಣಧರ, ವಜ್ರನಂದಿ, ವೀರಸೇನ ಮೊದಲಾದ ಪ್ರಸಿದ್ಧ ಕವಿಗಳ ಹೆಸರುಗಳು ಶಾಸನಗಳಿಂದ ಹಾಗೂ ಅವರು ರಚಿಸಿದ ಕೃತಿಗಳಿಂದ ತಿಳಿದು ಬರುತ್ತದೆ. ಇವರೆಲ್ಲರೂ ಗಂಗ ರಾಜರ ಸಮಕಾಲೀನರಾಗಿದ್ದಾರೆಂದು ಹಾಗೂ ಅವರಿಂದ ಪ್ರೋತ್ಸಾಹವನ್ನು ಪಡೆದಿದ್ದರೆಂದು ತಿಳಿದು ಬರುತ್ತದೆ. ಚಾವುಂಡರಾಯನು ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿಯೂ ವ್ಯಾಕರಣ, ತರ್ಕಗಣಿತ ಶಾಸ್ತ್ರಗಳಲ್ಲಿಯೂ ಪಾಂಡಿತ್ಯವನ್ನು ಹೊಂದಿದ್ದು ಅನೇಕ ಕವಿಗಳಿಗೆ ಪೋಷಕನಾಗಿದ್ದನು. ಒಟ್ಟಿನಲ್ಲಿ ಈ ಕಾಲದಲ್ಲಿ ಕನ್ನಡ ಸಾಹಿತ್ಯದ ಪ್ರಗತಿಗೆ ಬುನಾದಿ ಹಾಕಿದಲ್ಲದೆ ಅದು ಉಜ್ವಲವಾಗಿ ಬೆಳೆಯಲು ಸಹಕಾರಿಯಾಯಿತು.

ಅತಿದೀರ್ಘಕಾಲ ಕನ್ನಡ ನಾಡಿನ ಮೇಲೆ ಆಳ್ವಿಕೆ ನಡೆಸಿದ ಗಂಗ ಸಂತತಿಯೂ ಕರ್ನಾಟಕದ ಸಂಸ್ಕೃತಿಗೆ ವಿಪುಲವಾದ ಕಾಣಿಕೆಯನ್ನು ನೀಡಿದೆ. ದಕ್ಷ ಆಡಳಿತದಿಂದ ಕೂಡಿದ ರಾಜಕೀಯ ವ್ಯವಸ್ಥೆಯನ್ನು ಹೊಂದಿದ್ದು, ದಕ್ಷಿಣದಲ್ಲಿ ಪಲ್ಲವ, ಚೋಳ ಹಾಗೂ ಉತ್ತರದಲ್ಲಿ ಗುರ್ಜರರ ಮೇಲೆ ಗಳಿಸಿದ ವಿಜಯ, ಧರ್ಮ, ಸಾಹಿತ್ಯ ಮತ್ತು ಕಲೆಗೆ ನೀಡಿದ ಪ್ರೋತ್ಸಾಹ ಮತ್ತು ಆ ಮೂಲಕ ಕರ್ನಾಟಕ ಸಂಸ್ಕೃತಿಗೆ ನೀಡಿದ ಸ್ಮರಣೀಯ ಕೊಡುಗೆಗಳಿಂದ ಗಂಗರ ಸಂತತಿಯ ಆಳ್ವಿಕೆ ಪ್ರಸಿದ್ಧವಾಗಿದೆ.

## 9.8 ಸಾರಾಂಶ

ಈ ಘಟಕದಲ್ಲಿ ಗಂಗರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಕನ್ನಡ ಸಮಾಜ ಮತ್ತು ಸಂಸ್ಕೃತಿ ರೂಪರೇಶೆಗಳನ್ನು ಪರಿಚಯಿಸಿಕೊಡಲು ಮಾಡಿರುವ ಪ್ರಯತ್ನಗಳನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಇವರ ಕಾಲದಲ್ಲಿದ್ದ ಸಾಮಾಜಿಕ ರಚನೆಯು ವಿವಿಧ ರೂಪಗಳನ್ನು ತಿಳಿದು ಕೊಂಡಿದ್ದೀರಿ.

ವೈದಿಕ ಸಾಮಾಜಿಕ ವ್ಯವಸ್ಥೆ ರೂಪಗೊಳ್ಳಲು ಹಾಗೂ ವೈದಿಕ ಮತ್ತು ಜೈನ ಸಂಸ್ಕೃತಿಯ ಬೆಳವಣಿಗೆಯಲ್ಲಿ ಇವರು ರೂಪಿಸಿದ ಆಡಳಿತ ಸಂಸ್ಕೃತಿಯು ನೆರವಾಗಿರುವುದನ್ನು ತಿಳಿಸಲು ಯತ್ನ ಮಾಡಲಾಗಿದೆ.

ಗಂಗರ ಉದಾರ ಆಡಳಿತ ನೀತಿಯ ಪರಿಣಾಮವಾಗಿ ವಿವಿಧ ಮೂಲಕ್ಕೆ ಸೇರಿದ ಧರ್ಮಿಯರು ಸಹಬಾಳ್ವೆ ನಡೆಸಿ ಉತ್ತಮ ಕಲಾಕೃತಿಗಳಿಗೆ ಕಾರಣವಾದ ವಿಷಯಗಳನ್ನು ಈ ಘಟಕದಲ್ಲಿ ನಿಮ್ಮ ಗಮನೆಕ್ಕೆ ತರಲಾಗಿದೆ. ಹಾಗೆಯೇ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಇವರ ಕಾಲದಲ್ಲಿ ಗುರುತಿಸಬಹುದಾಗಿದೆ.

## 9.9 ಸ್ವಪರೀಕ್ಷಾ ಪ್ರಶ್ನೆಗಳು

1. ಗಂಗರ ಕಾಲದ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿ
2. ಗಂಗರ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ತಿಳಿಸಿ.
3. ಗಂಗರ ಕಾಲದಲ್ಲಿ ವೈದಿಕ ಮತ್ತು ಜೈನ ಸಂಸ್ಕೃತಿಯ ಬೆಳವಣಿಗೆಯನ್ನು ಚಿತ್ರಿಸಿ.

## 9.10 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1. Sheik Ali B. : History of the Westorn Gangas of Talkad.
2. Diwakar R.R. (Ed) : Karnataka through the Ages
3. Krishna Rao M.V. : History of Gangas of Talkad
4. Desai P.B. : A History of Karnataka
5. ಪಂಚಮುಖಿ ಆರ್.ಎಸ್. ಮತ್ತು ಲಕ್ಷ್ಮಿನಾರಾಯಣ ರಾವ್ ಎನ್. : ಕನ್ನಡ ನಾಡಿನ ಅರಸುಮನೆ ಶವಗಳು
6. ರಂಗಸ್ವಾಮಯ್ಯ ಜಿ.ಆರ್. : ಸಂಕ್ಷಿಪ್ತ ಕರ್ನಾಟಕದ ಚರಿತ್ರೆ
7. Surendra Rao (ed) : ಕರ್ನಾಟಕ ಚರಿತ್ರೆ ಸಂ.2, ಕನ್ನಡ ವಿಶ್ವವಿದ್ಯಾನಿಲಯ, ಹಂಪೆ
8. Sundar A.(ed) : ಕರ್ನಾಟಕ ಚರಿತ್ರೆ ಸಂ.1, ಕನ್ನಡ ವಿಶ್ವವಿದ್ಯಾನಿಲಯ, ಹಂಪೆ


ಪ್ರೊ|| ಮಾದೇಗೌಡ

## ಟಿಪ್ಪಣಿಗಳು

# ಘಟಕ - 10

# ಬಾದಾಮಿ ಚಾಳುಕ್ಯರು - ರಾಜಕೀಯ ಇತಿಹಾಸ

ವಿಷಯಕ್ರಮ


10.0 ಘಟಕದ ಉದ್ದೇಶ

10.1 ಪೀಠಿಕೆ

10.2 ಹಿನ್ನೆಲೆ:ಮೂಲ

10.3 ರಾಜಕೀಯ ಇತಿಹಾಸ- ಚಾಲುಕ್ಯ ಸಂತತಿಯ ಆರಂಭದ ಅರಸರು: ಜಯಸಿಂಹನಿಂದ ಮಂಗಳೇಶ್ವರನವರೆಗೆ

10.4 ಎರಡನೇ ಪುಲಿಕೇಶಿ

10.5 ಎರಡನೇ ಪುಲಿಕೇಶಿಯ ನಂತರದ ಚಾಲುಕ್ಯ ಸಂತತಿಯ ಅರಸರು: ಒಂದನೇ ವಿಕ್ರಮಾಧಿತ್ಯನಿಂದ ಎರಡನೇ ಕೀರ್ತಿವರ್ಮನವರೆಗೆ

10.6 ಸಾರಾಂಶ

10.7 ಸ್ವಪರೀಕ್ಷೆಯ ಪ್ರಶ್ನೆಗಳು

10.8 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 10.0 ಘಟಕದ ಉದ್ದೇಶ

ಚಾಳುಕ್ಯ ಸಂತತಿಯ ಪ್ರಮುಖ ಅರಸರ ರಾಜಕೀಯ ಸಾಧನೆ ಮತ್ತು ಅವರ ಆದರ್ಶಗಳನ್ನು ಪರಿಚಯಿಸಿಕೊಳ್ಳುವುದು ಈ ಘಟಕದ ಉದ್ದೇಶವಾಗಿದೆ. ಈ ಪಾಠವನ್ನು ಅಭ್ಯಾಸ ಮಾಡಿದ ಮೇಲೆ ಕೆಳಗಿನ ವಿಷಯಗಳನ್ನು ಅರಿಯಲು ಸಮರ್ಥರಾಗುವಿರಿ.

* ಚಾಳುಕ್ಯರ ರಾಜಕೀಯ ಇತಿಹಾಸವನ್ನು ಅರಿಯಲು ಶಾಸನ ಮತ್ತು ಸಾಹಿತ್ಯ ಆಧಾರಗಳ ಪ್ರಾಮುಖ್ಯತೆಯನ್ನು ತಿಳಿಯುವಿರಿ.
* ಇವರ ರಾಜಕೀಯ ಉದಯಕ್ಕೆ ಮತ್ತು ಅವರ ಮನೆತನದ ಮೂಲಕ ಬಗ್ಗೆ ಇರುವ ವಿವಿಧ ಜಿಜ್ಞಾಸೆಗಳನ್ನು ಗಮನಿಸುವಿರಿ.
* ಚಾಳುಕ್ಯ ಸಂತತಿಯ ಪ್ರಾಬಲ್ಯವನ್ನು ಸ್ಥಾಪಿಸಲು ಶ್ರಮಿಸಿದ ಆರಂಭದ ಅರಸರ ಸಾಧನೆಯನ್ನು ತಿಳಿವಿರಿ.
* ಎರಡನೇ ಪುಲಿಕೇಶಿಯ ಕಾಲದಲ್ಲಿ ಚಾಳುಕ್ಯರ ರಾಜ್ಯವು ಸಾಮ್ರಾಜ್ಯವಾಗಿ ಸ್ಥಾನವನ್ನು ಪಡೆದು ದಕ್ಷಿಣ ಭಾರತದ ಇತಿಹಾಸದಲ್ಲಿ ಸಾರ್ವಭೌಮ ಅಧಿಕಾರ ಸ್ಥಾಪನೆಯಾದ ಸಂಗತಿಯನ್ನು ಕಲಿಯುವಿರಿ. ಹಾಗೆಯೇ ಎರಡನೇ ಪುಲಿಕೇಶಿಯ ಸಾಂಸ್ಕೃತಿಕ ಕೊಡುಗೆಗಳನ್ನು ಅರಿವಿರಿ.
* ಚಾಳುಕ್ಯ ರಾಜ್ಯವನ್ನು ಸಂದರ್ಶಿಸಿದ ಹೂಯನ್‌ತ್ಸಾಂಗ ಮತ್ತು ತಬಾರಿಯವರ ಅಮೂಲ್ಯ ಬರವಣಿಗೆಯಿಂದ ದೊರಕುವ ಮಾಹಿತಿಗಳನ್ನು ಗ್ರಹಿಸುವಿರಿ.
* ಸಮಕಾಲೀನ ರಾಜಮನೆತನಗಳೊಡನೆ ಇವರ ಸಂಘರ್ಷ ಮತ್ತು ಸ್ನೇಹಸಂಬಂಧವನ್ನು ಪರಿಚಯಿಸಿಕೊಳ್ಳುವಿರಿ
* ಈ ಸಂತತಿಯ ಕೊನೆಯ ಅರಸರ ಕಾಲದಲ್ಲಿ ಚಾಳುಕ್ಯ ವಂಶದ ಕೀರ್ತಿಯನ್ನು ಪುನರ್ ಸ್ಥಾಪಿಸಲು ನಡೆಸಿದ ಹೋರಾಟವನ್ನು ಗಮನಿಸುವಿರಿ.

## 10.1 ಪೀಠಿಕೆ

ಬಾದಾಮಿ ಚಾಳುಕ್ಯರ ಇತಿಹಾಸವು ಕರ್ನಾಟಕದಲ್ಲಿ ಹಾಗೂ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಶೇಷ ಮಹತ್ವದಿಂದ ಕೂಡಿದೆ. ಈ ಮನೆತನದ ಇತಿಹಾಸ ಕ್ರಿ.ಶ. 6ನೇ ಶತಮಾನದಿಂದ ಪ್ರಾರಂಭವಾಗುತ್ತದೆ. ಬಾದಾಮಿ ಚಾಳುಕ್ಯ ಸಾಮ್ರಾಜ್ಯವು ಉತ್ತರದಲ್ಲಿ ನರ್ಮದಾನದಿಯ ತೀರದಿಂದ ದಕ್ಷಿಣದಲ್ಲು ತುಂಗಭದ್ರಾ ನದಿಯವರೆಗೂ ವ್ಯಾಪಿಸಿತು. ಈ ಸಾಮ್ರಾಜ್ಯವು ಇಂದಿನ ಕರ್ನಾಟಕ, ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರದ ಭಾಗಗಳನ್ನೊಳಗೊಂಡಿತ್ತು. ಇಡೀ ದಕ್ಷಿಣ ಪ್ರಸ್ಥಭೂಮಿಯ ಮೇಲೆ ಮಾತ್ರವಲ್ಲದೆ ಇವರ ಪರಮಾಧಿಕಾರವು ಗುಜರಾತಿನವರೆಗೂ ವ್ಯಾಪಿಸಿತು. ಕ್ರಮೇಣ ಗುಜರಾತ ಮತ್ತು ಆಂಧ್ರಪ್ರದೇಶಗಳಲ್ಲಿ ಈ ಸಂತತಿಯ ಶಾಖೆಗಳು ಸ್ಥಾಪನೆಯಾದವು. ಈ ಸಂತತಿಯ ಆಳ್ವಿಕೆಯು ಪ್ರಾರಂಭವಾಗುವ ಮೊದಲು ಈ ವಿಶಾಲಪ್ರದೇಶದಲ್ಲಿ ಬೇರೆ ಬೇರೆ ಅನೇಕ ಸಣ್ಣ ಪುಟ್ಟ ಮನೆತನಗಳು ರಾಜ್ಯವಾಳುತ್ತಿದ್ದವು. ಕೊಂಕಣದಲ್ಲಿ ಮೌರ್ಯರೂ, ಮಹಾರಾಷ್ಟ್ರದ ಹಲವೆಡೆಗಳಲ್ಲಿ ರಟ್ಟರೂ, ಬೀರಾರಿನಲ್ಲಿ ನಳರೂ, ಬನವಾಸಿಯಲ್ಲಿ ಕದಂಬರೂ, ಗಂಗವಾಡಿಯಲ್ಲಿ ಗಂಗರೂ, ದಕ್ಷಿಣ ಕರಾವಳಿಯಲ್ಲಿ ಅಳುಪರೂ ರಾಜ್ಯವಾಳುತ್ತಿದ್ದರು. ಚಾಳುಕ್ಯ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆ ಮೇಲ್ಕಂಡ ರಾಜಮನೆತನಗಳಲ್ಲಿ ಹಲವು ಅದೃಶ್ಯವಾದವು. ಮತ್ತೆ ಕೆಲವು ಸಾಮಂತ ಮನೆತನಗಳಾಗಿ ಪರಿವರ್ತನೆಗೊಂಡವು.

ಇವರ ಇತಿಹಾಸವನ್ನು ರಚಿಸಲು ದೇಶೀಯ ಸಾಹಿತ್ಯದ ಆಧಾರಗಳು ಹೆಚ್ಚು ಉಪಯುಕ್ತವಾಗಿಲ್ಲ. ವಿದೇಶಿ ಪ್ರವಾಸಿಗರಾದ ಹೂಯನ್ ತ್ಸಾಂಗ್ ಮತ್ತು ತಬಾರಿ ಬರವಣಿಗೆಗಳು ವಿದೇಶಿಯ ಆಧಾರಗಳಲ್ಲಿ ಮುಖ್ಯವಾದವು. ಸಾಹಿತ್ಯ ಆಧಾರಗಳಿಗಿಂತಲೂ ಹೆಚ್ಚಾಗಿ ಪ್ರಾಕ್ತನ ಆಧಾರಗಳು ಈ ಮನೆತನದ ಇತಿಹಾಸ ರಚನೆಗೆ ಹೆಚ್ಚು ಸಹಕಾರಿಯಾಗಿವೆ. ಶಾಸನಗಳೂ, ನಾಣ್ಯಗಳೂ, ಮಿಗಿಲಾಗಿ ಆ ಕಾಲದಲ್ಲಿ ಕಟ್ಟಲಾದ ಗುಡಿ ಗೋಪುರಗಳೂ ಬಾದಾಮಿ ಚಾಳುಕ್ಯರ ಸಾಮ್ರಾಜ್ಯದ ಇತಿಹಾಸ ಮತ್ತು ಸಂಸ್ಕೃತಿ ರಚನೆಗೆ ದೊರೆತಿರುವ ಅಮೂಲ್ಯ ಆಧಾರಗಳಾಗಿವೆ.

ದೊಡ್ಡ ಸಾಮ್ರಾಜ್ಯ ಸ್ಥಾಪಿಸಿ ಆಳಿದ ಈ ಸಂತತಿಯ ರಾಜರು ವಲ್ಲಭ, ಶ್ರೀ ಪೃಥ್ವೀವಲ್ಲಭ, ಪರಮಭಾಗವತ ಮೊದಲಾದ ಬಿರುದುಗಳನ್ನು ಹೊಂದಿದ್ದರು. ವೈದಿಕ ಮತ್ತು ಜೈನ ಧರ್ಮಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಈ ಧರ್ಮಗಳಿಗೆ ನೀಡಿದ ಪ್ರೋತ್ಸಾಹದಿಂದ ಶಿಲ್ಪಕಲೆಯು ವಿಶೇಷವಾಗಿ ಅಭಿವೃದ್ಧಿಗೊಂಡಿತು. ಚಾಳುಕ್ಯರ ಪ್ರೋತ್ಸಾಹದಿಂದ ಮೂಡಿ ವಿಕಾಸವಾದ ಸುಂದರ ವಾಸ್ತು ಶಿಲ್ಪಕಲೆಯು ವೇಸರ ಶೈಲಿಯೆಂದು ಭಾರತೀಯ ಕಲೆಯ ಇತಿಹಾಸದಲ್ಲಿ ಪ್ರಸಿದ್ಧವಾಗಿದೆ. ಆದಿವರಾಹವು ಬಾದಾಮಿ ಚಾಳುಕ್ಯ ಸಂತತಿಯ ರಾಜ ಚಿಹ್ನೆಯಾಗಿತ್ತು.

## 10.2 ಹಿನ್ನಲೆ:ಮೂಲ

ಈ ಸಂತತಿಯ ಆರಂಭದ ಜೀವನ ಮತ್ತು ಮೂಲದ ಬಗ್ಗೆ ಸ್ಪಷ್ಟ ಮಾಹಿತಿ ದೊರಕುವುದಿಲ್ಲ. ಆದರೆ, ಅನಂತರ ಆಳಿದ ಚಾಳುಕ್ಯ ಶಾಖೆಗಳಲ್ಲಿ ಕೆತ್ತಿಸಿದ, ಅದರಲ್ಲೂ ಪ್ರಮುಖವಾಗಿ ಕಲ್ಯಾಣಿ ಚಾಳುಕ್ಯರ ಶಾಸನಗಳಲ್ಲಿ ಮತ್ತು ಸಾಹಿತ್ಯ ಗ್ರಂಥಗಳಲ್ಲಿ ಇವರ ಮೂಲಕ್ಕೆ ಸಂಬಂಧಿಸಿದ ಅನೇಕ ಪೌರಾಣಿಕ ಹೇಳಿಕೆಗಳು ದೊರೆಯುತ್ತವೆ. ಇವರ ಮೂಲದ ಹಿನ್ನೆಲೆಗೆ ಸಂಬಂಧಿಸಿದಂತೆ ವಿಭಿನ್ನ ಹೇಳಿಕೆಗಳಿವೆ. ಈ ಹೆಸರಿಗೆ ಸಂಬಂಧಿಸಿದಂತೆ ಶಾಸನಗಳಲ್ಲಿ 'ಚಾಳುಕ್ಯ', 'ಚಳಿಕ', 'ಚಾಳಿಕ್ಯ', 'ಚಳಕ್ಯ' ಮೊದಲಾದ ಪದಗಳು ಕಂಡುಬರುತ್ತದೆ. ಡಾ|| ಹಾರ್‍ನೆಲ್, ವಿನ್ಸೆಂಟ್ ಸ್ಮಿತ್, ಫ್ಲೀಟ್ ಮೊದಲಾದ ವಿದ್ವಾಂಸರು ಅಭಿಪ್ರಾಯದಂತೆ, ಚಾಳುಕ್ಯರು ಮೂಲತಃ ತುರ್ಕಿ ಅಥವಾ ಸೆಲ್ಯೂಸಿಡ್ ಗುಂಪಿಗೆ ಸೇರಿದವರು. ಆದಲೆ ಹೆಚ್ಚಿನ ಆಧಾರಗಳು ದೊರೆಯಲಾರಂಭಿಸಿದ ನಂತರ ಚಾಳುಕ್ಯ ಸಂತತಿಗಳ ಮೂಲವು ಪರಕೀಯವಲ್ಲವೆಂದೂ, ಅವರು ದಕ್ಷಿಣ ಭಾರತದ ನಿವಾಸಿಗಳಾಗಿದ್ದರೆಂದೂ ಹಾಗೂ ದ್ರಾವಿಡ ಗುಂಪಿಗೆ ಸೇರಿದವರಾಗಿದ್ದರೆಂದೂ ಖಚಿತವಾಗಿದೆ.

ಬಾದಾಮಿ ಚಾಳುಕ್ಯರು ಪ್ರಬಲರಾಗಿದ್ದಾಗ ಕೆತ್ತಿಸಿದ ಹಾಗೂ ಕಲ್ಯಾಣಿ ಚಾಳುಕ್ಯರ ಶಾಸನಗಳಲ್ಲಿ ಅವರ ಮೂಲಕ್ಕೆ ಸಂಬಂಧಿಸಿದ ಪೌರಾಣಿಕ ಹೇಳಿಕೆಗಳಿವೆ. ಈ ಶಾಸನಗಳಲ್ಲಿ ಅವರು ತಮ್ಮನ್ನು ಹಾರಿತೀಪುತ್ರರೆಂದೂ, ಮಾನವ್ಯ ಗೋತ್ರದವರೆಂದೂ ಹಾಗೂ ಶ್ರೀಮನ್ನಾರಾಯಣನ ಕೃಪೆಯಿಂದ ತಮ್ಮ ವರಾಹ ಲಾಂಛನಕ್ಕೆ ಸಕಲ ರಾಜರುಗಳು ಶರಣಾಗುವಂತೆ ಮಾಡಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡವರೆಂದೂ ಕರೆದುಕೊಂಡಿದ್ದಾರೆ. ಕಲ್ಯಾಣಿ ಚಾಳುಕ್ಯರ ಕೆಲವು ಶಾಸನಗಳಲ್ಲಿ ಹೇಳಿರುವಂತೆ, ಹಾರೀತೀ ಪಂಚಶಿಖಿ ಎಂಬ ಮುನಿಯಚುಳ್ಳ (ಬೊಗಸೆ) ದಿಂದ ಒಬ್ಬ ವೀರನು ಉದ್ಭವಿಸಿದನೆಂದೂ ಅವನಿಗೆ ಚುಳಕ ಅಥವಾ ಚಳುಕ್ಯನೆಂದು ಹೆಸರಾಯಿತೆಂದೂ ವರ್ಣಿಸಲಾಗಿದೆ. ಇನ್ನು ಕೆಲವು ಶಾಸನಗಳ ಪ್ರಕಾರ, ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ 59 ರಾಜರು ಅಯೋಧ್ಯೆಯಲ್ಲಿ ಆಳಿದ ನಂತರ, ಆ ಸಂತತಿಯ ವೀರನೊಬ್ಬ ದಕ್ಷಿಣಕ್ಕೆ ಬಂದು ಚಾಳುಕ್ಯ ಸಂತತಿಯನ್ನು ಆರಂಭಿಸಿದನೆಂದೂ ಅವರ ವಂಶದ 16 ಮಂದಿ ಅರಸರು ಇಲ್ಲಿ ಕ್ರಮೇಣ ಆಳ್ವಿಕೆ ನಡೆಸಿದರೆಂದೂ ವಿವರಿಸಲಾಗಿದೆ. ಇದೇ ಹೇಳಿಕೆಯನ್ನು ಬಿಲ್ಹಣನ 'ವಿಕ್ರಮಾಂಕದೇವ ಚರಿತ್ರೆ' ಯಲ್ಲೂ ಕಂಡುಬರುತ್ತದೆ. ಆದರೆ ಈ ಹೇಳಿಕೆಗಳೆಲ್ಲಾ ಕಾಲ್ಪನಿಕವೆಂಬುದರಲ್ಲಿ ಸಂದೇಹವಿಲ್ಲ. ಬಹುಶಃ ಅವರ ಕೆಳವರ್ಗದ ಸಾಮಾಜಿಕ ಹಿನ್ನೆಲೆಯನ್ನು ಮರೆಮಾಚಿ ಆಳುವ ವರ್ಗದ ಕ್ಷತ್ರಿಯ ವರ್ಣದ ಸ್ಥಾನಮಾನ ಕಲ್ಪಿಸಿಕೊಡಲು ಆಸ್ಥಾನ ವಿದ್ವಾಂಸಕರಿಂದ ಸೃಷ್ಟಿಯಾದ ಕಾಲ್ಪನಿಕ ದಂತಕತೆಗಳಾಗಿವೆ. ಬಾದಾಮಿ ಚಾಳುಕ್ಯರ ಪ್ರಾರಂಭ ದಿಶೆಯ ಒಂದು ಶತಮಾನ ಕಾಲಾವಧಿಯಲ್ಲಿ ಇಂತಹ ಕಾಲ್ಪನಿಕ

ಮತ್ತು ಪೌರಾಣಿಕ ಹೇಳಿಕೆಗಳು ಕಂಡು ಬರುವುದಿಲ್ಲ. ಆದುದರಿಂದ ಬಾದಾಮಿ ಚಾಳುಕ್ಯ ಸಂತತಿಯ ಸ್ಥಾಪಕನು ಅಯೋಧ್ಯೆ ಅಥವಾ ಮತ್ತಾವುದೋ ಸ್ಥಳದಿಂದ ಬಂದವರೆಂದು ನಂಬಲಾಗುವುದಿಲ್ಲ. ಚಾಳುಕ್ಯ ಸಂತತಿಯ ಸ್ಥಾಪಕರು ಮೂಲತಃ ಕನ್ನಡದವರೂ ಹಾಗೂ ದಖ್ಖಿನ್ನಿನ ನಿವಾಸಿಗಳಾಗಿದ್ದರೆಂದೂ, ಅವರು ವ್ಯವಸಾಯವನ್ನವಲಂಬಿಸಿದ್ದು ಕಾಲಕ್ರಮದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದರೆಂದೂ ಹೆಚ್ಚಿನ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

## 10.3 ರಾಜಕೀಯ ಇತಿಹಾಸ - ಚಾಳುಕ್ಯ ಸಂತತಿಯ ಆರಂಭದ ಅರಸರು: ಜಯಸಿಂಹನಿಂದ ಮಂಗಳೇಶ್ವರನವರೆಗೆ

ಬಾದಾಮಿ ಚಾಳುಕ್ಯರ ಆರಂಭದ ಇತಿಹಾಸಕ್ಕೆ ಸಂಬಂಧಿಸಿದಂತೆ ಸಮಕಾಲೀನ ಆಧಾರಗಳ ಕೊರತೆಯಿರುವುದರಿಂದ ಅವರ ಬಗ್ಗೆ ಹೆಚ್ಚು ವಿವರಗಳು ದೊರಕುವುದಿಲ್ಲ. ಆರಂಭದ ರಾಜರನ್ನು ಕುರಿತ ಘಟನೆಗಳು ಅನಂತರದ ಶಾಸನಗಳಲ್ಲಿ ಮಾತ್ರ ಹೇಳಲಾಗಿದೆ. ಈ ಹೇಳಿಕೆಗಳು ಹಲವು ವೇಳೆ ಅಸ್ಪಷ್ಟತೆಯಿಂದ ಕೂಡಿವೆ. ಪ್ರಾರಂಭದ ರಾಜರುಗಳಿಗೆ ಸಂಬಂಧಿಸಿದಂತೆ ಕಾಣಬರುವ ಮಾಹಿತಿಯ ಅಭಾವವು ಎಲ್ಲಾ ಸಂತತಿಗಳ ರಾಜರಿಗೂ ಸರ್ವೆಸಾಮಾನ್ಯವಾಗಿ ಅನ್ವಯಿಸುತ್ತದೆ. ಚಾಳುಕ್ಯರ ಶಾಸನಗಳಲ್ಲಿ ಜಯಸಿಂಹನನ್ನು ಸಾಮಾನ್ಯವಾಗಿ ಚಾಳುಕ್ಯ ಸಂತತಿಯ ಸ್ಥಾಪಕನೆಂದು ಹೇಳಲಾಗಿದೆ. ಕೆಲವು ಸಾಹಿತ್ಯ ಗ್ರಂಥಗಳು ಮತ್ತು ಇತರ ಉಲ್ಲೇಖಗಳಿಂದ ಜಯಸಿಂಹನು ವಿಜಯಾದಿತ್ಯ ಎಂಬುವನ ಮಗನೆಂದು ತಿಳಿದು ಬರುತ್ತದೆ. ವಿಜಯಾದಿತ್ಯನ ಕಾಲದಲ್ಲಿ ಚಾಳುಕ್ಯ ರಾಜ್ಯದ ಅಂಕುರಾರ್ಪಣೆಯಾಗಿರಬೇಕೆಂದು ತೋರುತ್ತದೆ. ಪ್ರಾರಂಭದ ಕಾಲದಿಂದ ಪಲ್ಲವರಿಗೂ ಚಾಳುಕ್ಯರಿಗೂ ಹಗೆತನ ಹಾಗೂ ಗಂಗರಿಗೂ ಚಾಳುಕ್ಯರಿಗೂ ಸಂಬಂಧವಿದ್ದ ಸಂಗತಿಯು ದೃಡಪಟ್ಟಿದೆ. ಕ್ರಿ.ಶ. 6ನೇ ಶತಮಾನದ ಪೂರ್ವಾರ್ಧದಲ್ಲಿ ಚಾಳುಕ್ಯ ಮನೆತನವು ಅಸ್ತಿತ್ವಕ್ಕೆ ಬಂದಿತು. ಮಂಗಳೇಶನ ಮಹಾಕೂಟ ಶಾಸನ ಮತ್ತು ಪುಲಿಕೇಶಿಯ ಐಹೊಳೆ ಶಾಸನಗಳ ಪ್ರಕಾರ ಜಯಸಿಂಹನೂ ಮತ್ತು ಅವನ ತರುವಾಯ ರಣರಾಗನೂ ಆಳಿದರೆಂದು ವಿವರಿಸಲಾಗಿದೆ. ಇವರ ಆಳ್ವಿಕೆಯ ಘಟನಾವಳಿಗಳು ತಿಳಿದು ಬರುವುದಿಲ್ಲ. ಇವರ ಆಳ್ವಿಕೆ ಕಾಲದಲ್ಲಿ ರಾಜ್ಯವು ಇನ್ನೂ ಶೈಶವಾಸ್ಥೆಯಲ್ಲೇ ಇದ್ದಿತೆಂದು ತಿಳಿದು ಬರುತ್ತದೆ. ಜಯಸಿಂಹನಿಗೆ ವಲ್ಲಭ ಎಂಬ ಬಿರುದೂ ಇದ್ದಿತು. ಜಯಸಿಂಹ ಮತ್ತು ರಣರಾಗರ ಆಳ್ವಿಕೆಯ ತರುವಾಯ ಒಂದನೇ ಪುಲಿಕೇಶಿಯು ರಾಜನಾದನು.

***ಒಂದನೇ ಪುಲಿಕೇಶಿಯು*** ಕ್ರಿ.ಶ. ಸುಮಾರು 540 ರಿಂದ 566 ರವರೆಗೂ ಆಳಿದನೆಂದೂ ನಂಬಲಾಗಿದೆ. ಬಾದಾಮಿಯು ಇವನ ರಾಜಧಾನಿಯಾಗಿದ್ದಿತು. ಕದಂಬರನ್ನೂ ಹಾಗು ಸಣ್ಣಪುಟ್ಟ ರಟ್ಟ ಸಂಸ್ಥಾನಗಳನ್ನು ಸೋಲಿಸಿ ಒಂದನೇ ಪುಲಿಕೇಶಿಯು ಚಾಳುಕ್ಯ ರಾಜ್ಯವನ್ನು ವಿಸ್ತರಿಸಿದನು. ಇವನು ಬಾದಾಮಿ ಕೋಟೆ ಕೊತ್ತಲುಗಳನ್ನು ನಿರ್ಮಿಸಿದುದಲ್ಲದೆ ಅಲ್ಲಿನ ಗುಹಾಲಯಗಳನ್ನು ಕೊರೆಯುವ ಕಾರ್ಯವನ್ನು ಪ್ರಾರಂಭಿಸಿದನು. ಬಾದಾಮಿ ಗುಡ್ಡದಲ್ಲಿ ದೊರೆತಿರುವ ಒಂದನೇ ಪುಲಿಕೇಶಿಯ ಶಾಸನದಂತೆ ಇವನು ಹಿರಣ್ಯಗರ್ಭ ಯಜ್ಞವನ್ನು ಆಚರಿಸಿದನು. ಅಲ್ಲದೆ ಮಂಗಳೇಶನ ಶಾಸನವೊಂದು ಒಂದನೇ ಪುಲಿಕೇಶಿಯ ಸಾಧನೆಗಳು ಮತ್ತು ಶೌರತ್ವದ ಬಗ್ಗೆ ವರ್ಣನೆ ನೀಡುತ್ತದೆ. ಇವನಿಗೆ ಸತ್ಯಾಶ್ರಯ, ರಣವಿಕ್ರಮ, ವಲ್ಲಭ ಮತ್ತು ಶ್ರೀ ಪೃಥ್ವಿವಲ್ಲಭ ಎಂಬ ಬಿರುದುಗಳಿದ್ದವು. ಈ ಬಿರುದುಗಳಿಂದ ಚಾಳುಕ್ಯ ಮನೆತನವು ಆ ವೇಳೆಗೆ ಪ್ರಬಲ ರಾಜಕೀಯ ಶಕ್ತಿಯಾಗಿ ಮೂಡಿರುವುದು ತಿಳಿದು ಬರುತ್ತದೆ. ಈ ಬಿರುದುಗಳನ್ನು ಚಾಳುಕ್ಯ ಸಂತತಿಯ ಎಲ್ಲಾ ಸಾಮ್ರಾಟರು ಹೊಂದಿದ್ದರು. ಪುಲಿಕೇಶಿ ಮತ್ತು ದುರ್ಲಭಾದೇವಿ ಇವರಿಗೆ ಕೀರ್ತಿವರ್ಮ ಮತ್ತು ಮಂಗಳೇಶ ಎಂಬ ಇಬ್ಬರು ಪುತ್ರರಿದ್ದರು. ಒಂದನೇ ಪುಲಿಕೇಶಿಯ ಮರಣಾನಂತರ ಇವನ ಹಿರಿಯ ಮಗನಾದ ***ಕೀರ್ತಿವರ್ಮನು*** ರಾಜನಾದನು.

ಇವನು ಕ್ರಿ.ಶ. 566 ರಿಂದ 596 ರವರೆಗೆ ಆಳಿದನು. ಇವನನ್ನು ಕೀರ್ತಿಯರಸ ಮತ್ತು ಕೀರ್ತಿರಾಜ ಎಂಬುದಾಗಿ ಶಾಸನಗಳಲ್ಲಿ ಹೆಸರಿಸಲಾಗಿದೆ. ಬಾದಾಮಿಯ ಪ್ರಸಿದ್ಧವಾದ ವೈಷ್ಣವ

ಗುಹಾಲಯವು ಇವನ ಕಾಲದಲ್ಲಿ ಸಂಪೂರ್ಣಗೊಂಡಿತೆಂದು ತಿಳಿದು ಬರುತ್ತದೆ. ಮಹಾಕೂಟ ಸ್ತಂಭಶಾಸನವು ಕೀರ್ತಿವರ್ಮನ ಪರಾಕ್ರಮವನ್ನೂ, ವಿಜಯಗಳನ್ನೂ ವಿಶೇಷವಾಗಿ ತಿಳಿಸುತ್ತದೆ. ಅದರ ಪ್ರಕಾರ ಇವನು ಅಂಗ, ವಂಗ, ಕಳಿಂಗ, ಮಗಧ, ಮಾದ್ರಕ, ಕೇರಳ, ಗಂಗ, ಮುಸಕ, ಪಾಂಡ್ಯ, ದ್ರಾಮಿಳ, ಚೋಳಿಯ ಮತ್ತು ವೈಜಯಂತಿ ರಾಜ್ಯಗಳನ್ನು ಗೆದ್ದುದಾಗಿ ವರ್ಣಿಸಲ್ಪಟ್ಟಿದೆ. ಈ ವರ್ಣನೆಯು ಉತ್ಪ್ರೇಕ್ಷೆಯೆಂದೇ ಹೇಳಬೇಕು. ಮೇಲ್ಕಂಡ ಹಲವಾರು ರಾಜ್ಯಗಳು ಇವನ ರಾಜ್ಯದಿಂದ ಬಹುದೂರದಲ್ಲಿದ್ದವು. ಇಂತಹ ಉತ್ಪ್ರೇಕ್ಷೆಯು ಅನಂತರ ಶಾಸನಗಳಲ್ಲಿ ಕಾಣಬರುವುದು ಸರ್ವೆ ಸಾಮಾನ್ಯ ವರ್ಣನೆಯಾಗಿದೆ. ಪರಾಕ್ರಮಿಯಾದ ಕೀರ್ತಿವರ್ಮನು ನಳರು, ಮೌರ್ಯರು ಮತ್ತು ಕದಂಬರನ್ನು ಸೋಲಿಸಿ ಅನೇಕ ಬಿರುದುಗಳನ್ನು ಧರಿಸಿದನು. ಇವನಿಗೆ ಸತ್ಯಾಶ್ರಯ ಮತ್ತು ಶ್ರೀ ಪೃಥ್ವಿ ವಲ್ಲಭ ಎಂಬ ಬಿರುದುಗಳಿದ್ದವು. ಮಹಾಕೂಟ ಶಾಸನದ ಪ್ರಕಾರ ಇವನು ಬಹು ಸುವರ್ಣ ಮತ್ತು ಅಗ್ನಿಷ್ಠೋಮ ಎಂಬ ಯಾಗಗಳನ್ನು ಆಚರಿಸಿದನು. ಒಂದನೇ ಕೀರ್ತಿವರ್ಮನನ್ನು ವಾತಾಪಿ(ಬಾದಾಮಿ) ಯ ಸ್ಥಾಪಕನೆಂದು ಹೆಸರಿಸಲಾಗಿದೆ. ಇವನ ಕಾಲದಲ್ಲಿ ಬಾದಾಮಿಯು ವಿಸ್ತಾರಗೊಂಡು ಅಂದ ಚೆಂದದ ಕಟ್ಟಡಗಳೂ, ಗುಡಿ ಗೋಪುರಗಳು ನಿರ್ಮಾಣವಾಗಿರಬೇಕೆಂದು ತೋರುತ್ತದೆ. ಇವನಿಗೆ ಪುಲಿಕೇಶಿ, ವಿಷ್ಣುವರ್ಧನ, ಧರಾಶ್ರಯ ಜಯಸಿಂಹ ಮತ್ತು ಬುದ್ಧವರ್ಷ ಎಂಬ ನಾಲ್ವರು ಗಂಡು ಮಕ್ಕಳಿದ್ದರು.

ಒಂದನೇ ಕೀರ್ತಿ ವರ್ಮನು ನಿಧನವಾದಾಗ ಅವನ ಮಕ್ಕಳು ಇನ್ನೂ ಪ್ರಾಪ್ತ ವಯಸ್ಕರಾಗಿರಲಿಲ್ಲವೆಂದು ತಿಳಿದು ಬರುತ್ತದೆ. ಆದ್ದರಿಂದ ಅವನ ತಮ್ಮನಾದ ***ಮಂಗಳೇಶನು*** ರಾಜನಾಗಿ ಕ್ರಿ.ಶ. 596 ರಿಂದ 610ರವರೆಗೂ ಆಳಿದನು. ಇವನು ತನ್ನ ಅಣ್ಣನ ರಾಜ್ಯ ವಿಸ್ತರಣಾ ನೀತಿಯನ್ನು ಮುಂದುವರಿಸಿದನು. ಆ ವೇಳೆಗೆ ಮಾಳವ, ಗುಜರಾತ್ ಮತ್ತು ವಿದರ್ಭ ಮೊದಲಾದ ಪ್ರದೇಶದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದ ಕಳಚೂರ್ಯರ ಮೇಲೆ ಯುದ್ಧ ಕೈಗೊಂಡನು. ಮಂಗಳೇಶನು ಕಳಚೂರಿ ಬುದ್ಧರಾಜನನ್ನು ಕ್ರಿ.ಶ. 602ರಲ್ಲಿ ಸೋಲಿಸಿ ತನ್ನ ರಾಜ್ಯವನ್ನು ವಿಸ್ತರಿಸಿದನು. ಗಂಗಾ ನದಿಯ ಬಯಲಿನವರೆಗೂ ರಾಜ್ಯ ವಿಸ್ತರಿಸಲು ಮಂಗಳೇಶನು ಯೋಚಿಸಿದ್ದಂತೆ ತೋರುತ್ತದೆ. ಆದರೆ ಅದು ಸಫಲವಾಗಲಿಲ್ಲ. ಮಂಗಳೇಶನು ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯಲ್ಲಿರುವ ರೇವತಿ ದ್ವೀಪವನ್ನು ಜಯಿಸಿದನು. ಪರಾಕ್ರಮಿಯಾದ ಇವನು ರಾಜ್ಯವನ್ನು ವಿಸ್ತರಿಸಿದುದಲ್ಲದೆ ಸಿಂಹಾಸನಕ್ಕೆ ತನ್ನ ಮಗನನ್ನೇ ಹಕ್ಕುದಾರನನ್ನಾಗಿ ಮಾಡಲು ಹವಣಿಸಿದನು. ಆದ್ದರಿಂದ ಸಿಂಹಾಸನಕ್ಕೆ ನಿಜವಾದ ವಾರಸುದಾರನಾದ ಪುಲಕೇಶಿಗೂ ಮಂಗಳೇಶನಿಗೂ ಅಂತರ್ಯುದ್ಧಗಳು ನಡೆದು ಮಂಗಳೇಶನು ಮರಣ ಹೊಂದಿದನು.

## 10.4 ಎರಡನೇ ಪುಲಿಕೇಶಿ

ಎರಡನೇ ಪುಲಿಕೇಶಿಯು ಕರ್ನಾಟಕದ ಹಾಗೂ ಪ್ರಾಚೀನ ಭಾರತದ ಹೆಸರಾಂತ ಸಾರ್ವಭೌಮರಲ್ಲೊಬ್ಬನು. ಇವನ ಆಳ್ವಿಕೆಯ ಕಾಲದಿಂದ ಬಾದಾಮಿ ಚಾಳುಕ್ಯ ರಾಜ್ಯವು ಅತ್ಯಂತ ಹಿರಿದಾದ ಸಾಮ್ರಾಜ್ಯವಾಗಿ ರೂಪುಗೊಂಡಿತು. ಇವನ ಪರಾಕ್ರಮ ಮತ್ತು ಕೀರ್ತಿಯು ದೇಶ ವಿದೇಶಗಳಲ್ಲಿ ವ್ಯಾಪಿಸಿತು. ಕಾವೇರಿಯಿಂದ ನರ್ಮದಾನದಿಯವರೆಗೆ ಚಾಳುಕ್ಯ ಸಾಮ್ರಾಜ್ಯವು ವಿಸ್ತರಿಸಿತು. ತನ್ನ ಚಿಕ್ಕಪ್ಪನೊಡನೆ ನಡೆದ ಅಂತರ್ಯುದ್ಧದಲ್ಲಿ ಜಯಶಾಲಿಯಾಗಿ ಪುಲಿಕೇಶಿಯು ಕ್ರಿ.ಶ. 610ರಲ್ಲಿ ಬಾದಾಮಿ ಚಾಳುಕ್ಯರ ಸಾರ್ವಭೌಮನಾದನು. ಪುಲಿಕೇಶಿ ಮತ್ತು ಮಂಗಳೇಶ್ವರರ ನಡುವೆ ನಡೆದ ಅಂತರ್ಯುದ್ಧ ಕಾಲದಲ್ಲಿ ರಾಜ್ಯದಲ್ಲಿ ಅರಾಜಕತೆಯುಂಟಾಯಿತು. ಈ ಸಂದರ್ಭವನ್ನು ಬಳಸಿಕೊಂಡು ಹಲವು ಮಾಂಡಲಿಕರು ವೈರಿಗಳನ್ನು ಶಿಕ್ಷಿಸಿ ರಾಜ್ಯದಲ್ಲಿ ಕ್ಷಣಿಕವಾಗಿ ತಲೆದೋರಿದ್ದ ಅರಾಜಕತೆಯನ್ನು ತೊಡೆದು ಹಾಕಿ ಸಾಮ್ರಾಜ್ಯ ನಿರ್ಮಾಣ ಕಾರ್ಯವನ್ನು ಕೈಗೊಂಡನು.

ಐಹೊಳೆ ಶಾಸನ ಮತ್ತು ಇವನ ಕಾಲದಲ್ಲಿ ರಾಜಧಾನಿಗೆ ಭೇಟಿ ನೀಡಿದ್ದ ಹೂಯನ್‌ತ್ಸಾಂಗನ ಬರವಣಿಗೆಯು ಪುಲಿಕೇಶಿಯ ಸಾಧನೆಗಳನ್ನು ತಿಳಿಸುವ ಅಮೂಲ್ಯ ಆಧಾರಗಳಾಗಿದೆ. ಐಹೊಳೆಯ

ಮೆಗುತಿ ಜಿನಾಲಯದ ಗೋಡೆಯ ಮೇಲೆ ಜೈನಕವಿ ರವಿಕೀರ್ತಿಯಿಂದ ರಚಿತವಾದ ಐಹೊಳೆ ಶಾಸನವು ಸುಪ್ರಸಿದ್ಧ ಐತಿಹಾಸಿಕ ದಾಖಲೆಗಳಲ್ಲೊಂದೆಂದು ಪ್ರಸಿದ್ಧವಾಗಿದೆ. ಇದನ್ನು ಕ್ರಿ.ಶ. 634 ರಲ್ಲಿ ಸಂಸ್ಕೃತ ಭಾಷೆಯಲ್ಲಿ ಕೆತ್ತಲಾಗಿದೆ. ಇದು ಚಾಳುಕ್ಯ ಸಂತತಿಯ ಪೂರ್ವ ಚರಿತ್ರೆಯನ್ನು ಮಿಗಿಲಾಗಿ ಇಮ್ಮಡಿ ಪುಲಿಕೇಶಿಯು ಕೈಗೊಂಡ ದಿಗ್ವಿಜಯ ಮತ್ತು ಸೋಲಿಸಿದ ಶತ್ರುಗಳ ವಿವರಗಳನ್ನೂ ಒಳಗೊಂಡಿದೆ.

ಐಹೊಳೆ ಶಾಸನದ ಪ್ರಕಾರ ಅಂತರ್ಯುದ್ಧದಿಂದುಂಟಾದ ಪ್ರಕ್ಷುಬ್ಧ ರಾಜಕೀಯ ಪರಿಸ್ಥಿತಿಯ ಲಾಭ ಪಡೆದು ಅಪ್ಪಾಯಕ ಮತ್ತು ಗೋವಿಂದ ಎಂಬುವವರು ಭೀಮಾ ನದಿಯ ಪ್ರದೇಶದಲ್ಲಿ ಚಾಳುಕ್ಯ ರಾಜ್ಯವನ್ನು ಆಕ್ರಮಿಸಲು ಯತ್ನಿಸಿದರು. ಎರಡನೇ ಪುಲಿಕೇಶಿಯು ಕೂಡಲೇ ಸೈನ್ಯ ಸಮೇತ ಶತ್ರುಗಳ ಮೇಲೆ ಎರಗಿದನು. ಗೋವಿಂದನು ಸೋತು ಶರಣಾಗತನಾದನು. ಅಪ್ಪಾಯಕನು ರಣರಂಗದಿಂದ ತಲೆಮರೆಸಿಕೊಂಡು ತಪ್ಪಿಸಿಕೊಂಡನು. ಅನಂತರ ಪುಲಿಕೇಶಿಯು ಆ ವೇಳೆಗೆ ಅಧಿಕಾರ ಸ್ಥಾಪಿಸಲು ಯತ್ನಿಸಿದ ಕದಂಬರನ್ನು ಸೋಲಿಸಿ ಬನವಾಸಿಯನ್ನು ವಶಪಡಿಸಿಕೊಂಡನು. ಇದಾದ ನಂತರ ದಕ್ಷಿಣ ಕನ್ನಡ ಜಿಲ್ಲೆಯ ಅಳುಪರ ಮೇಲೆ ಚಾಳುಕ್ಯರ ಪರಮಾಧಿಕಾರವನ್ನು ಸ್ಥಾಪಿಸಿದನು. ತಲಕಾಡಿನ ಗಂಗರು ಚಾಳುಕ್ಯರೊಡನೆ ಅನ್ಯೋನ್ಯ ಸಂಬಂಧ ಹೊಂದಿದ್ದರಿಂದ ಪುಲಕೇಶಿಯ ದಿಗ್ವಿಜಯಗಳಲ್ಲಿ ಅವರು ಸಹಕರಿಸಿದರು.

ಐಹೊಳೆ ಶಾಸನದ ಪ್ರಕಾರ ಪುಲಿಕೇಶಿಯು ಕೊಂಕಣದ ಕಡೆಗೆ ತಿರುಗಿ ಪುರಿಯ ಮೌರ್ಯರನ್ನು ಸೋಲಿಸಿದನು. ಪುರಿ ಎಂಬುವುದು ಮುಂಬಾಯಿ ಬಳಿ ಇರುವ ಎಲಿಫೆಂಟಾ ಎದುರಿಗಿರುವ ಘರಪುರಿ ಎಂಬುದಾಗಿ ತಿಳಿದು ಬರುತ್ತದೆ. ಅನಂತರ ಪುಲಿಕೇಶಿಯು ಲಾಟ, ಮಾಳವ ಮತ್ತು ಗುಜರಾತ್ ಪ್ರದೇಶಗಳನ್ನು ಗೆದ್ದು ಅಲ್ಲಿ ಚಾಳುಕ್ಯರ ಪರಮಾಧಿಕಾರವನ್ನು ಸ್ಥಾಪಿಸಿದನು. ಆ ವೇಳೆಗೆ ಉತ್ತರ ಪಥೇಶ್ವರ ಎಂಬುದಾಗಿ ಪ್ರಸಿದ್ಧನಾಗಿದ್ದ ಹರ್ಷ ಚಕ್ರವರ್ತಿಯು ದಕ್ಷಿಣದತ್ತ ವಿಜಯ ಯಾತ್ರೆಯನ್ನು ಕೈಗೊಂಡನು. ಹ್ಯೂಯನ್‌ತ್ಸಾಂಗನು ಸಹ ಹರ್ಷನ ದಂಡಯಾತ್ರೆಯನ್ನು ವರ್ಣಿಸಿರುವನು. ಅವನು ತನ್ನ ಮತ್ತು ಸಾಮಂತರ ಪಡೆಗಳಿಂದ ಕೂಡಿದ ದೊಡ್ಡ ಸೈನ್ಯ ಸಮೇತನಾಗಿ ಮುಂದುವರಿದು ನರ್ಮದಾ ನದಿಯ ತೀರದವರೆಗೂ ಬಂದನು. ಹರ್ಷನು ತಾನೇ ಸ್ವತಃ ಸೈನ್ಯದ ನೇತೃತ್ವವನ್ನು ವಹಿಸಿದ್ದನು. ನರ್ಮದಾ ತೀರದಲ್ಲಿ ಪುಲಿಕೇಶಿಗೂ ಹರ್ಷವರ್ಧನನಿಗೂ ಸಂಗ್ರಾಮವು ಘಟಿಸಿತು. ಹ್ಯೂಯನ್‌ತ್ಸಾಂಗನ ಪ್ರಕಾರ ಉತ್ತರ ಪಥೇಶ್ವರ ಹರ್ಷವರ್ಧನನು ಯುದ್ಧದಲ್ಲಿ ಸೋತು ಹರ್ಷವನ್ನು ಕಳೆದುಕೊಂಡು ಹಿಂದಿರುಗಬೇಕಾಯಿತು. ಐಹೊಳೆ ಶಾಸನವು ಸಹ ಶ್ರೀಹರ್ಷನ ಸೋಲನ್ನೂ ಪುಲಿಕೇಶಿಯ ವಿಜಯವನ್ನು ತಿಳಿಸುತ್ತದೆ. ಈ ಯುದ್ಧವು ಕ್ರಿ.ಶ. 630 ಮತ್ತು 634 ಮಧ್ಯೆ ನಡೆಯಿತ್ತೆಂದು ತಿಳಿದು ಬರುತ್ತದೆ. ನರ್ಮದಾ ನದಿಯು ಚಾಳುಕ್ಯ ಸಾಮ್ರಾಜ್ಯದ ಗಡಿಯಾಯಿತು. ಹರ್ಷನ ಮೇಲಿನ ವಿಜಯದ ಸಂಕೇತವಾಗಿ ಪುಲಿಕೇಶಿಯು 'ಪರಮೇಶ್ವರ' ಎಂಬ ಬಿರುದನ್ನು ಧರಿಸಿದುದಾಗಿ ಚಾಳುಕ್ಯರ ಶಾಸನಗಳಿಂದ ತಿಳಿದು ಬರುತ್ತದೆ. ಈ ವಿಜಯದ ತರುವಾಯ ಪುಲಿಕೇಶಿಯನ್ನು 99,000 ಹಳ್ಳಿಗಳನ್ನೊಳಗೊಂಡ ಮೂರು ಮಹಾರಾಷ್ಟ್ರಗಳ ಅಧಿಪತಿಯೆಂದು ವರ್ಣಿಸಲಾಗಿದೆ. ಪ್ರಸ್ತುತ ಕರ್ನಾಟಕ, ಮಹಾರಾಷ್ಟ್ರ ಮತ್ತು ಕರಾವಳಿಯ ಕೊಂಕಣ ಪ್ರದೇಶವೇ ತ್ರೈರಾಷ್ಟ್ರಗಳಿರಬೇಕೆಂದು ಅರ್ಥೈಸಲಾಗಿದೆ.

ಅನಂತರ ಪುಲಿಕೇಶಿಯು ಪುರ್ವಾಭಿಮುಖವಾಗಿ ದಂಡಯಾತ್ರೆಯನ್ನು ಮುಂದುವರಿಸಿ ಕೋಸಲ ಮತ್ತು ಕಳಿಂಗದ ಹಲವು ಭಾಗಗಳನ್ನು ಜಯಿಸಿದನು. ತರುವಾಯ ಪುಲಿಕೇಶಿಯು ಪಿಷ್ಟಪುರ ಅಥವಾ ಇಂದಿನ ಪೂರ್ವ ಕರಾವಳಿಯ ಪಿತ್ತಾಪುರಂ ಪ್ರದೇಶವನ್ನೂ ವೆಂಗಿಮಂಡಲವನ್ನು ವಶಪಡಿಸಿಕೊಂಡನು. ತನ್ನ ಕಿರಿಯ ತಮ್ಮನಾದ ಕುಬ್ಜವಿಷ್ಣುವರ್ಧನನ್ನು ವೆಂಗಿಯ ರಾಜನನ್ನಾಗಿ ನೇಮಿಸಿದನು. ಅನಂತರ ಪುಲಿಕೇಶಿಯು ವಿಷ್ಣುಕುಂಡಿನ್ ರಾಜ್ಯವನ್ನು ಗೆದ್ದು ಪಲ್ಲವರ ಮೇಲೆ ಯುದ್ಧ ಹೂಡಿದನು. ಆಗ ಪಲ್ಲವರ ರಾಜನಾಗಿದ್ದ ಒಂದನೇ ಮಹೇಂದ್ರವರ್ಮನು ಯುದ್ಧದಲ್ಲಿ ಸೋತು ತಲೆ ಮರೆಸಿಕೊಂಡುದಾಗಿ ತಿಳಿದು ಬರುತ್ತದೆ. ಪಲ್ಲವರನ್ನು ಸೋಲಿಸಿದ ನಂತರ ಪುಲಿಕೇಶಿಯು

ಕಾವೇರಿ ನದಿಯನ್ನು ದಾಟಿ ಚೋಳ, ಪಾಂಡ್ಯ ಮತ್ತು ಚೇರ ರಾಜರು ತನ್ನ ಸಾರ್ವಭೌಮತ್ವಕ್ಕೆ ತಲೆಬಾಗುವಂತೆ ಮಾಡಿದನು. ಈ ದಿಗ್ವಿಜಯಗಳ ನಂತರ ಪುಲಿಕೇಶಿ ಸಾರ್ವಭೌಮನು ತನ್ನ ರಾಜಧಾನಿಯಾದ ಬಾದಾಮಿಗೆ ಹಿಂತಿರುಗಿ ವಿಜಯ ಯಾತ್ರೆಯನ್ನು ವೈಭವದಿಂದ ಆಚರಿಸಿದನು.

ಚೀಣಾ ದೇಶದ ಪ್ರಸಿದ್ಧ ಯಾತ್ರಿಕನಾದ ಹ್ಯೂಯನ್‌ತ್ಸಾಂಗನು ಕ್ರಿ.ಶ. 641 ರಲ್ಲಿ ಚಾಳುಕ್ಯ ಸಾಮ್ರಾಜ್ಯವನ್ನು ಸಂದರ್ಶಿಸಿದನು. ಅವನು ಸಾಮ್ರಾಜ್ಯದ ಸ್ಥಿತಿಗತಿಗಳನ್ನೂ, ಪುಲಿಕೇಶಿಯ ಶೌರ್ಯ ಮತ್ತು ಪರಾಕ್ರಮಗಳನ್ನೂ, ಜನರ ಗುಣಗಳನ್ನೂ, ಬೆಳೆಗಳನ್ನೂ ಮತ್ತು ಬೌದ್ಧಮತದ ಸ್ಥಿತಿಗಳನ್ನೂ ವರ್ಣಿಸಿದ್ದಾನೆ. ಅವನ ಬರವಣಿಗೆ ಪ್ರಕಾರ ಪುಲಿಕೇಶಿಯು ಶೌರ್ಯಕ್ಕೂ ಉದಾರಗುಣಗಳಿಗೂ ಪ್ರಸಿದ್ಧನಾಗಿದ್ದನು; ಚಕ್ರವರ್ತಿಯ ಯೋಜನೆಗಳು ಮತ್ತು ಆಡಳಿತವು ಜನೋಪಯುಕ್ತವಾಗಿತ್ತು. ಪುಲಿಕೇಶಿಯ ಸೈನಿಕರು ಪರಾಕ್ರಮಿಯಾಗಿದ್ದು, ಸಮರ್ಥ ದಂಡನಾಯಕನನ್ನು ಹೊಂದಿದ್ದಿತು. ಆದುದರಿಂದ ಪುಲಿಕೇಶಿ ಯುದ್ಧಗಳಲ್ಲಿ ಜಯಗಳಿಸುತ್ತಿದ್ದನು ಎಂದಿದ್ದಾನೆ. ದಳಪತಿಗಳು ಹೇಡಿಗಳಂತೆ ರಣರಂಗದಿಂದ ಹಿಂದಿರುಗಿದರೆ ಅವರಿಗೆ ಶಿಕ್ಷೆಯನ್ನು ಕೊಡದೆ ಸ್ತ್ರೀಯರ ಉಡುಪುಗಳನ್ನು ಬಹುಮಾನವಾಗಿ ನೀಡಲಾಗುತ್ತಿದ್ದಿತೆಂದು ತಿಳಿಸಿದ್ದಾನೆ. ಈ ಅವಮಾನದಿಂದ ಪಾರಾಗಲು ದಳಪತಿಗಳು ವೀರಾವೇಶದಿಂದ ಯುದ್ಧ ಮಾಡುತ್ತಿದ್ದರು; ಭೂಮಿಯು ಫಲವತ್ತಾಗಿದ್ದು ಒಳ್ಳೆಯ ಬೆಳೆಯಾಗುತ್ತಿತ್ತು; ಹವಾಗುಣ ಬೆಚ್ಚಗಿತ್ತು; ಜನರು ಸರಳ ಜೀವಿಗಳು, ಪ್ರಾಮಾಣಿಕರೂ, ನ್ಯಾಯನಿಷ್ಠರು ಆಗಿದ್ದರೆಂದು ವರದಿ ಮಾಡಿದ್ದಾನೆ. ಅವರು ವೈರಿಗಳ ಮೇಲೆ ಸೇಡು ತೀರಿಸಿಕೊಳ್ಳುವ ಮೊದಲು ಮುನ್ನೆಚ್ಚರಿಕೆ ನೀಡುತ್ತಿದ್ದರು ಎಂಬುದಾಗಿ ಹ್ಯೂಯನ್‌ತ್ಸಾಂಗನು ವರ್ಣಿಸಿದ್ದಾನೆ. ಅವನು ಚಾಳುಕ್ಯ ಸಾಮ್ರಾಜ್ಯದಲ್ಲಿದ್ದ ಬೌದ್ಧ ದರ್ಮದ ಕೇಂದ್ರಗಳನ್ನು ಸಂದರ್ಶಿಸಿದನು. ಅವುಗಳಲ್ಲಿ ಅಜಂತ ಮತ್ತು ಬನವಾಸಿ ಮುಖ್ಯವಾದವು. ಹ್ಯೂಯನ್‌ತ್ಸಾಂಗನ ಆಗಮನದ ವೇಳೆಗೆ ದಕ್ಷಿಣ ಭಾರತದಲ್ಲಿ ಬೌದ್ಧ ಮತವು ಕ್ಷೀಣಿಸಿರುವುದನ್ನು ಅವನು ಮನಗಂಡನು.

ಎರಡನೇ ಪುಲಿಕೇಶಿಯು ಸುಮಾರು ಮೂವತ್ತು ವರ್ಷಗಳ ಕಾಲ ಯಶಸ್ವಿಯಾಗಿ ಆಳ್ವಿಕೆ ನಡೆಸಿದನು. ಆದರೆ ತನ್ನ ಆಳ್ವಿಕೆಯ ಕೊನೆಗಾಲದಲ್ಲಿ ಪಲ್ಲವರ ವಿರೋಧವನ್ನು ಎದುರಿಸಬೇಕಾಯಿತು. ಆ ವೇಳೆಗೆ ಪಲ್ಲವ ಒಂದನೇ ಮಹೇಂದ್ರವರ್ಮನ ಮಗನಾದ ಒಂದನೇ ನರಸಿಂಹವರ್ಮನ ರಾಜನಾಗಿ ತಮಿಳು ನಾಡಿನಲ್ಲಿ ಎಲ್ಲಾ ಶತ್ರುಗಳನ್ನು ಸೋಲಿಸಿದ್ದನು. ತನ್ನ ತಂದೆಯನ್ನು ಪರಾಭವಗೊಳಿಸಿದ್ದ ಪುಲಿಕೇಶಿಯ ಮೇಲೆ ಸೇಡು ತೀರಿಸಿಕೊಳ್ಳಲು ದೊಡ್ಡ ಸೈನ್ಯವನ್ನು ಕಳುಹಿಸಿದನು. ಪುಲಿಕೇಶಿಯ ಸೈನ್ಯಕ್ಕೂ ಪಲ್ಲವರ ಸೈನ್ಯಕ್ಕೂ ಸುರಮಾರ ಮಣಿಮಂಗಲ ಮೊದಲಾದ ಕಡೆಗಳಲ್ಲಿ ಯುದ್ಧಗಳು ನಡೆದು ಪಲ್ಲವರ ಸೈನ್ಯವು ವಿಜಯಗಳಿಸಿತು. ಈ ವಿಜಯಗಳಿಂದ ಉತ್ತೇಜನಗೊಂಡ ಪಲ್ಲವ ಸೈನ್ಯವು ಮುಂದುವರಿದು ಚಾಳುಕ್ಯ ರಾಜಧಾನಿಯನ್ನು ಮುತ್ತಿತು. ನರಸಿಂಹವರ್ಮನನ್ನು ಈ ಮುತ್ತಿಗೆಯಲ್ಲಿ ಜಯಗಳಿಸಿದನು. ಈ ಯುದ್ಧವು ಕ್ರಿ.ಶ. 642 ರಲ್ಲಿ ನಡೆಯಿತು. ಈ ಘಟನೆಯ ನಂತರ ಪುಲಿಕೇಶಿಯ ಬಗ್ಗೆ ಏನೂ ತಿಳಿದು ಬರುವುದಿಲ್ಲ. ಅವನು ವೀರಾವೇಶದಿಂದ ಹೋರಾಡಿ ಮರಣವನ್ನಪ್ಪಿರಬಹುದೆಂದು ತೋರುತ್ತದೆ. ಬಾದಾಮಿಯ ಕೋಟೆಯ ಕಲ್ಲಿನಲ್ಲಿ ನರಸಿಂಹವರ್ಮನು ತನ್ನ ಜಯವನ್ನು ವರ್ಣಿಸಿರುವ ಶಾಸನವನ್ನು ಕೆತ್ತಿಸ ತಾನು ಧರಿಸಿದ "ವಾತಾಪಿ ಕೊಂಡನ್" ಎಂಬ ಬಿರುದನ್ನು ಕೆತ್ತಿಸಿರುವನು. ಬಾದಾಮಿಯು ಸ್ವಲ್ಪಕಾಲ ಪಲ್ಲವರ ವಶವಾಗಿತ್ತೆಂದು ತಿಳಿದು ಬರುತ್ತದೆ. ಸುಮಾರು 13 ವರ್ಷಗಳ ಕಾಲ ಚಾಳುಕ್ಯ ಸಾಮ್ರಾಜ್ಯವು ಒಡೆದು ಅನೇಕ ಘಟಕಗಳಾಗಿ ಹೋಗಿತ್ತು. ಸಾಮ್ರಾಜ್ಯದ ದಕ್ಷಿಣ ಭಾಗಗಳು ಪಲ್ಲವರ ಹಿಡಿತಕ್ಕೆ ಒಳಗಾದವು. ಆದರೂ ಪುಲಿಕೇಶಿಯ ಮಕ್ಕಳ ಹಾಗೂ ಅವರ ಆಪ್ತರ ಪ್ರತಿರೋಧವನ್ನು ಪಲ್ಲವರು ಸತತವಾಗಿ ಎದುರಿಸಬೇಕಾಯಿತು.

ಎರಡನೇ ಪುಲಿಕೇಶಿಯು ಚಾಳುಕ್ಯ ಸಂತತಿಯ ಮತ್ತು ಪ್ರಾಚೀನ ಭಾರತದ ಶ್ರೇಷ್ಠಾತಿಶ್ರೇಷ್ಠ ಸಾಮ್ರಾಟರಲ್ಲೊಬ್ಬನು. ಇವನ ಕಾಲದಲ್ಲಿ ಚಾಳುಕ್ಯ ಮನೆತನದ ಕೀರ್ತಿಯು ತನ್ನ ಉತ್ತುಂಗ ಶಿಖರವನ್ನು ಮುಟ್ಟಿತು. ಇವನಿಗೆ ಮಹಾರಾಜಾಧಿರಾಜ, ಪರಮೇಶ್ವರ, ಶ್ರೀಪೃಥ್ವೀವಲ್ಲಭ ಎಂಬ ಬಿರುದುಗಳಿದ್ದವು. ಪುಲಿಕೇಶಿಯ ಮತ್ತು ಚಾಳುಕ್ಯ ಸಾಮ್ರಾಜ್ಯದ ಪ್ರತಿಷ್ಠೆಯು ಭಾರತದಲ್ಲಿ

ಮಾತ್ರವಲ್ಲದೆ ವಿದೇಶಗಳಲ್ಲೂ ವ್ಯಾಪಿಸಿತು. ಮುಸ್ಲಿಂ ಬರಹಗಾರ ತಬಾರಿಯ ಪ್ರಕಾರ ಪುಲಿಕೇಶಿಯ ರಾಯಭಾರಿಗಳು ಪರ್ಷಿಯಾದ ರಾಜ ಇಮ್ಮಡಿ ಖುಸ್ರುವಿನ ಆಸ್ಥಾನಕ್ಕೆ ಕ್ರಿ.ಶ. 625-26 ರಲ್ಲಿ ಹೋಗಿದ್ದರು. ಖುಸ್ರುವಿನ ರಾಯಭಾರಿಗಳು ಸಹ ಪುಲಿಕೇಶಿಯ ಆಸ್ಥಾನಕ್ಕೆ ಬಂದಿದ್ದ ಸಂಗತಿಯನ್ನು ಅಜಂತ ಗುಹಾಲಯವೊಂದರಲ್ಲಿ ಬಿಡಿಸಿರುವ ಚಿತ್ರದಿಂದ ಖಚಿತವಾಗಿದೆ. ಇಮ್ಮಡಿ ಪುಲಿಕೇಶಿಗೆ ಆದಿತ್ಯವರ್ಮ, ಚಂದ್ರಾದಿತ್ಯ, ವಿಕ್ರಮಾದಿತ್ಯ, ರಣರಾಗವರ್ಮ ಮತ್ತು ಧರಾಶ್ರಯ ಎಂಬ ಗಂಡು ಮಕ್ಕಳಿದ್ದರು. ಪುಲಿಕೇಶಿಯ ಮರಣದ ನಂತರ ವಿಕ್ರಮಾದಿತ್ಯನ ಹೊರತಾಗಿ ಉಳಿದವರ ವಿವರಗಳು ತಿಳಿದುಬರುವುದಿಲ್ಲ. ವಿಕ್ರಮಾದಿತ್ಯನು ಚಾಳುಕ್ಯ ಸಾಮ್ರಾಜ್ಯವನ್ನು ಪುನರ್ ಸ್ಥಾಪಿಸಲು ಸತತವಾಗಿ ಪಲ್ಲವರೊಡನೆ ಹೋರಾಟದಲ್ಲಿ ತೊಡಗಿದ್ದನು.

## 10.5 ಎರಡನೇ ಪುಲಿಕೇಶಿಯ ನಂತರದ ಚಾಳುಕ್ಯ ಸಂತತಿಯ ಅರಸರು: ಒಂದನೇ ವಿಕ್ರಮಾಧಿತ್ಯನಿಂದ ಎರಡನೇ ಕೀರ್ತಿವರ್ಮನವರೆಗೆ

ಎರಡನೇ ಪುಲಕೇಶಿಯ ತರುವಾಯ ಬಾದಾಮಿ ಚಾಳುಕ್ಯರ ರಾಜಕೀಯ ಇತಿಹಾಸದಲ್ಲಿ ಐದು ಮಂದಿ ಪ್ರಮುಖ ರಾಜರನ್ನು ಗುರುತಿಸಬಹುದು: ಒಂದನೇ ವಿಕ್ರಮಾದಿತ್ಯ, ವಿನಯಾದಿತ್ಯ, ವಿಜಯಾದಿತ್ಯ, ಇಮ್ಮಡಿ ವಿಕ್ರಮಾದಿತ್ಯ, ಎರಡನೇ ಕೀರ್ತಿವರ್ಮರು. ಒಂದನೇ ವಿಕ್ರಮಾದಿತ್ಯ ಕ್ರಿ.ಶ. ಸುಮಾರು 655 ರಿಂದ 681 ರವರೆಗೆ ಆಳಿದನು. ಬಾದಾಮಿ ಚಾಳುಕ್ಯ ಮನೆತನವು ಪಲ್ಲವ ನರಸಿಂಹವರ್ಮನ ಆಕ್ರಮಣದಿಂದ ತತ್ತರಿಸುತ್ತಿದ್ದ ಸಮಯದಲ್ಲಿ ಪುಲಿಕೇಶಿಯ ಮೂರನೆ ಮಗನಾದ ಒಂದನೇ ವಿಕ್ರಮಾದಿತ್ಯನು ತನ್ನ ಸಂತತಿಯ ವೈಭವವನ್ನು ಪುನರ್ ಸ್ಥಾಪಿಸಲು ಬದ್ಧ ಕಂಕಣನಾದನು. ಇವನು ಸಿಂಹಾಸನಕ್ಕೆ ಬರುವ ಪೂರ್ವದಲ್ಲೂ ಪಲ್ಲವರೊಡನೆ ಎಡೆಬಿಡದೆ ಹೋರಾಟದಲ್ಲಿ ತೊಡಗಿದ್ದನೆಂದು ತಿಳಿದು ಬರುತ್ತದೆ. ಇವನು ಪಲ್ಲವ ನರಸಿಂಹವರ್ಮನ್, ಅವನ ಮಗನಾದ ಇಮ್ಮಡಿ ಮಹೇಂದ್ರವರ್ಮ ಮತ್ತು ಮೊಮ್ಮಗನಾದ ಪರಮೇಶ್ವರವರ್ಮ ಇವರ ಮೇಲೆ ನಿರಂತರವಾಗಿ ಕಾದಾಡಿ ಅವರನ್ನು ಪರಾಭವಗೊಳಿಸಿದನು. ಯುದ್ಧ ತಂತ್ರ ಕುಶಲನಾದ ವಿಕ್ರಮಾದಿತ್ಯನು ಯುದ್ಧಗಳನ್ನು ಹೆಚ್ಚು ಮಟ್ಟಿಗೆ ಪಲ್ಲವ ಸಾಮ್ರಾಜ್ಯದ ಗಡಿಗಳಿಗೆ ಸೀಮಿತಗೊಳಿಸಿದ್ದನು. ಕ್ರಿ.ಶ. 670ರ ವೇಳೆಗೆ ವಿಕ್ರಮಾದಿತ್ಯ ಪಲ್ಲವ ರಾಜಧಾನಿಯಾದ ಕಂಚಿಯನ್ನು ಮುತ್ತಲು ಸನ್ನದ್ಧವಾಗಿ ಆ ನಗರದ ಸಮೀಪದಲ್ಲಿರುವ ಮಲ್ಲಿಯೂರಿನವರೆಗೂ ಮುಂದುವರಿದನು. ಅನಂತರ ಚೋಳ ನಾಡಿನ ರಾಜಧಾನಿಯಾದ ಉರಗಪುರ ಅಥವಾ ಉರ್ಯೆಯಾರಿನವರೆಗೂ ಆಕ್ರಮಣ ನಡೆಸಿದುದಾಗಿ ತಿಳಿದು ಬರುತ್ತದೆ. ಪಲ್ಲವರ ಸಾಮಂತ ಮನೆತನಗಳಾದ ಚೋಳ ಮತ್ತು ಪಾಂಡ್ಯರನ್ನು ಸೋಲಿಸಿದನೆಂದು ತಿಳಿದು ಬರುತ್ತದೆ. ಪಲ್ಲವ ರಾಜರನ್ನು ಸೋಲಿಸಿ ತನ್ನ ಮನೆತನದ ಹಾಗೂ ಬಾದಾಮಿ ಚಾಳುಕ್ಯ ಸಾಮ್ರಾಜ್ಯದ ವೈಭವವನ್ನು ಯಶಸ್ವಿಯಾಗಿ ಪುನಃ ಸ್ಥಾಪಿಸಿ ವಿಕ್ರಮಾದಿತ್ಯನು ಪರಮೇಶ್ವರ ಎಂಬ ಬಿರುದನ್ನು ಧರಿಸಿದನು. ವಿಕ್ರಮಾದಿತ್ಯನು ತನ್ನ ಶತೃಗಳನ್ನು ನಿಗ್ರಹಿಸುವ ಕಾರ್ಯದಲ್ಲಿ ಗಂಗ ಪ್ರಭುವಾದ ಭೂವಿಕ್ರಮನು ಹೆಚ್ಚು ಸಹಕಾರಿಯಾಗಿದ್ದನೆಂದು ತಿಳಿದು ಬರುತ್ತದೆ. ತನ್ನ ಪರಾಕ್ರಮದಿಂದ ಚಾಳುಕ್ಯ ಸಂತತಿಯನ್ನು ದುಃಸ್ಥಿತಿಯಿಂದ ಪಾರುಮಾಡಿದನು. ಇವನ ತರುವಾಯ ಇವನ ಮಗನಾದ ವಿನಯಾದಿತ್ಯನು ರಾಜನಾದನು.

***ವಿನಯಾದಿತ್ಯನು*** ಕ್ರಿ.ಶ. 681 ರಿಂದ 696 ರವರೆಗೆ ಆಳಿದನು. ತನ್ನ ತಂದೆಯ ಕಾಲದಲ್ಲಿ ಆಡಳಿತ ಮತ್ತು ಯುದ್ಧಗಳಲ್ಲಿ ಪಾಲ್ಗೊಂಡಿದ್ದು ಅನುಭವ ಗಳಿಸಿದ್ದನು. ಇವನ ಆಳ್ವಿಕೆ ಕಾಲವು ಶಾಂತಿಯುತವಾಗಿತ್ತು. ಅಳುಪರು, ಸೇಂದ್ರಕರೂ ವಿನಯಾದಿತ್ಯನಿಗೆ ಕಪ್ಪ ಕಾಣಿಕೆಯನ್ನು ಸಲ್ಲಿಸುತ್ತಿದ್ದರು. ಯುವರಾಜನಾದ ವಿಜಯಾದಿತ್ಯನು ತನ್ನ ತಂದೆಗೆ ಆಡಳಿತದಲ್ಲಿ ನೆರವಾಗುತ್ತಿದ್ದನು. ಈತನ ಪಟ್ಟದರಸಿಯಾದ ವಿನಯಮತಿಯು ಬಾದಾಮಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದಳು. ಚೀಣಾದ ಚಕ್ರವರ್ತಿಯ ಆಸ್ಥಾನಕ್ಕೆ ವಿನಯಾದಿತ್ಯನು ತನ್ನ ರಾಯಭಾರಿಯನ್ನು ಕಳುಹಿಸುದುದಾಗಿ ತಿಳಿದು ಬರುತ್ತದೆ. ಇವನು ಉತ್ತರದತ್ತ ದಂಡೆತ್ತಿ ಹೋಗಿ ಕನೂಜಿನ ರಾಜ ಯಶೋವರ್ಮನನ್ನು ಸೋಲಿಸಿದುದಾಗಿ ತಿಳಿದು ಬರುತ್ತದೆ. ಇವನು

ಕ್ರಿ.ಶ. 696 ರಲ್ಲಿ ಮರಣ ಹೊಂದಿದನು. ಇವನ ತರುವಾಯ ಇವನ ಮಗ ವಿಜಯಾದಿತ್ಯನು ಕ್ರಿ.ಶ. 696 ರಿಂದ 733 ರವರೆಗೆ ಆಳಿದನು. ಇವನು ತನ್ನ ತಂದೆಯ ಕಾಲದಿಂದಲೂ ಆಡಳಿತದಲ್ಲಿ ನುರಿತಿದ್ದನು. ಇವನ ಆಳ್ವಿಕೆ ಕಾಲ ಶಾಂತಿಯುತವಾಗಿದ್ದಿತು. ಆಡಳಿತದಲ್ಲಿ ಇವನ ಮಗನಾದ ವಿಕ್ರಮಾದಿತ್ಯನು ಪಾಲ್ಗೊಂಡಿದ್ದನು. ಯುವರಾಜ ವಿಕ್ರಮಾದಿತ್ಯನು ಪಲ್ಲವ ರಾಜ್ಯವನ್ನು ಮುತ್ತಿ ಇಮ್ಮಡಿ ಪರಮೇಶ್ವರವರ್ಮನಿಂದ ಅಪಾರ ಐಶ್ವರ್ಯವನ್ನು ಗಳಿಸಿದನು. ವಿಜಯೇಶ್ವರ ದೇವಾಲಯವನ್ನು ಕಲ್ಲಿನಿಂದ ಕಟ್ಟಿಸಿದನು. ಇವನ ಪ್ರಾಣವಲ್ಲಬೆ **ವೀನಾ ಪೋಟಿ** ಎಂಬುವಳು ಹಿರಣ್ಯ ಗರ್ಭ ಯಜ್ಞವನ್ನು ಮಾಡಿ ಮಹಾಕೂಟದ ಮುಕುಟೇಶ್ವರನಿಗೂ, ವಿದ್ವಾಂಸರಿಗೂ ವಿಶೇಷ ದಾನಧರ್ಮ ಮಾಡಿದಳು. ವಿಜಯಾದಿತ್ಯನು ಜೈನ ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದನು. ಇವನ ಸಹೋದರಿ ಕುಂಕುಮದೇವಿಯು ಜೈನ ಧರ್ಮವನ್ನವಲಂಬಿಸಿದ್ದಳು. ಇವನ ಮರಣಾಂತರ ಯುವರಾಜ ವಿಕ್ರಮಾದಿತ್ಯನು ಚಕ್ರವರ್ತಿಯಾದನು. ಇವನನ್ನು ಇಮ್ಮಡಿ ವಿಕ್ರಮಾದಿತ್ಯ ಎಂದು ಕರೆಯಲಾಗಿದೆ.

***ಇಮ್ಮಡಿ ವಿಕ್ರಮಾದಿತ್ಯನು*** ಕ್ರಿ.ಶ. 733 ರಿಂದ 746 ರವರೆಗೆ ಆಳಿದನು. ಇವನು ತನ್ನ ತಂದೆಯ ಕಾಲದಲ್ಲೇ ಪಲ್ಲವರನ್ನೂ ಸೋಲಿಸಿದ್ದನು. ಅಧಿಕಾರ ವಹಿಸಿಕೊಂಡ ಕೂಡಲೇ ಪುನಃ ಪಲ್ಲವರ ಮೇಲೆ ದಂಡೆತ್ತಿ ಹೋಗಿ ಇಮ್ಮಡಿ ನಂದಿವರ್ಮ ಪಲ್ಲವನನ್ನು ಸೋಲಿಸಿದನು. ವಿಕ್ರಮಾದಿತ್ಯನು ಮತ್ತೊಮ್ಮೆ ಪಲ್ಲವರನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡುದಾಗಿ ತಿಳಿದುಬರುತ್ತದೆ. ಇವನ ಶಾಸನಗಳಲ್ಲಿ ವಿಕ್ರಮಾದಿತ್ಯನನ್ನು ಮೂರು ಸಾರಿ ಯಶಸ್ವಿಯಾಗಿ ಪಲ್ಲವರನ್ನು ಸೋಲಿಸದನೆಂದು ವಿವರಿಸಲಾಗಿದೆ. ಪಲ್ಲವರ ರಾಜ ಚಿಹ್ನೆಯೂ, ಐಶ್ವರ್ಯವೂ ವಿಕ್ರಮಾದಿತ್ಯನ ವಶವಾದವು. ವಿಕ್ರಮಾದಿತ್ಯನು ಪಲ್ಲವರ ಮೇಲಿನ ದಿಗ್ವಿಜಯದ ಕುರುವಾಗಿ ಕಂಚಿಯ ಕೈಲಾಸನಾಥ ದೇವಾಲಯದಲ್ಲಿ ತನ್ನ ವಿಜಯವನ್ನು ಕುರಿತಾದ ಶಾಸನವನ್ನು ಕೆತ್ತಿಸಿದನು. ಪಲ್ಲವರಿಂದ ವಶಪಡಿಸಿಕೊಂಡಿದ್ದ ಹೇರಳವಾದ ಧನಕನಕವನ್ನು ಆ ದೇವಾಲಯಕ್ಕೆ ತನ್ನ ಹೆಸರಿನಲ್ಲಿ ದಾನವಾಗಿ ನೀಡಿದನು.

ಇವನ ಆಳ್ವಿಕೆಯ ಕಾಲದಲ್ಲಿ ಸಿಂಧ್ ಪ್ರದೇಶದ ಮೇಲೆ ಅರಬ್ಬರ ದಂಡೆಯಾತ್ರೆಗಳು ನಡೆದವು. ಲಾಟ ಮಂಡಳದ ಪ್ರಾಂತ್ಯಾಧಿಕಾರಿಯಾಗಿದ್ದ ಚಾಳುಕ್ಯ ವಂಶದ ಮಂಡಲೇಶ್ವರನು ಅರಬ್ಬರನ್ನು ಯಶಸ್ವಿಯಾಗಿ ತಡೆಗಟ್ಟಿದನು. ಎರಡನೆ ವಿಕ್ರಮಾದಿತ್ಯನು ಬಾದಾಮಿ ಚಾಳುಕ್ಯ ಸಂತತಿಯ ಸಮರ್ಥ ಸಾಮ್ರಾಟರಲ್ಲಿ ಕೊನೆಯವನು. ಇವನ ಮರಣಾನಂತರ ಇವನ ಮಗ ಎರಡನೇ ಕೀರ್ತಿವರ್ಮನು ಅಧಿಕಾರಕ್ಕೆ ಬಂದನು.

***ಎರಡನೇ ಕೀರ್ತಿವರ್ಮನು*** ಕ್ರಿ.ಶ. 745 ರಲ್ಲಿ ಪಟ್ಟಕ್ಕೆ ಬಂದು 757 ರವರೆಗೂ ಆಳಿದನು. ಇವನು ವಿಶಾಲ ಸಾಮ್ರಾಜ್ಯವನ್ನು ದಕ್ಷತೆಯಿಂದ ಆಳುವಷ್ಟು ಸಮರ್ಥನಾಗಿರಲಿಲ್ಲ. ಇವನ ಕಾಲದಲ್ಲಿ ಹೊರಗಿನ ಶತ್ರುಗಳ ಭಯವಿರಲಿಲ್ಲ. ಆದರೆ ಸಾಮ್ರಾಜ್ಯದ ಮಾಂಡಲಿಕರು ಹಾಗೂ ಸಾಮಂತರು ಸ್ವತಂತ್ರವಾಗುವ ಹವಣಿಕೆಯಲ್ಲಿದ್ದರು. ಇಂತಹ ಸಾಮಂತರರಲ್ಲಿ ರಾಷ್ಟ್ರಕೂಟ ದಂತಿದುರ್ಗನು ಮುಖ್ಯನು. ಇವನು ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ವಿಧೇಯ ಸಾಮಂತನಾಗಿದ್ದು ಕಂಚಿಯ ದಂಡಯಾತ್ರೆಯಲ್ಲಿ ಸಹಕರಿಸಿದ್ದನು. ಚಾಳುಕ್ಯ ಸಂತತಿಯ ಅಂತ್ಯ ಸಮೀಪಿಸಿದುದನ್ನರಿತ ದಂತಿದುರ್ಗನು ಕ್ರಿ.ಶ. 754ರ ವೇಳೆಗೆ ಸ್ವತಂತ್ರವಾಗಿ ಆಳಲು ಆರಂಭಿಸಿ ಸಾಮ್ರಾಜ್ಯದ ಉತ್ತರ ಭಾಗವನ್ನು ಆಕ್ರಮಿಸಿಕೊಂಡನು. ದಂತಿದುರ್ಗನ ಸಾಮನ್‌ಗಡ್ ಶಾಸನದ ಪ್ರಕಾರ, ಪಲ್ಲವ, ಚೋಳ, ಚೇರ, ಪಾಂಡ್ಯ, ಶ್ರೀಹರ್ಷ, ವಜ್ರತ ಮೊದಲಾದ ರಾಜರನ್ನು ಸೋಲಿಸಿ ಪ್ರಸಿದ್ಧವಾಗಿದ್ದ ಚಾಲುಕ್ಯರ ಬಲವನ್ನು ಸೋಲಿಸಿ ದಂತಿದುರ್ಗನು ಮಹರಾಜಾಧಿರಾಜ, ಪರಮೇಶ್ವರ ಮತ್ತು ಪರಮ ಭಟ್ಟಾರಕ ಎಂಬ ಬಿರುದುಗಳನ್ನು ಧರಿಸಿದನು. ಕೀರ್ತಿವರ್ಮನು ಬಾದಾಮಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಮೇಲೆ ತನ್ನ ಆಳ್ವಿಕೆಯನ್ನು ಕ್ರಿ.ಶ. 757 ರವರೆಗೂ ಮುಂದುವರಿಸಿದನು. ಅದೇ ವರ್ಷದಲ್ಲಿ ಇವನ ಆಳ್ವಿಕೆ ಕೊನೆಗೊಂಡಿತು. ದಂತಿದುರ್ಗನು ರಾಷ್ಟ್ರಕೂಟರ ಪರಮಾಧಿಕಾರವನ್ನು

ಸ್ಥಾಪಿಸಿದನು. ಇಮ್ಮಡಿ ಕೀರ್ತಿವರ್ಮನ ಅಂತ್ಯದೊಡನೆ ಬಾದಾಮಿ ಚಾಳುಕ್ಯರ ರಾಜಕೀಯ ಇತಿಹಾಸವು ಕೊನೆಗೊಂಡಿತು. ಈ ಮನೆತನದ ಉಪಶಾಖೆಗಳು ಅಲ್ಲಲ್ಲಿ ರಾಷ್ಟ್ರಕೂಟರ ಸಾರ್ವಭೌಮರ ಸಾಮಂತ ಮನೆತನಗಳಾಗಿ ಹಲವು ಕಾಲ ಮುಂದುವರಿದವು.

## 10.6 ಸಾರಾಂಶ

ಈ ಘಟಕದಲ್ಲಿ ಬಾದಾಮಿ ಚಾಳುಕ್ಯ ಉದಯ, ಉನ್ನತಿ ಮತ್ತು ಅವನತಿಯ ಇತಿಹಾಸವನ್ನು ನಿಮಗೆ ಅರಿವು ಮಾಡಿಕೊಡಲು ಪ್ರಯತ್ನಿಸಿದ್ದೇವೆ.

ಇವರು ಸಾಮಂತ ಸ್ಥಾನದಿಂದ ಸರ್ವಸ್ವತಂತ್ರವಾದ ಬಲಿಷ್ಠ ರಾಜ್ಯವನ್ನು ನಿರ್ಮಿಸಿ ಸಾಹಸದ ಕತೆಯನ್ನು ಈ ಪಾಠದಲ್ಲಿ ನಿರೂಪಿಸಿ ನಿಮ್ಮ ಗಮನವನ್ನು ಸೆಳೆಯಲಾಗಿದೆ. ಆರಂಭ ಅರಸರ ಶ್ರಮದ ಫಲ ಹಾಗೂ ಅದನ್ನು ವಿಸ್ತರಿಸಿ ಸಮಕಾಲೀನ ಪ್ರಬಲ ರಾಜರಲ್ಲೊಬ್ಬರಾದ ಹರ್ಷವರ್ಧನನ್ನು ಸೋಲಿಸಿ ಬಲಾಢ್ಯ ಸಾಮ್ರಾಜ್ಯವನ್ನು ನಿರ್ಮಿಸಿದ ಕೀರ್ತಿ ಎರಡನೇ ಪುಲಿಕೇಶಿಗೆ ಸಲ್ಲುವ ವಿಷಯವನ್ನು ನಿಮ್ಮ ಅರಿವಿಗೆ ತರಲಾಗಿದೆ. ಕೊನೆಯ ಅರಸರೂ ಕೂಡ ಈ ಮನೆತನದ ರಾಜಕೀಯ ಕೀರ್ತಿಯನ್ನು ಪುನರ್ ಸ್ಥಾಪಿಸಿ ಅವರು ಪಲ್ಲವರೊಡನೆ ನಡೆಸಿದ ದೀರ್ಘ ರಾಜಕೀಯ ಹೋರಾಟ ಮತ್ತು ಅವರ ಅಂತ್ಯದ ಬಗೆಗೆ ವಿವರಣೆಗಳನ್ನು ತಿಳಿಸಲು ಯತ್ನಿಸಲಾಗಿದೆ.

## 10.7 ಸ್ವಪರೀಕ್ಷೆ ಪ್ರಶ್ನೆಗಳು

1. ಬಾದಾಮಿ ಚಾಳುಕ್ಯರ ರಾಜಕೀಯ ಉದಯದ ಬಗ್ಗೆ ಇರುವ ಜಿಜ್ಞಾಸೆಗಳನ್ನು ತಿಳಿಸ ಮತ್ತು ಆರಂಭದ ಅರಸರ ಸಾಧನೆಗಳನ್ನು ಪರಿಶೀಲಿಸಿ.
2. ಬಾದಾಮಿ ಚಾಳುಕ್ಯರ ಇತಿಹಾಸದಲ್ಲಿ ಎರಡನೇ ಪುಲಿಕೇಶಿ ಸ್ಥಾನವನ್ನು ನಿರ್ಧರಿಸಿ.
3. ಎರಡನೇ ಪುಲಿಕೇಶಿಯ ಸಾಧನೆಯನ್ನು ವಿವರಿಸಿ.
4. ಕೊನೆಯ ಬಾದಾಮಿ ಚಾಳುಕ್ಯರ ಅರಸರ ರಾಜಕೀಯ ಹೋರಾಟವನ್ನು ಚಿತ್ರಿಸಿ.

## 10.8 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1. Desai P.B. : A History of Karnataka
2. Yazdani G. : Early History of the Deccan
3. Diwakar .R.R. (Ed) : Karnataka through the Ages
4. Nilakanta Sastri K.A. : A History of South India
5. Bharatiya Vidya Bhavan Series : The Classical Age - Vol - III
6. ರಂಗಸ್ವಾಮಯ್ಯ ಜಿ.ಆರ್. : ಸಂಕ್ಷಿಪ್ತ ಕರ್ನಾಟಕದ ಚರಿತ್ರೆ
7. Mahalingam T.V. : South Indian Polity
8. Karashima .N. : South Indian History and Society
9. Surendra Rao (ed) : ಕರ್ನಾಟಕ ಚರಿತ್ರೆ, ಸಂ.2, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ
10. Ramesh .K.V. : Chalukyas of Vatapi
11. Dikshit .D.P. : Political History of the Chalukyas of Badami


**ಪ್ರೊ|| ಮಾದೇಗೌಡ**

# ಘಟಕ-11

# ಬಾದಾಮಿ ಚಾಳುಕ್ಯರು - ಸಾಮಾಜಿಕ ಪರಿಸ್ಥಿತಿ ಮತ್ತು ಸಾಂಸ್ಕೃತಿಕ ಕೊಡುಗೆಗಳು

ವಿಷಯಕ್ರಮ


**11.0** ಘಟಕ ಉದ್ದೇಶ

**11.1** ಪೀಠಿಕೆ

**11.2** ಆಡಳಿತ ಪದ್ಧತಿ

**11.3** ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ

**11.4** ಧರ್ಮ ಮತ್ತು ಸಾಹಿತ್ಯ

**11.5** ಕಲೆ ಮತ್ತು ವಾಸ್ತುಶಿಲ್ಪ

**11.6** ಸಾರಾಂಶ

**11.7** ಸ್ವಪರೀಕ್ಷೆ ಪ್ರಶ್ನೆಗಳು

**11.8** ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 11.0 ಘಟಕ ಉದ್ದೇಶ

ಬಾದಾಮಿ ಚಾಳುಕ್ಯರ ಆಡಳಿತ ವ್ಯವಸ್ಥೆ, ಸಾಮಾಜಿಕ ಸಂರಚನೆ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಪೂರಕವಾದ ವಿಷಯಗಳನ್ನು ತಿಳಿಸುವುದು ಈ ಘಟಕದ ಉದ್ದೇಶವಾಗಿದೆ. ಈ ಘಟಕದಲ್ಲಿ ಅಡಕವಾಗಿರುವ ವಿಷಯಗಳನ್ನು ಅಭ್ಯಾಸಿಸಿದ ಮೇಲೆ ಈ ಕೆಳಗಿನ ಅಂಶವನ್ನು ಕಲಿಯುವಿರಿ :

* ಚಾಳುಕ್ಯರ ಆಡಳಿತದ ಆದರ್ಶಗಳು ವೈದಿಕ ಪರಂಪರೆಗನುಗುಣವಾಗಿದ್ದವು
* ಅವರ ಸಾಮಾಜಿಕ ಸಂರಚನೆಯು ಜಾತಿ ಮತ್ತು ವರ್ಣ ಪದ್ಧತಿಗನುಗುಣವಾಗಿ ರೂಪಗೊಂಡಿದ್ದಿತು.
* ಇವರ ಕಾಲದಲ್ಲಿ ವೈದಿಕ ಮತ ಹಾಗು ಜೈನ ಧರ್ಮಗಳು ಜನಪ್ರಿಯವಾಗಿದ್ದು, ಬೌದ್ಧದರ್ಮ ಕ್ಷೀಣಸ್ಥಿತಿಯಲ್ಲಿದ್ದಿತೆಂಬ ವಿಷಯವನ್ನು ಗಮನಿಸುವಿರಿ.
* ಇವರ ಕಾಲದಲ್ಲಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ತಿಳಿಯುವಿರಿ.
* ವೇಸರ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಉದಯವನ್ನು ಇವರ ಕಾಲದಲ್ಲಿ ಕಾಣುವಿರಿ- ಬಾದಾಮಿ, ಐಹೊಳೆ, ಪಟ್ಟದಕಲ್ಲು ಮಹಾಕೂಟ, ಅಲಂಪುರ ಅವರ ಸುಪ್ರಸಿದ್ಧ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಕೇಂದ್ರಗಳಾಗಿದ್ದವು.

## 11.1 ಪೀಠಿಕೆ

ದಕ್ಷಿಣ ಭಾರತದ ಇತಿಹಾಸದಲ್ಲಿ ಬಾದಾಮಿ ಚಾಳುಕ್ಯರ ಸಾಂಸ್ಕೃತಿಕ ಕೊಡುಗೆಗಳು ಅದ್ವಿತೀಯವಾದವು. ಅವರ ಆಡಳಿತ ಸಂಸ್ಕೃತಿಯ ಆದರ್ಶಗಳು ವೈದಿಕ ಪರಂಪರಗನುಗುಣವಾಗಿ ಸಂಸ್ಕೃತಿಯನ್ನು ರೂಪಿಸುವಲ್ಲಿ ನೆರವಾಗಿದ್ದವು. ವೈದಿಕ ಸಂಸ್ಕೃತಿ ಮತ್ತು ಜೈನ ಸಂಸ್ಕೃತಿಗಳ ವಿಕಾಸಕ್ಕೆ ಉದಾರ ಪ್ರೋತ್ಸಾಹ ಮತ್ತು ಪೋಷಣೆಯನ್ನು ನೀಡಿದ್ದಾರೆ. ಇವರ ಕಾಲದಲ್ಲಿ ಭಾರತೀಯ ಸಂಸ್ಕೃತಿ ದೇಶವಿದೇಶಗಳವರೆಗೂ ವ್ಯಾಪಿಸಿದ್ದಿತು. ತಬರಿ, ಹುಯನ್‌ಸ್ತಾಂಗರ ಬರವಣಿಗೆಯು ಇದಕ್ಕೆ ಸಾಕ್ಷಿಯಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಸಾರ್ವಭೌಮತ್ವ ಸ್ಥಾಪಿಸಿದ ಹಾಗೆಯೇ ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ತಮ್ಮ ವೈಶಾಲತೆಯನ್ನು ಮೆರೆದಿದ್ದಾರೆ. ಇವರ ಉದಾರ ಪೋಷಣೆ, ಮತ್ತು ಆಳ್ವಿಕೆಯ ಫಲವಾಗಿ ಅನೇಕ ಕವಿಗಳು, ಶಾಸನಕಾರರು, ಧಾರ್ಮಿಕ ಪಂಡಿತರು ಆಶ್ರಯಪಡೆದು ಸಾಂಸ್ಕೃತಿಕ ಬೆಳವಣಿಗೆಗೆ ಕಾರಣರಾಗಿದ್ದಾರೆ. ವಿಶಿಷ್ಟವಾದ ಕಲಾಶೈಲಿ 'ವೇಸರ' ವು ಇವರ ಕಾಲದಲ್ಲಿ ಉದಯಗೊಂಡು ದಕ್ಷಿಣ ಉತ್ತರದ ಸಾಂಸ್ಕೃತಿಕ ಮಿಲನಕ್ಕೆ ನಾಂದಿ ಹಾಕಿದ್ದಾರೆ. ದಖಿನ್ ಪ್ರದೇಶದಲ್ಲಿ ಶಾತವಾಹನ ಕಾಲದಲ್ಲಿ ಆರಂಭಗೊಂಡ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಿ ಅದನ್ನು ಭವ್ಯಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈ ಘಟಕವು ಈ ವಿಷಯದ ಬಗ್ಗೆ ಸವಿಸ್ತಾರ ವಿವರಣೆಗಳನ್ನು ನೀಡುತ್ತದೆ.

## 11.2 ಆಡಳಿತ ಪದ್ಧತಿ

ದಕ್ಷಿಣ ಭಾರತದ ಇತಿಹಾಸದಲ್ಲಿ ರಾಜ್ಯಗಳ ಉದಯವನ್ನು ಮೊದಲು ದಖಿನ್ ಭೂಭಾಗದಲ್ಲೂ, ಅನಂತರ ಇತರ ಭೂ ಪ್ರದೇಶಗಳಲ್ಲಿ ಕ್ರಿ.ಶಕಾರಂಭದಿಂದ ಗುರುತಿಸಬಹುದಾಗಿದೆ. ಈ ರಾಜ್ಯಗಳು ಪುರಾತನ ಸ್ವಾಯತತ್ತೆ ಹೊಂದಿದ್ದ ಬುಡಕಟ್ಟು ರಾಜಕೀಯ ವ್ಯವಸ್ಥೆಯನ್ನು ಮೂಲೆ ಗುಂಪು ಮಾಡಿ, ರಾಜ ಪ್ರಭುತ್ವ ವ್ಯವಸ್ಥೆಯಲ್ಲಿ ರಾಜನೇ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದು, ಸರ್ವಶ್ರೇಷ್ಠ ದಂಡನಾಯಕ ಮತ್ತು ಸರ್ವೋಚ್ಛ ನ್ಯಾಯಾಧೀಶನಾಗಿದ್ದನು. ಆದರೆ ಅವನ ಸಹಾಯಕ್ಕೆ ಸಚಿವರು, ಸೈನಾಧಿಕಾರಿಗಳು, ನ್ಯಾಯಪಂಡಿತರುಗಳೂ ಇದ್ದರೆಂದು ತಿಳಿದು ಬರುತ್ತದೆ. ಚಾಳುಕ್ಯ

ಮನೆತನದ ರಾಜರು ಪರಮ ಭಾಗವತ, ಪರಮ ಮಹೇಶ್ವರ, ಪೃಥ್ವೀವಲ್ಲಭ, ಸತ್ಯಾಶ್ರಯ, ಮಹಾರಾಜಾಧಿರಾಜ, ಪರಮ ಭಟ್ಟಾರಕ ಮೊದಲಾದ ಬಿರುದುಗಳನ್ನು ಹೊಂದಿದ್ದರು. ರಾಜತ್ವವು ಅನುವಂಶೀಯವಾಗಿದ್ದು ಹಿರಿಯ ಮಗನು ಸಾಮಾನ್ಯವಾಗಿ ಉತ್ತರಾಧಿಕಾರಿಯಾಗುತ್ತಿದ್ದನು. ಹಿರಿಯ ಮಗನು ಪ್ರಾಪ್ತವಯಸ್ಕನಾಗಿಲ್ಲದಿದ್ದಾಗ ಗತಿಸಿದ ರಾಜನ ಸಹೋದರನು ಅಧಿಕಾರ ವಹಿಸಿಕೊಳ್ಳುವುದು ರೂಢಿಯಲ್ಲಿದ್ದಿತು. ಗಂಗರ ಆಡಳಿತ ವ್ಯವಸ್ಥೆಯಲ್ಲೂ ಇಂತಹ ಪದ್ಧತಿಯಿದ್ದುದು ತಿಳಿದು ಬರುತ್ತದೆ. ಇಂತಹ ಒಂದು ಸಂದರ್ಭದಲ್ಲಿ ಕೀರ್ತಿವರ್ಮನ ತರುವಾಯ ಅವನ ತಮ್ಮನಾದ ಮಂಗಳೇಶನು ಅಧಿಕಾರವನ್ನು ವಹಿಸಿಕೊಂಡುದು, ಅನಂತರ ಸಿಂಹಾಸನಕ್ಕಾಗಿ ಅಂತರಯುದ್ಧವು ನಡೆದು ಪುಲಿಕೇಶಿಯು ರಾಜನಾದುದು ಸರಿಯಷ್ಟೆ. ಪುಲಿಕೇಶಿಯ ಮರಣಾ ನಂತರ ಅವನ ಮಕ್ಕಳಲ್ಲೆಲ್ಲಾ ದಕ್ಷನಾದ ವಿಕ್ರಮಾದಿತ್ಯನು ಶತ್ರುಗಳನ್ನು ನಿಗ್ರಹಿಸಿ ಹಿರಿಯ ಮಗನಿಲ್ಲದಿದ್ದಾಗ್ಯೂ ಸಿಂಹಾಸನ ರೂಢನಾದನು. ಇಂತಹ ನಿದರ್ಶನಗಳನ್ನು ಮೌರ್ಯ, ಗುಪ್ತ ಮತ್ತು ರಾಷ್ಟ್ರಕೂಟ ಸಂತತಿಗಳಲ್ಲೂ ಕಾಣಬಹುದು. ಚಾಳುಕ್ಯ ಸಾಮ್ರಾಟರು ಯುದ್ಧಗಳಲ್ಲಿ ತಾವೇ ಸೈನ್ಯವನ್ನು ನಡೆಸುತ್ತಿದ್ದರು. ಅವರು ಶೂರರು, ಪರಾಕ್ರಮಿಗಳು ಆಗಿದ್ದು ಸೈನಿಕರಿಗೆ ಸ್ಫೂರ್ತಿ ನೀಡುತ್ತಿದ್ದರು. ಅವರು ವೈದಿಕ ಮತಾವಲಂಬಿಗಳಾಗಿದ್ದು ಅನೇಕ ಗುಡಿಗೋಪುರಗಳನ್ನು ಕಟ್ಟಿಸಿದರು. ಉದಾರ ಮತೀಯ ನೀತಿಯನ್ನವಲಂಬಿಸಿ ಜೈನದರ್ಮೀಯರಿಗೂ ಪ್ರೋತ್ಸಾಹ ನೀಡಿದರು. ಇವರ ವಿಶಾಲವಾದ ಸಾಮ್ರಾಜ್ಯವು ಅನೇಕ ಸಾಮಂತ ಮನೆತನಗಳನ್ನು ಹೊಂದಿದ್ದಿತು. ಸೇಂದ್ರಕರು, ಅಳುಪರು, ನಳರು, ಕಾಳಚೂರಿ, ಹೈಹಯರು, ರಟ್ಟ ಮೊದಲಾದ ಅನೇಕ ಸಾಮಂತ ಮನೆತನಗಳಿದ್ದವು. ಅವರು ಸಾರ್ವಭೌಮನಿಗೆ ವಿಧೇಯತೆಯಿಂದಯಿದ್ದು ವರ್ಷಪ್ರತಿ ನಿಗಧಿತ ಕಪ್ಪ ಕಾಣಿಕೆಯನ್ನು ಸಲ್ಲಿಸಬೇಕಾಗಿತ್ತು. ಹಲವು ಸಾಮಂತ ಕುಟುಂಬಗಳು ಸಾರ್ವಭೌಮ ಮನೆತನಗಳೊಡನೆ ವೈವಾಹಿಕ ಸಂಬಂಧವನ್ನು ಏರ್ಪಡಿಸಿಕೊಂಡಿದ್ದವು. ಸಾಮಂತರು ಯುದ್ಧಕಾಲದಲ್ಲಿ ಸಾಮ್ರಾಟನ ನೆರವಿಗೆ ಧಾವಿಸಬೇಕಾಗಿದ್ದಿತು.

ಚಾಳುಕ್ಯ ಸಾಮ್ರಾಜ್ಯವನ್ನು ಆಡಳಿತಕ್ಕನುಗುಣವಾಗಿ ಅನೇಕ 'ವಿಷಯ ' ಅಥವಾ ಮಂಡಲಗಳಾಗಿ ವಿಂಗಡಿಸಲಾಗಿತ್ತು. ಮಂಡಲ ಅಥವಾ 'ವಿಷಯ' ವ್ಯಾಪ್ತಿಯಲ್ಲಿ ಒಂದೇ ಸಮನಾಗಿರಲಿಲ್ಲ. ಬೇರೆ ಬೇರೆ ರಾಜಮನೆತನಗಳು ಆಳುತ್ತಿದ್ದ ಪ್ರದೇಶಗಳನ್ನೂ ಸಹ ಆ ಮನೆತನದ ಹೆಸರುಗಳಿಂದಲೇ ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಶಾಸನಗಳಲ್ಲಿ ಚೋಳಿಕ ವಿಷಯ, ಗಂಗವಾಡಿ ವಿಷಯ, ಸೇಂದ್ರಕ ವಿಷಯ ಮೊದಲಾದ ವರ್ಣನೆಗಳಿವೆ. ಹಲವು ಸಾರಿ ಹೀಗೆ ಆ ಪ್ರದೇಶಗಳಲ್ಲಾಳುತ್ತಿದ್ದ ರಾಜಮನೆತನಗಳು ಅಂತ್ಯಗೊಂಡು ಅವು ಸಾಮ್ರಾಜ್ಯದ ಭಾಗಗಳಾದ ಮೇಲೆಯೂ ಅದೇ ಹೆಸರುಗಳಿಂದ ಕರೆಯಲ್ಪಡುತ್ತಿದ್ದವು. ಸಾಮ್ರಾಜ್ಯದ ನೇರವಾದ ಆಡಳಿತಕ್ಕೊಳಪಟ್ಟ ಮಂಡಲಗಳ ಆಡಳಿತ ನಡೆಸಲು ಮಂಡಲಾಧಿಪತಿಗಳು ಅಥವಾ ಪ್ರಾಂತ್ಯಾಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಅವರನ್ನು ವಿಷಯಾಧಿಪತಿ ಹಾಗೂ ವಿಷಯಾಧಿಕರಣ ಎಂಬ ಹೆಸರಿನಿಂದಲೂ ಕರೆಯಲಾಗುತ್ತಿತ್ತು. ರಾಜನಿಗೆ ಆಡಳಿತದಲ್ಲಿ ಸಹಾಯಮಾಡಲು ಮಹಾಕ್ಷಪಟಲಾಧಿಕೃತ, ಸಂಧಿವಿಗ್ರಹಿ ಮೊದಲಾದ ಅಧಿಕಾರಿಗಳಿದ್ದರು.

ಗ್ರಾಮಗಳು ಆಡಳಿತದ ಚಿಕ್ಕ ಘಟಕವಾಗಿದ್ದವು. ಗ್ರಾಮದ ಮುಖಂಡನಿಗೆ ಗವುಂಡ ಎಂಬ ಹೆಸರಿದ್ದಿತು. ಅವನು ಗ್ರಾಮದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಗವುಂಡನಿಗೆ ಸಹಾಯ ಮಾಡಲು ಗ್ರಾಮಭೋಗಿಕ ಅಥವಾ ಕರಣ ಎಂಬ ಹೆಸರಿನ ಅಧಿಕಾರಿಯಿದ್ದನು. ಇವನು ಗ್ರಾಮಕ್ಕೆ ಸಂಬಂಧಿಸಿದ ಲೆಕ್ಕ ಪತ್ರಗಳ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದನು. ಗ್ರಾಮಸಭೆಗಳು ಅಸ್ತಿತ್ವದಲ್ಲಿದ್ದು ಈ ಸಭೆಗಳು ಸಾಮಾಜಿಕ ಜೀವನವು ವ್ಯವಸ್ಥಿತ ರೀತಿಯಲ್ಲಿ ನಡೆಯಲು ಅನುಸರಿಸಬೇಕಾದ ಕಟ್ಟುಪಾಡುಗಳನ್ನು ಮತ್ತು ಗ್ರಾಮಗಳ ಏಳಿಗೆಗೆ ಸಹಕಾರಿಯಾದ ಸಾರ್ವಜನಿಕ ಕಾರ್ಯಗಳನ್ನು ವ್ಯವಸ್ಥೆ ಮಾಡುತ್ತಿದ್ದವು.

## 11.3 ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ

ಚಾಳುಕ್ಯ ಸಾಮ್ರಾಜ್ಯ ಸ್ಥಾಪನೆಯ ವೇಳೆಗೆ ವೈದಿಕ ಮಾದರಿಯ ವರ್ಣಾಶ್ರಮ ಧರ್ಮವು ಸಮಾಜದಲ್ಲಿ ಬೇರೂರಿತು. ಬ್ರಾಹ್ಮಣರು ಸಮಾಜದಲ್ಲಿ ವಿಶೇಷ ಗೌರವಕ್ಕೆ ಪಾತ್ರರಾಗಿದ್ದರು. ಅವರು ಅಧ್ಯಯನ, ಧಾರ್ಮಿಕ ಪೂಜೆ ಪುರಸ್ಕಾರಗಳಲ್ಲಿ ನಿರತರಾಗಿದ್ದರು. ಚಾಳುಕ್ಯರ ಕಾಲದಲ್ಲಿ ಬ್ರಾಹ್ಮಣರ ಮೇಲ್ಮೆಗಾಗಿ ಅಗ್ರಹಾರಗಳು ಸ್ಥಾಪನೆಯಾದವು. ಇವರ ಕಾಲದ ಶಾಸನಗಳಲ್ಲಿ ನಾಗವರ್ಧನಾಚಾರ್ಯ, ಸುದರ್ಶನಾಚಾರ್ಯ ಮೊದಲಾದ ವಿದ್ವಾಂಸರ ಹೆಸರುಗಳು ಕಾಣಬರುತ್ತವೆ. ಮಿಗಿಲಾಗಿ ಚಾಳುಕ್ಯ ಪ್ರಭುಗಳು ಅನೇಕ ಯಜ್ಞಯಾಗಗಳನ್ನು ಮಾಡಿ ಬ್ರಾಹ್ಮಣರಿಗೆ ವಿಶೇಷ ದಾನದತ್ತಿಗಳನ್ನು ನೀಡಿದರು. ಕ್ಷತ್ರಿಯರು ಎಂದು ನಿರ್ದಿಷ್ಟವಾಗಿ ಹೇಳಲಾಗುವ ಒಂದು ಅನುವಂಶೀಯ ವರ್ಗವಿದ್ದಿತ್ತೆಂದು ಕಾಣಬರುವುದಿಲ್ಲ. ವೈದಿಕ ಪರಂಪರೆಯಲ್ಲಿ ಸಂಸ್ಕರಣ ಪಡೆದಿದ್ದ ರಾಜ ಮನೆತನಗಳು ಹಾಗೂ ಆಳುವ ವರ್ಗಕ್ಕೆ ಸೇರಿದ ಅನೇಕ ಪ್ರಬಲ ಕುಟುಂಬಗಳು ಕ್ಷತ್ರಿಯರದೆಂದು ಕರೆದುಕೊಳ್ಳುವುದು ಪರಿಪಾಠವಾಗಿತ್ತು. ಇದು ದಕ್ಷಿಣ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಒಂದು ಪ್ರಮುಖ ಲಕ್ಷಣ. ಜೈನಮತೀಯರು ಸುಶಿಕ್ಷಿತ ಪ್ರತಿಷ್ಠಿತ ವರ್ಗವಾಗಿದ್ದು ರಾಜಮನ್ನಣೆಗೆ ಪಾತ್ರವಾಗಿದ್ದಿತು. ಈ ವರ್ಗ ಆಡಳಿತ, ಧಾರ್ಮಿಕ, ಸಾಂಸ್ಕೃತಿಕ ವಿಷಯದಲ್ಲಿ ಸಕ್ರೀಯ ಪಾತ್ರ ನಿರ್ವಹಿಸಿರುವುದನ್ನು ಕಾಣಬಹುದು. ವ್ಯವಸಾಯ ಮತ್ತು ವ್ಯಾಪಾರವನ್ನು ಜನರು ಹೆಚ್ಚು ಸಂಖ್ಯೆಯಲ್ಲಿ ಅವಲಂಬಿಸಿದ್ದರು. ಮೇಲ್ವರ್ಗದ ಸೇವೆಯಲ್ಲಿ ತೊಡಗಿದ್ದ ಜನರನ್ನು ಕುರಿತಾದ ಮಾಹಿತಿಯು ದೊರಕುವುದಿಲ್ಲ. ಅನೇಕ ಸಣ್ಣಪುಟ್ಟ ಉಪಕಸುಬುಗಳನ್ನಾಧರಿಸಿ ಜಾತಿಪದ್ಧತಿ ಆಚರಣೆಯಲ್ಲಿದ್ದಿತು. ಅವಿಭಕ್ತ ಕುಟುಂಬ ವ್ಯವಸ್ಥೆಯು ರೂಢಿಯಲ್ಲಿದ್ದಿತು.

ಸ್ತ್ರೀಯರಿಗೆ ಸಂಬಂಧಿಸಿದ ಹೆಚ್ಚು ಮಾಹಿತಿಗಳು ದೊರೆಯುವುದಿಲ್ಲ. ಮೇಲ್ವರ್ಗದ ಸ್ತ್ರೀಯರಿಗೆ ಹಾಗೂ ದೇವದಾಸಿಯರಿಗೆ ಸಂಬಂಧಿಸಿದ ಸಂಗತಿಗಳು ದೊರೆಯುತ್ತವೆ. ಚಾಳುಕ್ಯ ಸಾಮ್ರಾಟರ ರಾಣಿಯರ ಹೆಸರುಗಳ ಉಪಲಬ್ದವಿದೆ. ಚಂದ್ರಾದಿತ್ಯನ ರಾಣಿ ವಿಜಯ ಭಟ್ಟಾರಿಕೆಯು ವಿದ್ಯಾ ಪಾರಂಗತೆಯಾಗಿದ್ದಳೆಂದು ತಿಳಿದು ಬರುತ್ತದೆ. ವಿನಯಾಧಿತ್ಯನ ರಾಣಿಯಾದ ವಿನಯವತಿಯು ಬ್ರಹ್ಮ, ವಿಷ್ಣು, ಮಹೇಶ್ವರ ಇವರ ಮೂರ್ತಿಗಳನ್ನು ಸ್ಥಾಪಿಸಿದ ಸಂಗತಿ ತಿಳಿದು ಬರುತ್ತದೆ. ವಿನಯಾದಿತ್ಯನ ಮಗಳಾದ ಕುಂಕುಮದೇವಿಯು ಜೈನ ಬಸದಿಗಳನ್ನು ಕಟ್ಟಿಸಿದ ಹಾಗೂ ಎರಡನೇ ವಿಕ್ರಮಾದಿತ್ಯನ ರಾಣಿಯಾದ ವಿಜಯ ಮಹಾದೇವಿ ಮತ್ತು ತ್ರೈಲೋಕ ಮಹಾದೇವಿ ಇವರು ಗುಡಿ ಗೋಪುರಗಳನ್ನು ನಿರ್ಮಿಸಿದ ಸಂಗತಿಗಳು ತಿಳಿದು ಬರುತ್ತದೆ. ವಿಜಯಾದಿತ್ಯನ ಪ್ರಾಣವಲ್ಲಭೆ ಹಾಗೂ ಇತರ ವಾರಂಗನೆಯರಾದ ವಿನಯ ಪೊಟ್ಟಿ, ಕೂಚಿಪೋಟಿ, ಬಾಲಬ್ಬೆ ಮೊದಲಾದವರ ಹೆಸರುಗಳು ಶಾಸನದಿಂದ ತಿಳಿದು ಬರುತ್ತವೆ. ಮೇಲ್ವರ್ಗದ ಸ್ತ್ರೀಯರ ಹೊರತಾಗಿ ಉಳಿದ ಸ್ತ್ರೀಯರ ಸ್ಥಿತಿಗತಿಗಳು ಉತ್ತಮವಾಗಿರಲಿಲ್ಲವೆಂದು ಹೇಳಬಹುದು. ಚಾಳುಕ್ಯ ಸಾಮ್ರಾಜ್ಯದಲ್ಲಿ ವೈದಿಕ ಮತವು ವಿಶೇಷವಾಗಿ ವ್ಯಾಪಿಸಿತು.

ವ್ಯವಸಾಯ ಜನರ ಮುಖ್ಯ ಕಸುಬಾಗಿತ್ತು. ವ್ಯಾಪಾರ ಮತ್ತು ಕುಶಲ ಕೈಗಾರಿಕೆಗಳೂ ಸಹ ಸಾಮ್ರಾಜ್ಯದಲ್ಲಿ ಪ್ರಗತಿಪರವಾಗಿದ್ದವು. ಭೂಮಿಯನ್ನು ಫಲವತ್ತಿಗನುಗುಣವಾಗಿ ತರಿ, ಭಾಗಾಯ್ತು, ಖುಷ್ಕಿ ಎಂಬುದಾಗಿ ವಿಂಗಡಿಸಿದ್ದ ಸಂಗತಿಯು ಸಮಕಾಲೀನ ಶಾಸನಗಳಿಂದ ತಿಳಿದು ಬರುತ್ತದೆ. ಬತ್ತ, ಕಬ್ಬು, ನವಣೆ ಮತ್ತು ದ್ವಿದಳ ಧಾನ್ಯಗಳನ್ನೂ, ಹತ್ತಿ ಮತ್ತು ಹಣ್ಣುಗಳನ್ನು ಬೆಳೆಯುತ್ತಿದ್ದರು. ವ್ಯವಸಾಯಕ್ಕಾಗಿ ಕೆರೆ ಕಟ್ಟೆಗಳನ್ನು ಕಟ್ಟಿಸುವ ಪದ್ಧತಿ ಆಚರಣೆಯಲ್ಲಿದ್ದಿತು. ಹತ್ತಿಯು ಉತ್ಕೃಷ್ಟವಾಗಿ ಬೆಳೆಯುತ್ತಿದ್ದು ಹತ್ತಿಯ ಬಟ್ಟೆಯ ಉತ್ಪನ್ನವು ಉನ್ನತ ಸ್ಥಿತಿಯಲ್ಲಿತ್ತೆಂದು ತೋರುತ್ತದೆ. ಭೂಮಿಯ ಹುಟ್ಟುವಳಿಯು ಪ್ರಮುಖ ಆದಾಯವಾಗಿದ್ದುದರಿಂದ ದೇವಾಲಯಗಳಿಗೂ ಬ್ರಾಹ್ಮಣರಿಗೂ ಭೂಮಿ ಕಾಣಿಕೆ ನೀಡುತ್ತಿದ್ದ ಪದ್ಧತಿಯು ಆಚರಣೆಯಲ್ಲಿತ್ತು.

ಜನರು ವ್ಯವಸಾಯದ ಜೊತೆಗೆ ನೂಲುವುದು, ನೇಯುವುದು, ಮಡಿಕೆ ತಯಾರಿಸುವುದು, ಲೋಹ ಕೆಲಸ, ಮರಗೆಲಸ, ಮನೆಕೆಲಸ ಮುಂತಾದ ಉಪಕಸುಬುಗಳನ್ನು ಕೈಗೊಂಡಿದ್ದರು. ಕಂಚುಗಾರರು, ತೇಲಿಗರು ಹಾಗೂ ಇತರ ಉಪಕಸುಬುಗಳಲ್ಲಿ ನಿರತರಾಗಿದ್ದ ಜನರು ತಮ್ಮದೇ ಆದ ವೃತ್ತಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದ ಸಂಗತಿಯು ಶಾಸನಗಳಿಂದ ತಿಳಿದು ಬರುತ್ತದೆ. ಆಂತರಿಕ ಮತ್ತು ವಿದೇಶೀಯ ವ್ಯಾಪಾರವು ಉನ್ನತ ಸ್ಥಿತಿಯಲ್ಲಿತ್ತು. ವರಾಹ, ಗದ್ಯಾಣ, ಪಣ ಮೊದಲಾದ ನಾಣ್ಯಗಳು ಚಲಾವಣೆಯಲ್ಲಿದ್ದವು. ಆಂತರಿಕ ವ್ಯಾಪಾರವೂ ಹೆಚ್ಚು ಮಟ್ಟಿಗೆ ವಸ್ತು ವಿನಿಮಯ ಪದ್ಧತಿಯನ್ನೇ ಅವಲಂಬಿಸಿತ್ತು. ದಖಿನ್ ಮತ್ತು ಪಾಶ್ಚಿಮಾತ್ಯ ದೇಶಗಳೊಡನೆ ಶಾತವಾಹನರ ಕಾಲದಿಂದಲೂ ಏರ್ಪಟ್ಟಿದ್ದ ವಿದೇಶಿಯ ವ್ಯಾಪಾರವು ಸಹ ಉನ್ನತ ರೀತಿಯಲ್ಲಿ ಮುಂದುವರಿದಿತ್ತು. ಪರ್ಷಿಯಾ ಮತ್ತು ಅರಬ್ಬೀ ದೇಶದ ವರ್ತಕರು ವ್ಯಾಪಾರಕ್ಕಾಗಿ ಬರುತ್ತಿದ್ದ ಸಂಗತಿಯು ಸ್ಪಷ್ಟವಾಗಿದೆ. ಮಿಗಿಲಾಗಿ ಚಾಳುಕ್ಯ ಸಾರ್ವಭೌಮರು ಪರ್ಷಿಯಾ ಮತ್ತು ಚೀಣಾದೇಶಗಳಿಗೆ ತಮ್ಮ ರಾಯಭಾರಿಗಳನ್ನು ಕಳುಹಿಸಿದುದನ್ನು ನಾವು ಅವಾಗಲೇ ಗಮನಿಸಿದ್ದೇವೆ. ಇಂತಹ ಸಂಬಂಧಗಳು ವಿದೇಶೀಯ ವಾಣಿಜ್ಯ ವ್ಯಾಪಾರಗಳ ವಹಿವಾಟಿಕೆ ಹೆಚ್ಚು ಸಹಕಾರಿಯಾಗಿದ್ದವು.

## 11.4 ಧರ್ಮ ಮತ್ತು ಸಾಹಿತ್ಯ

ಬಾದಾಮಿ ಚಾಳುಕ್ಯರು ವೈದಿಕ ಮತದ ಅನುಯಾಯಿಗಳು ಸಾಮ್ರಾಜ್ಯದಲ್ಲಿ ವೈದಿಕ ಧರ್ಮವೇ ಪ್ರಬಲವಾಗಿತ್ತು. ಅದಕ್ಕೂ ಹಿಂದೆ ಚಾಳುಕ್ಯ ಸಾಮ್ರಾಜ್ಯಕ್ಕೆ ಸೇರಿದ ಭಾಗಗಳಲ್ಲಿ ಬೌದ್ಧಮತವು ಜನಪ್ರಿಯವಾಗಿದ್ದು ಸರಿಯಷ್ಟೆ. ಆದರೆ ಚಾಳುಕ್ಯರ ಆಡಳಿತದ ವೇಳೆಗೆ ಅನೇಕ ಕಾರಣಗಳಿಂದ ಬೌದ್ಧಮತವು ಕ್ಷೀಣಿಸಿ ವೈದಿಕ ಧರ್ಮವು ಉಚ್ಛ್ರಾಯ ಸ್ಥಿತಿಗೆ ಬಂದಿತು. ಆದರೂ ಸಾಮ್ರಾಜ್ಯದಲ್ಲಿ ವೈದಿಕ ಧರ್ಮದ ಜೊತೆಗೆ ಜೈನ ಮತ್ತು ಬೌದ್ಧಧರ್ಮಗಳೂ ಪ್ರಚಾರದಲ್ಲಿದ್ದವು. ಚಾಳುಕ್ಯರು ಉದಾರ ಧಾರ್ಮಿಕ ನೀತಿಯನ್ನು ಅನುಸರಿಸುದುದರಿಂದ ಅವರ ಸಾಮ್ರಾಜ್ಯದಲ್ಲಿ ಚತುಸ್ಸಮಯ ಅಂದರೆ ವೈಷ್ಣವ, ಶೈವ, ಬೌದ್ಧ ಮತ್ತು ಜೈನ ಪಂಥಗಳು ನಿರ್ಬಾಧಿವಾಗಿ ಮುಂದುವರಿದುದವೆಂದು ಶಾಸನಗಳಿಂದ ವೇದ್ಯವಾಗುತ್ತದೆ. ಚಾಳುಕ್ಯ ಪ್ರಭುಗಳು ಬಾದಾಮಿ ಗುಡ್ಡದಲ್ಲಿ ಕೊರೆಸಿದ ಬೌದ್ಧ, ಜೈನ ಮತ್ತು ವೈದಿಕಾ ಗುಹಾಲಯಗಳು ಇದಕ್ಕೆ ಸಾಕ್ಷಿಯಾಗಿವೆ.

ಬಾದಾಮಿ ಚಾಳುಕ್ಯ ಅರಸರು ವೈಷ್ಣವ ಮತ್ತು ಶೈವರಾಧಕರಾಗಿದ್ದರು. ಈ ಸಂತತಿಯ ಸಾಮ್ರಾಟರು ಪರಮ ಭಾಗವತ ಮತ್ತು ಪರಮ ಮಹೇಶ್ವರ ಎಂಬ ಧರ್ಮ ಸಂಕೇತವಾದ ಬಿರುದುಗಳನ್ನು ಧರಿಸಿದ್ದರು. ಚಾಳುಕ್ಯರ ಶಾಸನಗಳು ವಿಷ್ಣುವಿನ ಅವತಾರಗಳಲೊಂದಾದ ವರಾಹ ಸ್ತುತಿಯಿಂದ ಪ್ರಾರಂಭವಾಗುತ್ತವೆ. ವರಾಹವು ಇವರ ರಾಜ ಚಿಹ್ನೆಯಾಗಿತ್ತು. ಅನೇಕ ಸಾರ್ವಭೌಮರು ವೈದಿಕ ಯಜ್ಞಯಾಗಗಳನ್ನು ಅನುಸರಿಸಿದರು. ಕರ್ನಾಟಕದಲ್ಲಿ ವೈದಿಕ ಯಜ್ಞಗಳನ್ನಾಚರಿಸಿದ ಪ್ರಾಚೀನ ಕಾಲದ ಚಕ್ರವರ್ತಿಗಳಲ್ಲಿ ಒಂದನೇ ವಿಕ್ರಮಾದಿತ್ಯನೇ ಕೊನೆಯವನೆಂದು ತಿಳಿದು ಬರುತ್ತದೆ. ಇವರ ಕಾಲದಲ್ಲಿ ವಿಗ್ರಹಾರಾಧನೆ ಮತ್ತು ಗುಡಿಗಳ ನಿರ್ಮಾಣಕ್ಕೆ ವಿಶೇಷ ಪ್ರೋತ್ಸಾಹ ದೊರೆಯಿತು. ಬ್ರಹ್ಮ, ವಿಷ್ಣು, ವರಾಹ, ಮಹೇಶ್ವರ, ಕಾರ್ತಿಕೇಯ ಸಪ್ತಮಾತೃಕಾ ಮೊದಲಾದ ದೇವತೆಗಳನ್ನು ಆರಾಧಿಸಲಾಗುತ್ತಿತ್ತು. ಬಾದಾಮಿ ಚಾಳುಕ್ಯರು ವೈಷ್ಣವ ಮತ್ತು ಶೈವ ಸಂಪ್ರದಾಯಗಳೆರಡನ್ನೂ ಅನುಸರಿಸಿದರು. ಒಂದನೇ ವಿಕ್ರಮಾದಿತ್ಯನನ್ನು ನವಸಾರಿ ಶಾಸನದಲ್ಲಿ ಮಹೇಶ್ವರ ಎಂದು ಕರೆಯಲಾಗಿದೆ. ವಿಜಯಾದಿತ್ಯ ಮತ್ತು ಇವನ ರಾಣಿಯರು ಪಟ್ಟದ ಕಲ್ಲಿನಲ್ಲಿ ಶಿವಾಲಯಗಳನ್ನು ಕಟ್ಟಿಸಿದರು. ಆ ಕಾಲದ ಪಟ್ಟದ ಕಲ್ಲು, ಐಹೊಳೆ ಮತ್ತು ಮಹಾಕೂಟ ಇವುಗಳು ಶೈವ ಪಂಥದ ಪ್ರಸಿದ್ಧ ಕೇಂದ್ರಗಳಾಗಿದ್ದವು.

ಚಾಳುಕ್ಯರು ಜೈನ ಮತಕ್ಕೂ ಪ್ರೋತ್ಸಾಹ ನೀಡಿದರು. ಬಾದಾಮಿ, ಐಹೊಳೆ, ಲಕ್ಷ್ಮೇಶ್ವರ ಮೊದಲಾದವು ಜೈನ ಧರ್ಮದ ಕೇಂದ್ರಗಳಾಗಿದ್ದವು. ಮೇಲ್ಕಂಡ ಸ್ಥಳಗಳಲ್ಲಿ ಆ ಕಾಲದಲ್ಲಿ ಜೈನ ಬಸದಿಗಳು ನಿರ್ಮಾಣವಾದವು. ಇಮ್ಮಡಿ ಪುಲಿಕೇಶಿಯ ದಂಡನಾಯಕಲ್ಲೊಬ್ಬನಾದ ರವಿಕೀರ್ತಿಯು ಜೈನಧರ್ಮವಲಂಬಿಯಾಗಿದ್ದು ಐಹೊಳೆ ಮೊಗತಿ ಜಿನ್ನಾಲಯವನ್ನು ಕಟ್ಟಿಸಿದನು. ವಿನಯಾದಿತ್ಯ

ಮತ್ತು ಇಮ್ಮಡಿ ವಿಕ್ರಾಮಾದಿತ್ಯ ಇವರು ಲಕ್ಷ್ಮೇಶ್ವರದ (ಇಂದಿನ ಪುಲಿಗೆರೆ) ಜೈನ ವಿದ್ವಾಂಸರಿಗೆ ಧಾನಧರ್ಮಗಳನ್ನು ನೀಡಿದರು. ಮಿಗಿಲಾಗಿ ಬಸದಿಗಳ ಪುರೋಭಿವೃದ್ಧಿಗಾಗಿ ಗ್ರಾಮಗಳನ್ನು ನೀಡಿದರು.

ಬಾದಾಮಿ ಚಾಳುಕ್ಯರ ಕಾಲದಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಹೆಚ್ಚು ಮಾಹಿತಿಯು ದೊರೆಯುವುದಿಲ್ಲ. ಹೂಯನ್‌ತ್ಸಾಂಗನು ಆ ಕಾಲದಲ್ಲಿ ಸಾಮ್ರಾಜ್ಯದಲ್ಲಿದ್ದ ಬೌದ್ಧ ಕೇಂದ್ರಗಳನ್ನು ಸಂದರ್ಶಿಸಿದನು. ಅವನು ಅಜಂತಾದ ಸುಂದರವಾದ ಗುಹಾಂತರ ದೇವಾಲಯಗಳನ್ನೂ, ಬನವಾಸಿ ಮತ್ತು ಇತರೆಡೆಗಳಲ್ಲಿದ್ದ ಬೌದ್ಧ ವಿಹಾರಗಳನ್ನು ನೋಡಿದನು. ಹೂಯನ್ ತ್ಸಾಂಗನ ಬರವಣಿಗೆಯಿಂದ ರಾಜ್ಯದಲ್ಲಿ ಸುಮಾರು ಒಂದುನೂರು ಬೌದ್ಧ ವಿಹಾರಗಳೂ ಮತ್ತು 10 ಸಾವಿರ ಮಂದಿ ಬೌದ್ಧ ಭಿಕ್ಷುಗಳೂ ಇದ್ದರೆಂದು ತಿಳಿದು ಬರುತ್ತದೆ. ಬೌದ್ಧ ವಿಹಾರಗಳು ದುಃಸ್ಥಿತಿಯಲ್ಲಿದ್ದು ಕ್ಷೀಣಗತಿಯಲ್ಲಿದ್ದುದನ್ನು ಚೀಣಾ ದೇಶದ ಪ್ರವಾಸಿಗ ಮನಗಂಡಿದ್ದಾನೆ.

ಬಾದಾಮಿ ಚಾಳುಕ್ಯರ ಆಶ್ರಯದಲ್ಲಿ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಗ್ರಂಥಗಳು ರಚಿತವಾಗಿರುವ ಸಾಧ್ಯತೆಗಳಿವೆ. ಆದರೆ ಈವರೆಗೂ ಅಂತಹ ಗ್ರಂಥಗಳು ಲಭ್ಯವಾಗಿಲ್ಲ. ಚಾಳುಕ್ಯರ ಪ್ರಮುಖ ಶಾಸನಗಳು ಸಂಸ್ಕೃತ ಭಾಷೆಯಲ್ಲಿವೆ. ಒಂದನೇ ಕೀರ್ತಿವರ್ಮನ ವಿಜಯಗಳನ್ನು ವಿವರಿಸುವ ಕ್ರಿ.ಶ. 600 ರ ಮಹಾಕೂಟ ಸ್ಥಂಭಶಾಸನವು ಸಂಸ್ಕೃತದ ಮಹಾಕವಿ ಕಾಳಿದಾಸನ ರಘುವಂಶದ ರಘುವಿನ ದಿಗ್ವಿಜಯದ ಹೋಲಿಕೆಯ ಆಧಾರದ ಮೇಲೆ ರಚಿತವಾಗಿದೆಯೆಂದು ಭಾವಿಸಲಾಗಿದೆ. ಜೈನ ಕವಿ ರವಿಕೀರ್ತಿಯಿಂದ ರಚಿತವಾದ ಎರಡನೇ ಪುಲಿಕೇಶಿಯ ಐಹೊಳೆ ಶಾಸನವು ಕಾವ್ಯ ಮಯವಾಗಿದೆ. ಉತ್ತಮ ಕಾವ್ಯ ಶೈಲಿಯನ್ನು ಹೊಂದಿದ್ದ ರವಿಕೀರ್ತಿಯನ್ನು ಕಾಳಿದಾಸ ಮತ್ತು ಭಾರವಿಗೆ ಹೋಲಿಸಿರುವುದರಲ್ಲಿ ಬಹುಮಟ್ಟಿನ ಉತ್ಪ್ರೇಕ್ಷೆ ಕಾಣಬರುವುದಿಲ್ಲ. ಅವನಿಜನಾಶ್ರಯ ಪುಲಿಕೇಶಿಯ ನವಸಾರಿ ಶಾಸನವು ಕೂಡ ಕಾವ್ಯ ಶೈಲಿಯಿಂದ ಕೂಡಿದೆ. ಇಮ್ಮಡಿ ಪುಲಿಕೇಶಿಯ ಮಗ ಚಂದ್ರಾದಿತ್ಯನ ರಾಣಿಯಾದ ವಿಜಯ ಭಟ್ಟಾರಿಕೆಯು ಒಬ್ಬ ಶ್ರೇಷ್ಠ ಕವಿಯತ್ರಿಯಾಗಿದ್ದಳು. ಜಲ್ಲಣನು ತನ್ನ ***ಸೂಕ್ತಿ ಮುಕ್ತಾವಳಿಯ***ಲ್ಲಿ ಆಕೆಯ ವಾಕ್ಯಗಳನ್ನು ಉದಾಹರಿಸಿದ್ದಾನೆ. ತನ್ನನ್ನು ವಿದ್ಯಾ ದೇವತೆ ಸರಸ್ವತಿಯೊಡನೆ ಹೋಲಿಸಿಕೊಂಡ ವಿಜಯ ಭಟ್ಟಾರಿಕೆಯ ***ಕೌಮುದೀಮಹೋತ್ಸವ*** ಎಂಬ ನಾಟಕದಲ್ಲಿ ಪಾಟಲೀಪುತ್ರದ ರಾಜಕುಮಾರ ಕಲ್ಯಾಣವರ್ಮ ಮತ್ತು ಮಧುರದ ರಾಜಕುಮಾರಿ ಕೀರ್ತಿಮತಿ ಇವರ ವಿವಾಹವನ್ನು ವರ್ಣಿಸಿದ್ದಾಳೆ. ಪುಜ್ಯಪಾದನ ಶಬ್ದಾವತಾರ ಅಥವಾ ಜಿನೇಂದ್ರ ವ್ಯಾಕರಣವನ್ನು ಭೋದಿಸುತ್ತಿದ್ದ ಪಂಡಿತನೋರ್ವನಿಗೆ ವಿಜಯಾದಿತ್ಯನು ದತ್ತಿ ನೀಡಿದನು.

ಬಾದಾಮಿ ಚಾಳುಕ್ಯರ ಕಾಲದಲ್ಲಿ ಕನ್ನಡ ಗ್ರಂಥಗಳಾವುವು ಇದುವರೆಗೂ ದೊರೆತಿಲ್ಲ. ಆ ಕಾಲದಲ್ಲಿ ಗದ್ಯಪದ್ಯಗಳನ್ನು ರಚಿಸಿದ ಕವಿಗಳು ಇದ್ದುದಾಗಿ ಕವಿರಾಜಮಾರ್ಗದಿಂದ ತಿಳಿದು ಬರುತ್ತದೆ. ಬಾದಾಮಿ, ಐಹೊಳೆ ಮೊದಲಾದ ಕಡೆಗಳಲ್ಲಿ ಕನ್ನಡದಲ್ಲಿ ರಚಿಸಲಾಗಿರುವ ಅನೇಕ ಶಾಸನಗಳು ದೊರೆತಿವೆ. ಕಪ್ಪೆ ಆರಭಟ್ಟನ ಶಾಸನದಲ್ಲಿ ಕನ್ನಡ ಛಂದಸ್ಸಿನಲ್ಲಿ ರಚಿಸಲಾಗಿರುವ ಪ್ರಾಚೀನ ತ್ರಿಪದಿಯನ್ನು ಕಾಣಬಹುದು.

## 11.5 ಕಲೆ ಮತ್ತು ವಾಸ್ತು ಶಿಲ್ಪ

ಭಾರತೀಯ ಕಲೆಗೆ ಬಾದಾಮಿ ಚಾಳುಕ್ಯರ ಕೊಡುಗೆ ಅಪಾರವಾದುದು. ಇವರ ಕಾಲದ ವಾಸ್ತುಶಿಲ್ಪವು ಹೆಚ್ಚು ಮಟ್ಟಿಗೆ ಇವರ ರಾಜಧಾನಿಯಾಗಿದ್ದ ಬಾದಾಮಿ, ಅದರ ಬಳಿಯಲ್ಲೇ ಇರುವ ಮಹಾಕೂಟ, ರಾಜಧಾನಿಯಿಂದ 24 ಕಿ.ಮೀ ದೂರದಲ್ಲಿ ಮಲಪ್ರಭ ನದಿಯ ಎಡದಂಡೆಯಲ್ಲಿರುವ ಪಟ್ಟದಕಲ್ಲು ಮತ್ತು ಅದೇ ನದಿಯ ಬಲದಂಡೆಯಲ್ಲಿರುವ ಐಹೊಳೆ ಸ್ಥಳಗಳಿಗೆ ಸೀಮಿತವಾಗಿದೆ. ಇವರು ಕಟ್ಟಿಸಿದ ಅರಮನೆಯ ಅವಶೇಷಗಳಾಗಲೀ ಅಥವಾ ಇತರ ಸಾರ್ವಜನಿಕ ಕಟ್ಟಡಗಳ ಭಗ್ನಾವಶೇಷಗಳಾಗಲೀ ಉಳಿದು ಬಂದಿಲ್ಲ. ಐಹೊಳೆಯಲ್ಲಿ ಮಾತ್ರ ಕ್ರಿ.ಶ. 8ನೇ ಶತಮಾನಕ್ಕೆ

ಸೇರಿದುದೆಂದು ತಿಳಿದು ಬಂದಿರುವ ಒಂದು ಕೋಟೆಯ ಅವಶೇಷಗಳು ಮಾತ್ರ ಕಾಣಬರುತ್ತವೆ. ಉಳಿದು ಬಂದಿರುವ ವಾಸ್ತುಶಿಲ್ಪಗಳೆಂದರೆ ಗುಡಿಗೋಪುರಗಳು, ದೊರೆತಿರುವ ದೇವಾಲಯಗಳು ಮತ್ತು ಅವುಗಳ ಅವಶೇಷಗಳಲ್ಲಿ ವೈದಿಕ, ಜೈನ ಮತ್ತು ಬೌದ್ಧದರ್ಮಕ್ಕೆ ಸೇರಿದವು ಇವೆ. ಅದರಲ್ಲೂ ಅವುಗಳಲ್ಲಿ ಸಿಂಹಪಾಲು ವೈದಿಕ ಧರ್ಮಕ್ಕೆ ಸೇರಿದವು. ಐದಾರು ಜೈನ ಬಸದಿಗಳನ್ನು ಕಾಣಬಹುದು. ಕೇವಲ ಒಂದೆರಡು ಸ್ಮಾರಕಗಳು ಮಾತ್ರ ಬೌದ್ಧಧರ್ಮಕ್ಕೆ ಸೇರಿದವೆಂದು ತಿಳಿದು ಬರುತ್ತದೆ. ಬಾದಾಮಿ ಚಾಳುಕ್ಯರ ದೇವಾಲಯಗಳು ದಕ್ಷಿಣದ ದ್ರಾವಿಡ ಶೈಲಿ ಮತ್ತು ಉತ್ತರದ ನಾಗರ ಶೈಲಿಯ ಸುಮಧುರ ಸಮ್ಮಿಲನದಿಂದ ಕೂಡಿದೆ. ಇದರ ವಾಸ್ತು ಶೈಲಿಗೆ *ವೇಸರ* ಶೈಲಿಯೆಂದು ಹೆಸರಾಗಿದೆ.

ಬಾದಾಮಿ ಚಾಳುಕ್ಯರ ಕಾಲದಲ್ಲಿ ನಿರ್ಮಿತವಾದ ಧಾರ್ಮಿಕ ವಾಸ್ತು ಕೃತಿಗಳನ್ನು ಗುಹಾಲಯಗಳು ಮತ್ತು ದೇವಾಲಯಗಳು ಎಂದು ವಿಂಗಡಿಸಲಾಗಿದೆ. ಪ್ರಾರಂಭದ ಅರಸರು ಗುಹಾಲಯಗಳನ್ನು ಕೊರೆಸಿದರು. ಬಾದಾಮಿಯಲ್ಲಿ ನಾಲ್ಕು ಗುಹಾಲಯಗಳಿವೆ. ಇವುಗಳಲ್ಲಿ ಮೂರು ವೈದಿಕ ಧರ್ಮಕ್ಕೂ ಸೇರಿದವು. ಐಹೊಳೆಯಲ್ಲಿ ಎರಡು ವೈದಿಕ ಧರ್ಮಕ್ಕೂ ಮತ್ತೊಂದು ಜೈನ ಧರ್ಮಕ್ಕೂ ಸೇರಿದ ಗುಹಾಲಯಗಳಿವೆ. ಈ ವಿಧವಾದ ಗುಹಾಲಯಗಳನ್ನು ಭಾರತದಲ್ಲಿ ಇತರ ಕೆಲವೇ ಕಡೆಗಳಲ್ಲಿ ಮಾತ್ರ ಕಾಣಬಹುದಾಗಿದೆ. ಗುಪ್ತರ ಕಾಲದಲ್ಲಿ ಉದಯಗಿರಿಯಲ್ಲಿ ಕೊರೆಯಲಾದ ಗುಹಾಲಯಗಳು ಮತ್ತು ಬಾದಾಮಿಯ ಗುಹಾಲಯಗಳು ಸಾಮಾನ್ಯವಾಗಿ ರಚನೆಯಲ್ಲಿ ಒಂದೇ ವಿಧವಾಗಿವೆ. ಗುಡ್ಡಗಳ ಕಡಿದಾದ ಜಾಗಗಳಲ್ಲಿ ಕೊರೆದಿರುವ ಈ ಗುಹೆಗಳು ಸಾಮಾನ್ಯವಾಗಿ ಮುಂಭಾಗದಲ್ಲಿ ಒಂದು ಅಥವಾ ಹೆಚ್ಚಿನ ಕಂಭ ಸಾಲುಗಳನ್ನು ಹೊಂದಿವೆ. ಅನಂತರ ಆಯಾಕಾರವಾದ ದೊಡ್ಡ ಹಜಾರವಿರುತ್ತದೆ. ಅದರ ಹಿಂದೆ ಒಂದು ಸಣ್ಣ ಗರ್ಭ ಗೃಹವಿರುತ್ತದೆ. ಕಂಬದ ಹೊರಮೈಯನ್ನು ನಯವಾಗಿ ಕೊರೆಯಲಾಗಿದೆ. ಅಲ್ಲದೆ ಗುಹಾಲಯಗಳು ಅವುಗಳ ವಾಸ್ತು ವಿನ್ಯಾಸಕ್ಕಿಂತಲೂ ಮಿಗಿಲಾಗಿ ಅಲ್ಲಿ ಕೊರೆದಿರುವ ದೇವತೆಗಳ ಬೃಹತ್ತರವಾದ ಉಬ್ಬುಗಳಿಗೆ ಪ್ರಖ್ಯಾತವಾಗಿವೆ. ಈ ಗುಹಾಲಯಗಳಲ್ಲಿ ಹರಿಹರ, ಮಹಿಷಾಸುರಮರ್ದಿನು, ಅರ್ಧನಾರೀಶ್ವರ, ನಟರಾಜ, ಗರುಡಾರೂಢವಿಷ್ಣು, ನರಸಿಂಹ, ವರಾಹ, ತ್ರಿವಿಕ್ರಮ ಇತ್ಯಾದಿ ಮೂರ್ತಿಗಳಿವೆ. ದಕ್ಷಿಣ ಭಾರತದ ವೈದಿಕ ಮತ್ತು ಜೈನ ಗುಹ ವಾಸ್ತು ಶಿಲ್ಪಕ್ಕೆ ಸಂಬಂಧಿಸಿದಂತೆ ಬಾದಾಮಿ ಚಾಳುಕ್ಯರ ಕಾಲದ ಗುಹೆಗಳೇ ಅತ್ಯಂತ ಪ್ರಾಚೀನವಾದುದೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಬಾದಾಮಿ ಚಾಳುಕ್ಯರ ಆಳ್ವಿಕೆಗೆ ಮುನ್ನ ಸಾಮಾನ್ಯವಾಗಿ ಕಲ್ಲಿನಿಂದ ದೇವಾಲಯಗಳನ್ನು ಕಟ್ಟುವ ಪದ್ಧತಿಯಿರಲಿಲ್ಲ. ಕೇವಲ ಗುಹಾಂತರ ದೇವಾಲಯಗಳನ್ನು ಮಾತ್ರ ಬೆಟ್ಟಗುಡ್ಡಗಳಲ್ಲಿ ಕೊರೆದಿದ್ದರು. ಗುಡಿಗಳನ್ನು ಮರ ಮತ್ತು ಇಟ್ಟಿಗೆಗಳಿಂದ ಕಟ್ಟುತ್ತಿದ್ದರು. ಕಲ್ಲಿನಿಂದ ನಿರ್ಮಿಸಲಾದ ದೇವಾಲಯಗಳಲ್ಲಿ ಬಾದಾಮಿ ಚಾಳುಕ್ಯರ ಕಾಲದಲ್ಲಿ ನಿರ್ಮಿತವಾದವೇ ಅತ್ಯಂತ ಪ್ರಾಚೀನವಾದವೆಂದು ತಿಳಿದು ಬಂದಿದೆ. ಆದುದರಿಂದ ಬಾದಾಮಿ ಚಾಳುಕ್ಯರ ಕಾಲದಲ್ಲಿ ಆಚರಣೆಗೆ ಬಂದ ಸಂಪ್ರದಾಯವನ್ನು ಸ್ಥಾಪಿಸಿದ ಶಿಲಾದೇವಾಲಯಗಳು ಅತಿ ಪ್ರಾಚೀನವೆಂದೂ ಅದರಲ್ಲೂ ಶಿಲೆಯಿಂದ ಕಟ್ಟಿದ ದೇವಾಲಯಗಳಲ್ಲಿ ಐಹೊಳೆಯ ದೇವಾಲಯಗಳೇ ಪ್ರಾರಂಭದಲ್ಲಿ ಕಟ್ಟಲಾದವೆಂದೂ ಈ ಕಾರಣದಿಂದ ಐಹೊಳೆಯು ಶಿಲಾದೇವಾಲಯ ನಿರ್ಮಾಣದ ತೊಟ್ಟಿಲು ಎಂದು ಪರಿಗಣಿಸಲ್ಪಟ್ಟಿದೆ. ಬಾದಾಮಿ ಚಾಳುಕ್ಯರ ದೇವಾಲಯಗಳೆಲ್ಲವೂ ಬಿಜಾಪುರ ಜಿಲ್ಲೆಯಲ್ಲಿ ದೊರೆಯುವ ನಸುಗೆಂಪು ಅಥವಾ ತಿಳಿಹಳದಿ ಬಣ್ಣದ ಕಲ್ಲಿನಿಂದ ನಿರ್ಮಾಣವಾಗಿವೆ.

ಬಾದಾಮಿ ಚಾಳುಕ್ಯರ ಕಾಲದ ಪ್ರಾರಂಭದ ದೇವಾಲಯಗಳಲ್ಲಿ ವಿಶಿಷ್ಟವಾದ ವಾಸ್ತು ವಿನ್ಯಾಸ ಕಂಡು ಬರುವುದಿಲ್ಲ. ತಳವಿನ್ಯಾಸದಲ್ಲಿ ಇವೆಲ್ಲಾ ಒಂದು ದೊಡ್ಡ ಹಜಾರದಿಂದ ಕೂಡಿವೆ. ಹಿಂಭಾಗದಲ್ಲಿ ಒಂದು ಗರ್ಭಗುಡಿಯನ್ನು ಅಳವಡಿಸಲಾಗಿದೆ. ಐಹೊಳೆಯಲ್ಲಿರುವ ಕೊಂತಿ ಗುಡಿ, ಲಾಡಖಾನ್ ಮೊದಲಾದವು ಪ್ರಾರಂಭದಲ್ಲಿ ಕಟ್ಟಿದ ಗುಡಿಗಳಾಗಿವೆ. ಲಾಡಖಾನ್ ಮೊದಲಾದವು ಪ್ರಾರಂಭದಲ್ಲಿ ಕಟ್ಟಿದ ಗುಡಿಗಳಾಗಿವೆ. ಲಾಡಖಾನ್ ದೇವಾಲಯವು ಮೂರು ಕಡೆ ಗೋಡೆಗಳಿಂದ ಕೂಡಿದ್ದು ಸಾಮಾನ್ಯವಾದ ಹಜಾರವನ್ನು ಹೊಂದಿದೆ. ದೊಡ್ಡ ಚಪ್ಪಡಿಗಳನ್ನು ಸ್ವಲ್ಪ ಇಳಿಜಾರಾಗಿ

ಒಂದರ ಪಕ್ಕದಲ್ಲೊಂದರಂತೆ ಜೋಡಿಸಿ ಚಾವಣಿಯನ್ನು ನಿರ್ಮಿಸಲಾಗಿದೆ. ನಂತರ ಕಟ್ಟಲಾದ ಗುಡಿಗಳು ಮುಖಮಂಟಪ, ಸಭಾಮಂಟಪ, ಪ್ರದಕ್ಷಿಣಪಥ, ಶುಕನಾಸಿ, ಗರ್ಭಗೃಹ ಮುಂತಾದವುಗಳಿಂದ ಕೂಡಿವೆ.

ಕಲ್ಲಿನಿಂದ ನಿರ್ಮಿತವಾದ ದೇವಾಲಯಗಳಲ್ಲಿ ಐಹೊಳೆಯೇ ಅತಿ ಪ್ರಾಚೀನವೆಂದು ಹೇಳಲಾಗಿದೆ. ಇಲ್ಲಿ ಸುಮಾರು 70 ಕ್ಕೂ ಮಿಗಿಲಾದ ದೇವಾಲಯಗಳು ಹಾಗೂ ಅವುಗಳ ಭಗ್ನಾವಶೇಷಗಳನ್ನು ಗುರುತಿಸಬಹುದಾಗಿದೆ. ಐಹೊಳೆಯ ದುರ್ಗಗುಡಿಯನ್ನು ಚಾಳುಕ್ಯರ ಮುಂದುವರಿದ ಕಲಾಶೈಲಿಯಲ್ಲಿ ಕಟ್ಟಲಾಗಿದೆ. ದೇವಾಲಯದ ತಳ ವಿನ್ಯಾಸ ಕುದುರೆ ಲಾಳಕಾರದಲ್ಲಿದೆ. ಬಹುಶಃ ಇದನ್ನು ಬೌದ್ಧಗುಹಾಲಯವನ್ನನುಕರಿಸಿ ಕಟ್ಟಲಾದುದೆಂದು ಪರ್ಸಿ ಬ್ರೌನ್ ಮೊದಲಾದ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದರ ತಳವಿನ್ಯಾಸವನ್ನು ಗಜ ಪೃಷ್ಠಾಕೃತಿಯದೆಂದೂ ಕರೆಯಲಾಗಿದೆ. ಮುಂಭಾಗ ಆಯಾಕಾರವಾಗಿದೆ. ಇದು ಮುಖಮಂಟಪ ಮತ್ತು ಗರ್ಭಗೃಹಗಳಿಂದ ಕೂಡಿದೆ. ಗರ್ಭಗೃಹದ ನೇರದಲ್ಲಿ ಚಾವಣಿಯ ಮೇಲ್ಗಡೆ ಒಂದು ಶಿಖರವಿದೆ. ಈ ಶಿಖರವು ಹೆಚ್ಚು ಮಟ್ಟಿಗೆ ನಾಗರ ಅಥವಾ ಉತ್ತರ ಭಾರತದ ಶೈಲಿಯಲ್ಲಿ ನಿರ್ಮಾಣವಾಗಿದೆ. ಐಹೊಳೆಯ ಹುಚ್ಚಮಲ್ಲಿ ಗುಡಿಯು ಮತ್ತೊಂದು ಪ್ರಸಿದ್ಧ ದೇವಾಲಯ. ಹುಚ್ಚಮಲ್ಲಿ ಶಿವಾಲಯವು ಗರ್ಭಗೃಹ, ಶುಕನಾಸಿ, ಮುಖಮಂಟಪ ಮತ್ತು ನಾಗರ ಶೈಲಿಯ ಶಿಖರವನ್ನು ಹೊಂದಿದೆ. ಐಹೊಳೆಯ ಮೇಲ್ಕಂಡ ದೇವಾಲಯಗಳು ಹೆಚ್ಚು ಮಟ್ಟಿಗೆ ನಾಗರ ಶೈಲಿಯನ್ನು ಮೈಗೂಡಿಸಿಕೊಂಡಿವೆ. ಇಲ್ಲಿನ ಕೆಲವೇ ಗುಡಿಗಳು ಮಹಾಕೂಟದ ಮಹಾ ಕೂಟೇಶ್ವರ ಮತ್ತು ಬಾದಾಮಿ ಗುಡ್ಡದಲ್ಲಿರುವ ಮಾಲಗಿತ್ತಿ ಶಿವಾಲಯ ಮೊದಲಾದ ದೇವಾಲಯಗಳು ದ್ರಾವಿಡ ಸಂಪ್ರದಾಯದ ವಿಶಿಷ್ಟಾಂಶಗಳನ್ನೊಳಗೊಂಡಿವೆ. ಇವುಗಳಲ್ಲಿ ಚೌಕಾಕಾರದ ಗರ್ಭಗೃಹ, ಮಧ್ಯಮಂಟಪ, ಮುಖಮಂಟಪ, ದಪ್ಪ ಕಂಬಗಳು, ಮೆಟ್ಟಲು ಮೆಟ್ಟಲಾಗಿ ಮೇಲೆದ್ದಿರುವ ಶಿಖರ, ಇವುಗಳು ಈ ದೇವಾಲಯಗಳಲ್ಲಿ ಕಾಣಬರುವ ವಿಶಿಷ್ಟಾಂಶಗಳು.

ಪಟ್ಟದಕಲ್ ಬಾದಾಮಿಯ ಚಾಳುಕ್ಯರ ಶಿಲ್ಪಕಲೆಯ ಮತ್ತೊಂದು ಮುಖ್ಯ ಕೇಂದ್ರ. ಇಲ್ಲಿ ಸುಮಾರು ಹತ್ತು ಮುಖ್ಯ ದೇವಾಲಯಗಳಿವೆ. ಈ ದೇವಾಲಯಗಳು ಬಾದಾಮಿ ಚಾಳುಕ್ಯರ ಆಳ್ವಿಕೆಯ ಉತ್ತರಾರ್ಧ ಅಥವಾ ಕೊನೆಗಾಲದಲ್ಲಿ ಕಟ್ಟಲಾದವು. ಇಲ್ಲಿರುವ ದೇವಾಲಯಗಳಲ್ಲಿ ಸಂಗಮೇಶ್ವರ ಅಥವಾ ವಿಜಯೇಶ್ವರ, ವಿರೂಪಾಕ್ಷ ಅಥವಾ ಲೋಕೇಶ್ವರ, ಮಲ್ಲಿಕಾರ್ಜುನ (ತ್ರೈಲೋಕೇಶ್ವರ) ಮತ್ತು ಗಳಗನಾಥ ಮೊದಲಾದವು ಮುಖ್ಯವಾಗಿವೆ. ಇಲ್ಲಿನ ವಿರೂಪಾಕ್ಷ ದೇವಾಲಯವು ಅತಿದೊಡ್ಡದು. ಇದನ್ನು ಇಮ್ಮಡಿ ವಿಕ್ರಮಾದಿತ್ಯನ ಪಟ್ಟದರಸಿ ಲೋಕಮಹಾದೇವಿಯು ಕಟ್ಟಿಸಿದಳೆಂದು ಅಲ್ಲಿ ದೊರೆತಿರುವ ಶಾಸನದಿಂದ ತಿಳಿದು ಬರುತ್ತದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ಪ್ರದಕ್ಷಿಣಪಥ, ದೊಡ್ಡ ಸಭಾಮಂಟಪ, ಮೂರು ಕಡೆಯಿಂದಲೂ ಬಾಗಿಲು ಮತ್ತು ಅವುಗಳ ಮುಂದೆ ಅರ್ಧಮಂಟಪಗಳಿಂದ ಕೂಡಿದೆ. ಜಾಲಂಧ್ರಗಳು ಉಪದೇವತೆಗಳ ಸಣ್ಣಗುಡಿಗಳು, ಕಪೋತಕೂಟ, ಶಿಲ್ಪಭಿತ್ತಿ ಮೊದಲಾದವುಗಳಿಂದ ಕೂಡಿದ ಈ ದೇವಾಲಯವು ಭವ್ಯವಾಗಿದೆ. ವಿರೂಪಾಕ್ಷ ದೇವಾಲಯವು ವಾಸು ದೃಷ್ಟಿಯಿಂದ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದ ಗುಡಿಗಳಲ್ಲಿ ಶ್ರೇಷ್ಠತಮವೆಂದು ಪರಿಗಣಿತವಾಗಿದೆ.

ಬಾದಾಮಿ ಚಾಳುಕ್ಯರ ಶಿಲ್ಪಕೌಶಲವು ಪ್ರಸಿದ್ಧವಾದುದ್ದು. ಆ ಕಾಲದ ಶಿಲ್ಪಗಳು ಹೆಚ್ಚು ಮಟ್ಟಿಗೆ ಧಾರ್ಮಿಕವಾದವು. ಗುಹಾಲಯಗಳು ಮತ್ತು ಗುಡಿಗಳ ಗೋಡೆಗಳ ಮತ್ತು ಕಂಬಗಳ ಮೇಲೆ ಶಿಲ್ಪಗಳನ್ನು ಕೆತ್ತಲಾಗಿದೆ. ಹಲವು ಅಂಗುಲಗಳಷ್ಟು ಉದ್ದಗಲದಿಂದ ಎಂಟು ಹತ್ತು ಅಡಿಗಳಷ್ಟು ಎತ್ತರವಾದ ಶಿಲ್ಪಗಳನ್ನು ಕೆತ್ತಲಾಗಿದೆ. ಶಿವ, ವಿಷ್ಣು, ಬ್ರಹ್ಮ, ಗಣಪತಿ, ಕುಮಾರ, ಸಮುದ್ರ ಮಥನ, ದುರ್ಗ, ಸಪ್ತಮಾತೃಕೆಯರು, ನರಸಿಂಹ, ವರಹ, ದಿಕ್ಪಾಲಕರು, ಯಕ್ಷ ಗಂಧರ್ವ, ಕಿನ್ನರ ಮುಂತಾದ ದೇವತೆಗಳ ಮೂರ್ತಿಗಳನ್ನು ಬಿಡಿಸಲಾಗಿದೆ. ಜೈನ ಮತ್ತು ಬೌದ್ಧ ವಾಸ್ತು ಕೃತಿಗಳಲ್ಲಿ ಆ ಧರ್ಮಗಳಿಗೆ ಸಂಬಂಧಿಸಿದ ಮೂರ್ತಿಗಳನ್ನು ಕೆತ್ತಲಾಗಿದೆ. ರಾಮಾಯಣ, ಮಹಾಭಾರತ ಮತ್ತು ಭಾಗವತಕ್ಕೆ ಸಂಬಂಧಿಸಿದ ಕಥಾ ನಿರೂಪಣೆ ಮತ್ತು ಘಟನಾವಳಿಗಳನ್ನು

ಶಿಲ್ಪಕ್ಕೆ ಅಳವಡಿಸಲಾಗಿದೆ. ಹಲವು ಸುಂದರ ಸ್ತ್ರೀ ವಿಗ್ರಹಗಳೂ ಹಾಗು ಮಿಥುನ ಶಿಲ್ಪಗಳನ್ನೂ ಕಡೆಯಲಾಗಿದೆ. ಶಿಲ್ಪಗಳಲ್ಲಿ ಸರಳತೆ ಮತ್ತು ಸಹಜತೆಯನ್ನು ಮೂಡಿಸಲಾಗಿದೆ.

ಶಾತವಾಹನರ ಕಾಲದ ಚಿತ್ರಕಲೆಯ ಬಾದಾಮಿ ಚಾಳುಕ್ಯರ ಕಾಲದವರೆಗೂ ಮುಂದುವರಿಯಿತೆಂದು ತಿಳಿದು ಬಂದಿದೆ. ಬಾದಾಮಿಯ ಗುಹೆಯೊಂದರ ಚಿತ್ರ ಕಲೆಯ ಅವಶೇಷಗಳನ್ನು ಗುರುತಿಸಲಾಗಿದೆ. ಕ್ರಿ.ಶ. 578 ರಲ್ಲಿ ನಿರ್ಮಿತವಾದ ಈ ಗುಹೆಯು ಪ್ರಾರಂಭದಲ್ಲಿ ಪೂರ್ಣವಾಗಿ ಚಿತ್ರಾಲಂಕೃತವಾಗಿತ್ತೆಂದು ತೋರುತ್ತದೆ. ಈ ಚಿತ್ರಕಲೆಯು ಅಜಂತಾ ಚಿತ್ರಕತೆಯನ್ನೇ ಹೋಲುತ್ತದೆ. ರಾಜರಾಣಿಯರು ತಮ್ಮ ಪರಿವಾರದೊಡನೆ ಆಸ್ಥಾನದಲ್ಲಿ ನೃತ್ಯ ವೀಕ್ಷಣೆ ಮಾಡುವ ಹಾಗೂ ಇಂದ್ರ ಸಭ ಮುಂತಾದ ಚಿತ್ರಗಳನ್ನು ಬಿಡಿಸಲಾಗಿತ್ತು. ಅಜಂತ ಗುಹಾಲಯವೊಂದರಲ್ಲಿ ಪುಲಿಕೇಶಿಯ ಆ ಸ್ಥಾನ ಹಾಗೂ ಪರ್ಷಿಯಾದ ಇಮ್ಮಡಿ ಖುಸ್ರುವಿನ ರಾಯಭಾರಿಗಳು ಪರಿಚಯ ಪತ್ರವನ್ನರ್ಪಿಸುವ ದೃಶ್ಯವನ್ನು ಚಿತ್ರೀಕರಿಸಲಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ.

## 11.6 ಸಾರಾಂಶ

ಈ ಘಟಕದಡಿಯಲ್ಲಿ ಆಡಳಿತ ವ್ಯವಸ್ಥೆ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ, ಧರ್ಮ ಮತ್ತು ಸಾಹಿತ್ಯ ಕಲೆ ಮತ್ತು ವಾಸ್ತು ಶಿಲ್ಪದ ಬೆಳವಣಿಗೆ ಮುಂತಾದ ವಿಷಯಗಳನ್ನು ನಿಮಗೆ ಮನದಟ್ಟು ಮಾಡಿಕೊಡಲು ಪ್ರಯತ್ನಿಸಿದ್ದೇವೆ. ಬಾದಾಮಿ ಚಾಳುಕ್ಯರ ರಾಜಕೀಯ ಮತ್ತು ಆಡಳಿತಾತ್ಮಕ ಆದರ್ಶ ಉತ್ತರ ಭಾರತದಲ್ಲಿದ್ದ ವೈದಿಕ ಮಾದರಿಯಲ್ಲಿ ಸಮಾಜ ಮತ್ತು ಸಂಸ್ಕೃತಿಯನ್ನು ರೂಪಿಸುವುದು ಬಾದಾಮಿ ಅರಸರ ಮುಖ್ಯ ಧ್ಯೇಯ ಮತ್ತು ಆದರ್ಶಗಳಾಗಿದ್ದವುವೆಂಬ ಅಂಶವನ್ನು ಅವರ ಶಾಸನಗಳು ನಿರೂಪಿಸುತ್ತವೆಂಬ ಅಂಶವನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಅವರ ಆಡಳಿತ ವ್ಯವಸ್ಥೆಯ ಸಂಸ್ಕೃತಿಯು ಪ್ರಾಚೀನ ಭಾರತದ ದಾರ್ಶನಿಕರ ಅಪೇಕ್ಷೆಗನುಗುಣವಾಗಿ ವರ್ಣಧರ್ಮವನ್ನು ಅನುಷ್ಠಾನಗೊಳಿಸಲು ಬಾದಾಮಿ ಚಾಳುಕ್ಯ ಅರಸರು ಶ್ರಮಿಸಿರುವುದನ್ನು ಅವರ ಶಾಸನಗಳಲ್ಲಿ ಗಮನಿಸಬಹುದು.

ಇವರ ಆಡಳಿತ ನೀತಿ ಉದಾರತೆ ನಿಲುವನ್ನು ಹೊಂದಿದ್ದರಿಂದ ವೈದಿಕ, ಜೈನ, ಬೌದ್ಧ ಸಂಪ್ರದಾಯಗಳು ಅವರ ರಾಜ್ಯಾದ್ಯಾಂತ ಉರ್ಜಿತಗೊಳ್ಳಲು ಸಹಕಾರಿಯಾಗಿದ್ದಿತ್ತೆಂಬುದನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಧಾರ್ಮಿಕ ಕ್ಷೇತ್ರದಲ್ಲದೆ, ಸಾಹಿತ್ಯ ಕಲಾ ಕ್ಷೇತ್ರದಲ್ಲಿ ವಿಶಿಷ್ಟ ಕೊಡುಗೆಗಳನ್ನು ನೀಡಿದ್ದಾನೆ. ವೇಸಾರವೆಂಬ ಕಲಾ ಸಂಪ್ರದಾಯವನ್ನು ರೂಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ದಕ್ಷಿಣ ಮತ್ತು ಉತ್ತರದ ಸಂಸ್ಕೃತಿಯ ಸಂಗಮವನ್ನು ಇವರ ಕಲೆ, ಧರ್ಮ, ಸಾಹಿತ್ಯಗಳಲ್ಲಿ ಕಾಣಬಹುದು.

## 11.7 ಸ್ವಪರೀಕ್ಷೆ ಪ್ರಶ್ನೆಗಳು

1) ಬಾದಾಮಿ ಚಾಳುಕ್ಯರ ಸಾಂಸ್ಕೃತಿಕ ಕೊಡುಗೆಗಳನ್ನು ವಿವರಿಸಿ
2) ಬಾದಾಮಿ ಚಾಳುಕ್ಯರ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯನ್ನು ಚಿತ್ರಿಸಿ
3) ದಖನ್ ಪ್ರಸ್ಥಭೂಮಿಯಲ್ಲಿ ಬಾದಾಮಿ ಚಾಳುಕ್ಯರು ಶಾತವಾಹನರ ಪರಂಪರೆಯನ್ನು ಹೇಗೆ ಮುಂದುವರಿಸಿದರೆಂಬ ವಿಷಯವನ್ನು ಕುರಿತು ಚರ್ಚಿಸಿ.
4) ಬಾದಾಮಿ ಚಾಳುಕ್ಯರ ಕಾಲದಲ್ಲಿ ವೆದಿಕ ಮತ್ತು ಜೈನ ಸಂಸ್ಕೃತಿಗಳ ವಿಕಾಸವನ್ನು ಕುರಿತು ಚರ್ಚಿಸಿ.
5) ವೈದಿಕ ಸಂಸ್ಕೃತಿಯ ಬೆಳವಣಿಗೆಗೆ ಬಾದಾಮಿ ಚಾಳುಕ್ಯರ ಕೊಡುಗೆಗಳನ್ನು ವಿವರಿಸಿ.
6) ಜೈನ ಸಂಸ್ಕೃತಿಯ ಬೆಳವಣಿಗೆಗೆ ಬಾದಾಮಿ ಚಾಳುಕ್ಯ ಅರಸರ ಕೊಡುಗೆಗಳನ್ನು ತಿಳಿಸಿ.

## 11.8 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1. Yazdani G. : Early History of the Deccan
2. Diwakar R.R. : Karnataka through the Ages
3. Desai P.B. : A History of Karnataka
4. Mahalingam T.V. : South Indian Polity
5. Karashima : South Indian History and Society
6. ರಂಗಸ್ವಾಮಯ್ಯ ಜಿ.ಆರ್. : ಸಂಕ್ಷಿಪ್ತ ಕರ್ನಾಟಕದ ಚರಿತ್ರೆ
7. Bharatiya Vidya Bhavan Series : The Classical Age Vol-III
8. Nilakanta Sastry K.A. : A History of South India
9. Narayanan M.G.S. : Re-Interpretations in South Indian History
10. Burton Stein : Peasant State and Society in Medival South India
11. Surendra Rao (ed) : ಕರ್ನಾಟಕ ಚರಿತ್ರೆ ಸಂ.2, ಕನ್ನಡ ವಿಶ್ವವಿದ್ಯಾನಿಲಯ, ಹಂಪೆ
12. ಈರಣ್ಣ ಕೆ.ಪಿ. : ಬಾದಾಮಿ ಚಾಲುಕ್ಯರ ಸಾಂಸ್ಕೃತಿಕ ಪರಂಪರೆ ಮನು ಸಾಹಿತ್ಯ ಪ್ರಕಾಶನ, ವಿಜಯಾನಂದ ನಗರ, ಧಾರವಾಡ -1.



**ಪ್ರೊ|| ಮಾದೇಗೌಡ**

# NOTES

# NOTES


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4–060/2013–2014 ದಿನಾಂಕ : 24–09–2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ● **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✢ **M.Ed Study Centres : 06**


Feedback : improvement, revision and launching of new programmes
Multimedia learning material
Academic and other support
Evaluation - methods and means
STUDENT
INSTRUCTIONAL SYSTEM